# ಯುಗಧ್ವನಿ

- ಭಾರತದ ಪ್ರವಾದಿಗಳು
- ಯೇಸು ಕಾಶ್ಮೀರದಲ್ಲಿ
- ಹಿಜರಿ ಹದಿನಾಲ್ಕನೆ ಶತಮಾನದ ಕೊನೆ
- ಮುಲ್ಲಾ ಮೌದೂದಿ
- ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ
ಮಾರ್ಚ್ 1970
ಅಮಾನ್ 1359
ಬೆಲೆ: ರೂ 1-00

ಕರ್ಮದಲ್ಲಿ ಯಾರು ಉತ್ತಮರೆಂದು ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಪರಮಾತ್ಮನು ಮರಣವನ್ನೂ ಜೀವಿತವನ್ನೂ ಸೃಷ್ಟಿಸಿದ್ದಾನೆ; ಅವನು ಪ್ರತಾಪಶಾಲಿಯೂ ಕ್ಷಮಾಶೀಲನೂ ಆಗಿದ್ದಾನೆ.

—ಪವಿತ್ರ ಖುರ್‌ಆನ್ (67:3)

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575 001.

ಸಂಪುಟ: 5 ಮಾರ್ಚ್ 1980 / ಅಮಾನ್ 1359 ಸಂಚಿಕೆ: 4

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

ವಿಷಯ ಸೂಚಿಕೆ: ಪುಟ


* ದಾನಮಾಡಿ ಪ್ರತಿಫಲ ಪಡೆಯಿರಿ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಭಾರತದ ಪ್ರವಾದಿಗಳು ... 3
* ಯೇಸು ಕಾಶ್ಮೀರದಲ್ಲಿ ... 9
* ಹಿಜರಿ ಶತಮಾನದ ಕೊನೆ–ಮುಸಲ್ಮಾನರಿಗೆ ಚಿಂತಾರ್ಹವಾದ ಸಂಗತಿ ... 14
* ಅಹ್ಮದಿಯಾ ವಾರ್ತೆಗಳು ... 22
* ಸಂಪಾದಕರಿಗೆ ಪತ್ರ ... 24
* ಪುಸ್ತಕ ವಿಭಾಗ – ಇಸ್ಲಾಂ ಮತ ತತ್ತ್ವಜ್ಞಾನ.



## Ahmadiyya English Literature

1 THE TEACHINGS OF ISLAM 6—00
By Hazrat Mirza Ghulam Ahmad

2 JESUS IN INDIA 2—25
By Hazrat Mirza Ghulam Ahmad

3 CHARACTERISTICS OF THE QURANIC TEACHINGS 1—00
By Hazrat Mirza Bashiruddin Mahmud Ahmad

4 THE HOLY PROPHET MUHAMMAD 1—50
By Hazrat Mirza Bashiruddin Mahmud Ahmad

5 WHERE DID JESUS DIE? 2—25
By J. D. Shams, Ex-Imam, London Mosque

6 THE TOMB OF JESUS 0—75
By Sufi M. R. Bengali

7 THE CHRISTIAN DOCTRINE OF ATONEMENT 1—50
By Dr. Mufti Muhammad Sadiq, D.D., LL.D., S.S.P. (London.)

Write to:

**NAZIR DAWAT -O-TABLIGH, QADIAN - 143516 (Punjab)**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

| ಸಂಪುಟ: 5 | ಜನವರಿ–ಮಾರ್ಚ್ 1980 / ಸುಲ್ಹ್–ಅಮಾನ್ 1359 | ಸಂಚಿಕೆ: 4 |
|---|---|---|

## ದಾನಮಾಡಿ ಪ್ರತಿಫಲ ಪಡೆಯಿರಿ

"ಎಲೈ ಜನರೇ, ಬಗೆಬಗೆಯ ವಸ್ತುಗಳಲ್ಲೂ ಧನದಲ್ಲೂ ನಿಮಗೆ ಸುಖವನ್ನು ಕಾಣಲು ಸಾಧ್ಯವಿಲ್ಲ. ಆದರೆ, ಬಡವರಿಗೂ ದರಿದ್ರರಿಗೂ ಸಹಾಯ ನೀಡಿ ಅವರನ್ನು ರಕ್ಷಿಸುವವನಿಗೆ ಸುಖಪ್ರಾಪ್ತಿಯಾಗುವುದು. ನಿರಾಶ್ರಿತರ ಸಹಾಯಿಗೆ ದೇವನು ನೆರವಾಗುವನು; ದುರ್ಬಲರನ್ನು ರಕ್ಷಿಸುವವನು ಸ್ವರ್ಗದಲ್ಲಿ ರಕ್ಷಿಸಲ್ಪಡುವನು; ಅವನು ಅರಕ್ಷಿತನಾಗಿರುವಾಗ ದೇವನು ಅವನನ್ನು ಕಾಪಾಡುವನು; ಅವನು ತನ್ನ ಶತ್ರುಗಳ ಕುರಿತು ನೆನೆಸದಿರುವಾಗ ದೇವನು ಅವನಿಗಾಗಿ ಹೋರಾಡುವನು. ಏಕೆಂದರೆ, ಅವನು ತನ್ನ ಅಲ್ಪವಾದ ಆಸ್ತಿಯಿಂದ ದೇವನ ಬಡಸೃಷ್ಟಿಗಳಿಗೆ ಸಹಾಯವನ್ನಿತ್ತು ಅವರನ್ನು ನಾಶದಿಂದ ರಕ್ಷಿಸಿದ್ದಾನೆ. ಹಾಗಿರುವಾಗ, ಮಿತಿಯಿಲ್ಲದ ಭಂಡಾರಗಳ ಒಡೆಯನಾದ ದೇವನು ಅವನೊಡನೆ ಜಿಪುಣತೆ ತೋರಿಸಿ ತನ್ನ ಐಶ್ವರ್ಯಗಳಿಂದ ಅವನನ್ನು ಹೊರಕ್ಕಟ್ಟುವನೇ ?

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಒಬ್ಬನು ತನ್ನ ತಪ್ಪನ್ನು ಒಪ್ಪಿಕೊಂಡು ತನ್ನ ಸಹೋದರನಿಂದ ಕ್ಷಮೆ ಕೋರುವಾಗ ಅದನ್ನು ಅಂಗೀಕರಿಸಲು ಸಿದ್ಧನಿಲ್ಲದವನು ತಪ್ಪುಗಾರನಾಗುತ್ತಾನೆ.

2. ಒಳಿತಿಗಾಗಿ ಪ್ರಯತ್ನಿಸಿ ಕೆಡುಕಿನಿಂದ ದೂರ ವಿದ್ದುಕೊಳ್ಳಿರಿ. ನೀವು ಒಂದು ಕೂಟಕ್ಕೆ ಹೋದರೆ ನಿಮ್ಮ ಕುರಿತು ನೀವು ಶ್ರವಿಸಲು ಇಷ್ಟಪಡುವಂತಹ ಸಂಗತಿಯನ್ನು ನೀವು ಇತರರ ಕುರಿತು ಹೇಳಿರಿ. ನಿಮ್ಮ ಕುರಿತು ಹೇಳುವಾಗ ನಿಮಗೆ ಇಷ್ಟಕರವಲ್ಲವೆಂದು ತೋರುವ ಸಂಗತಿಯನ್ನು ಇತರರ ಕುರಿತು ಹೇಳ ಬೇಡಿರಿ.

3. ವಾಗ್ದಾನವನ್ನು ನೆರವೇರಿಸುವುದು ಸತ್ಯ ವಿಶ್ವಾಸದ ಭಾಗವಾಗಿದೆ.

4. ನಿನ್ನ ಸಹೋದರನ ವಿರುದ್ಧ ಸ್ಪರ್ಧಿಸಬೇಡ; ಅವನನ್ನು ಅಪಹಾಸ್ಯಮಾಡುವ ನಗೆಚಾಟಿಕೆ ಹಾರಿಸ ಬೇಡ. ನಿನ್ನಿಂದ ನೆರವೇರಿಸಲಸಾಧ್ಯವಾದ ವಚನವನ್ನು ಅವನಿಗೀಯಬೇಡ.

5. ಪ್ರಾರ್ಥನೆ ಆರಾಧನೆಯ ಸತ್ತ್ವವಾಗಿದೆ.

6. ಪ್ರಾರ್ಥನೆ ದೌರ್ಭಾಗ್ಯವನ್ನು ದೂರೀಕರಿಸುತ್ತದೆ.

7. ಪ್ರಾರ್ಥನೆ ಸ್ವೀಕರಿಸಲ್ಪಡುವುದೆಂಬ ಪೂರ್ಣ ವಿಶ್ವಾಸದಿಂದ ಪ್ರಾರ್ಥಿಸಿರಿ. ಅಶ್ರದ್ಧೆ ಮತ್ತು ಅಲಕ್ಷ್ಯ ಭಾವದ ಹೃದಯದಿಂದ ಹೊರಡುವ ಪ್ರಾರ್ಥನೆ ಅಲ್ಲಾಹನಿಂದ ಸ್ವೀಕರಿಸಲ್ಪಡಲಾರದೆಂದು ನೆನಪಿಟ್ಟುಕೊಳ್ಳಿರಿ.

8. ಜನರ ಕುರಿತು ಒಳ್ಳೆಯ ವಿಚಾರ ಚಿಂತಿಸುವುದು ಆರಾಧನೆಯಾಗಿದೆ.

9. ವಿಶ್ವಾಸಘಾತಕ ಮಾಡಬಾರದು; ಯುದ್ಧದಲ್ಲಿ ಮೃತಪಟ್ಟ ಶತ್ರುವಿನ ಮುಖವನ್ನು ವಿಕೃತ ಮಾಡಬಾರದು; ಮಗುವನ್ನು ಕೊಲ್ಲಬಾರದು.

10. ಯುದ್ಧದಲ್ಲಿ ಸ್ತ್ರೀಯನ್ನಾಗಲಿ ಶ್ರಮಜೀವಿಯನ್ನಾಗಲಿ ಕೊಲ್ಲಬಾರದು.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of The Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)

---


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"..... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI, Kannada Quarterly,
23/1008, Ansari Road, Bunder, Mangalore-575 001.

# ಭಾರತದ ಪ್ರವಾದಿಗಳು

ಎನ್. ಹಾಮಿದ್

ಸರ್ವಲೋಕ ರಕ್ಷಕನಾದ ಪರಮಾತ್ಮನು ಭೌತಿಕವಾದ ಅನುಗ್ರಹಗಳನ್ನು ನೀಡುವ ವಿಷಯದಲ್ಲಿ ಯಾವುದಾದರೊಂದು ಜಾತಿಯವರನ್ನಾಗಲಿ ರಾಜ್ಯದವರನ್ನಾಗಲಿ ಪ್ರತ್ಯೇಕಿಸಲಿಲ್ಲವೆಂದು ನಮಗೆ ಕಾಣಬಹುದು. ಅವನು ಯೂರೋಪಿನ ಜನರಿಗೆಂಬಂತೆಯೇ ಏಷ್ಯಾದವರಿಗೂ ಅಮೇರಿಕದವರಿಗೂ ದ್ವೀಪ ನಿವಾಸಿಗಳಿಗೂ ಭೌತಿಕಾನುಗ್ರಹಗಳನ್ನು ಬೇಕಾದಷ್ಟು ನೀಡಿರುವನು. ಅವನು ಅರಬಿಯರನ್ನು ಸಂರಕ್ಷಿಸುವಂತೆಯೇ ಚೀನಾದವರ, ಜಪಾನಿಯರ, ಪರ್ಶಿಯಾದವರ, ತುರ್ಕಿಸ್ತಾನದವರ ರಕ್ಷಣೆಗೂ ಬೇಕಾದೆಲ್ಲ ಪ್ರದಾನ ಮಾಡಿರುವನು. ಹಾಗೆಯೇ ಅವನು ಭಾರತೀಯರಿಗೂ ಅವರ ಭೌತಿಕ ಆವಶ್ಯಕತೆಗಳಿಗೆ ಬೇಕಾದೆಲ್ಲ ನೀಡಿರುವನು. ಹೀಗೆ ಆ ಸರ್ವದಾತ ಎಲ್ಲಾ ರಾಜ್ಯದವರಿಗೂ ಅವರ ಭೌತಿಕ ಜೀವಿತಕ್ಕೆ ಅತ್ಯಾವಶ್ಯಕವಾದ ಸಕಲವನ್ನೂ ಕೊಟ್ಟಿರುವಂತೆಯೇ ಅವರ ಆತ್ಮೋನ್ನತಿಗಾಗಿ ಬೇಕಾದ ಏರ್ಪಾಡುಗಳನ್ನೂ ಅವನು ಮಾಡಿರಬೇಕು. ಹಾಗೆ ಅವನು ಮಾಡಿಕೊಡಲಿಲ್ಲವೆಂದು ಊಹಿಸುವುದು ಅವನ ಸರ್ವವ್ಯಾಪಕವಾದ ಕೃಪಾಪರಿಪಾಲನೆಗೆ ಕಳಂಕಕರವಾಗಿದೆ. ಆ ಲೋಕೈಕಪಾಲಕನು ಇತರೆಲ್ಲಾ ಜಾತಿಯವರಿಗೆಂಬಂತೆಯೇ ಭಾರತದ ಜಾತಿಯವರಿಗೂ ಆತ್ಮಚೈತನ್ಯ ಮತ್ತು ದೈವ ಪ್ರಾಪ್ತಿಯ ತೃಷ್ಣೆಯನ್ನು ನೀಡಿರುವಾಗ, ಅವರ ಅಧ್ಯಾತ್ಮ ಪರಿಪೋಷಣೆಗೆ ಅವನು ಯಾವ ಏರ್ಪಾಡನ್ನೂ ಮಾಡಲಿಲ್ಲವೆಂದು ಭಾವಿಸುವುದು, ಅವರು ನಾಶಗೊಳ್ಳಲು ಅವನು ಒಪ್ಪಿಕೊಂಡನೆಂದು ಹೇಳುವುದಕ್ಕೆ ತುಲ್ಯವಾಗಿದೆ. ಅದು ಆ ಕರುಣಾವಂತನೂ ಕೃಪಾನಿಧಿಯೂ ನ್ಯಾಯವಂತನೂ ಆದ ದೇವನ ಮಹಾತ್ಮೆಗೆ ಅನುಯೋಜ್ಯವಲ್ಲ. ಅವನು ಇತರ ರಾಜ್ಯದವರಿಗೆ ತನ್ನ ಅಮೃತ ಭಾಷಣ ನೀಡಿ ಅವರನ್ನು ಅನುಗ್ರಹಿಸಿದ್ದರೆ, ಅದೇ ಪ್ರಕಾರವೇ ಅವನು ಈ ಅನುಗ್ರಹವನ್ನು ಭಾರತೀಯರಿಗೂ ನೀಡಿರಬೇಕು. ಇದು ಪರಮಾತ್ಮನ ಕೃಪಾತಿರೇಕದ ಕುರಿತು ಚಿಂತಿಸುವಾಗ ನಮಗೆ ಉಂಟಾಗುವ ಅನುಮಾನವಾಗಿದೆ. ಈ ವಿಚಾರವನ್ನು ಇಸ್ಲಾಮಿನ ಪ್ರಮಾಣ ಗ್ರಂಥವಾದ ಪವಿತ್ರ ಖುರ್‌ಆನ್ ದೃಢಪಡಿಸುತ್ತದೆ.

ಪರಮಾತ್ಮನು ಆಧ್ಯಾತ್ಮಿಕ ಅನುಗ್ರಹಗಳನ್ನು ಪ್ರದಾನ ಮಾಡುವ ವಿಷಯದಲ್ಲಿ ಯಾವುದಾದರೊಂದು ಜಾತಿಯನ್ನಾಗಲಿ ರಾಜ್ಯವನ್ನಾಗಲಿ ಪ್ರತ್ಯೇಕಿಸಿಡಲಿಲ್ಲವೆಂಬ ನಿಜಾಂಶವನ್ನು ಖುರ್‌ಆನಿನ ಪ್ರಥಮಾಧ್ಯಾಯದಲ್ಲೇ ಘೋಷಿಸಲಾಗಿದೆ. "ಸರ್ವ ಸ್ತೋತ್ರಗಳು ಸರ್ವಲೋಕ ರಕ್ಷಕನೂ ಪಾಲಕನೂ ಆದ ಪರಮಾತ್ಮನಿಗೆ" ಎಂಬ ವಾಕ್ಯದ ಮೂಲಕ ಇಸ್ಲಾಂ ಈ ಪಾಠವನ್ನು ನೀಡಿರುತ್ತದೆ. ಇದರಿಂದ, ಪರಮಾತ್ಮನು ಭೌತಿಕಾನುಗ್ರಹಗಳನ್ನೀಯುವ ವಿಚಾರದಲ್ಲಿ ಯಾವುದೇ ಜಾತಿಯನ್ನು ಪ್ರತ್ಯೇಕಿಸಿಡದ ಪ್ರಕಾರ ಆಧ್ಯಾತ್ಮಿಕ ಅನುಗ್ರಹಗಳನ್ನು ಕೆಲವು ಜಾತಿಗಳಿಗೆ ಅಥವಾ ಕೆಲವು ರಾಜ್ಯಗಳಿಗೆ ಮಾತ್ರ ಸೀಮಿತಗೊಳಿಸಲಿಲ್ಲವೆಂದು ತಿಳಿದು ಬರುತ್ತದೆ. ಈ ವಾಕ್ಯದ ವ್ಯಾಖ್ಯಾನವಾಗಿ ಖುರ್‌ಆನ್ ಹಲವೆಡೆಗಳಲ್ಲಿ ಲೋಕದಲ್ಲಿರುವ ಎಲ್ಲಾ ಜಾತಿಯವರೆಡೆಯಲ್ಲೂ ಪರಮಾತ್ಮನು ಸನ್ಮಾರ್ಗವನ್ನು ಪ್ರಬೋಧಿಸುವರೆ ಪ್ರವಾದಿಗಳನ್ನು ನಿಯೋಗಿಸಿದ್ದಾನೆಂದೂ ಅವರನ್ನೆಲ್ಲಾ ಮುಸ್ಲಿಮರು ನಂಬಬೇಕಾಗಿದೆಯೆಂದೂ ಉಪದೇಶಿಸಿದೆ. ಜಾತೀಯ ಅಭಿಮಾನ ಮತ್ತು ದೇಶೀಯ ಪಕ್ಷಪಾತ ಪರಾಕಾಷ್ಠೆಯನ್ನು ತಲಪಿ ಒಂದು ರಾಜ್ಯದವರು ಮತ್ತೊಂದು ರಾಜ್ಯದವರೆಡೆಯಲ್ಲಿ ಪ್ರವಾದಿಯ ಆವಿರ್ಭಾವಕ್ಕೆ ಸಂಬಂಧಿಸಿ ಏನನ್ನೂ ತಿಳಿಯುವರೆ ಅಸಾಧ್ಯವಾದ ಕಾಲಘಟ್ಟದಲ್ಲಿ ಇಸ್ಲಾಂ ಈ ರೀತಿ ಘೋಷಿಸಿತು. ಬಹಳ ಸ್ಪಷ್ಟವಾದ ಭಾಷೆಯಲ್ಲಿ ಖುರ್‌ಆನ್ ಪ್ರವಾದಿ ನಿಯೋಗದ ಕುರಿತು ಹೇಳುತ್ತದೆ: "ಒಬ್ಬ ಉಪದೇಶಕ ಆಗಮಿಸದ ಯಾವುದೇ ಜನಾಂಗವಿಲ್ಲ (35:25). "ಏಕದೇವನಿಗೆ ಶಿರಬಾಗಿ ಪೈಶಾಚಿಕವನ್ನು ದೂರೀಕರಿಸಿರಿ ಎಂಬ ಉಪದೇಶ ಸಹಿತ ನಾವು ಎಲ್ಲಾ ಸಮುದಾಯದಲ್ಲೂ ಪ್ರವಾದಿಯನ್ನು ನಿಯೋಗಿಸಿದ್ದೇವೆ". (16:37) "ಎಲ್ಲಾ ಜನಾಂಗದಲ್ಲೂ ಪ್ರವಾದಿಯ ಆಗಮನವಾಗಿದೆ" (10:48). ಈ ವಾಕ್ಯಗಳಿಂದ ಸಕಲ ಜಾತಿಗಳೆ

ಡೆಯಲ್ಲಿ ಅವರ ಆತ್ಮೋನ್ನತಿಗಾಗಿ ಪರಮಾತ್ಮನಿಂದ ಮಾರ್ಗದರ್ಶಕರಾದ ಪ್ರವಾದಿಗಳು ಬಂದಿದ್ದರೆಂದು ಸ್ಪಷ್ಟವಾಗುತ್ತದೆ.

ಎಲ್ಲಾ ಧರ್ಮಾನುಯಾಯಿಗಳು ಸಮ್ಮತಿಸುವ ದೇವನು ಸರ್ವಸೃಷ್ಟಿಕರ್ತನೂ ಪಾಲಕನೂ ಎಂಬ ವಿಶೇಣಕ್ಕೆ ಇಸ್ಲಾಂ ಮೇಲೆ ಪ್ರಸ್ತಾವಿಸಿದ ರೀತಿಯಲ್ಲಿ ವ್ಯಾಖ್ಯಾನ ನೀಡಿ ಲೋಕದಲ್ಲಿ ನವೀನವಾದೊಂದು ಸತ್ಯವನ್ನು ಬಹಿರಂಗಪಡಿಸಿ ಸಾರ್ವತ್ರಿಕವಾದ ಮನುಷ್ಯ ಸೋದರತೆಗೆ ತಳಪಾಯ ಹಾಕಿತು. ವಿವಿಧ ಜಾತಿಗಳೆಡೆಯಲ್ಲಿ ವಿಶಾಲ ಮನೋಭಾವವನ್ನೂ ಮತ ಸಹಿಷ್ಣುತಾ ಭಾವವನ್ನೂ ಉಂಟುಮಾಡಿ, ಯಾವುದಾದರೊಂದು ಜನಾಂಗ ಮಾತ್ರವೇ ಪರಮಾತ್ಮನ ವಚನದಿಂದ ಅನುಗ್ರಹೀತವಾಗಿದೆಯೆಂಬ ವಿಶ್ವಾಸದಿಂದ ಉಂಟಾಗಲೆಡೆಯಿರುವ ಛಿದ್ರತೆಗಳನ್ನೂ ಕಲಹಗಳನ್ನೂ ಇಲ್ಲದಂತೆ ಮಾಡುವುದು ಸಹ ಇಸ್ಲಾಮಿನ ಉದ್ದೇಶವಾಗಿದೆ. ಈ ಉದ್ದೇಶ ಸಾಧಿತವಾಗಬೇಕಾದರೆ ಪ್ರತಿಯೊಬ್ಬ ಮುಸ್ಲಿಮನೂ ಸಕಲ ಜಾತಿ ಮತಸ್ಥರೆಡೆಯಲ್ಲಿ ಆಗಮಿಸಿದ ಪ್ರವಾದಿಗಳನ್ನೂ ಅವರ ಮತಗ್ರಂಥಗಳನ್ನೂ ಗೌರವಿಸಬೇಕೆಂದು ಅದು ಕಲಿಸುತ್ತದೆ. ವಿವಿಧ ಸಮುದಾಯಗಳೆಡೆಯಲ್ಲಿರುವ ಜಾತೀಯ ವಿದ್ವೇಷವನ್ನು ದೂರೀಕರಿಸಲು ಪರಿಹಾರೋಪಾಯ ಇದೊಂದೇ ಆಗಿದೆ. ಮುಸ್ಲಿಮರಂತೆ ಇತರ ಮತಸ್ಥರು ಸಹ ಎಲ್ಲಾ ಮತಗ್ರಂಥಗಳನ್ನೂ ಆದರಿಸಲು ತೊಡಗುವ ಪಕ್ಷದಲ್ಲಿ ಇಂದು ನಾವು ಕಾಣುವ ರೀತಿಯ ಜಾತೀಯ ವಿದ್ವೇಷ ಇಲ್ಲದಾಗುವುದು.

ಇಸ್ಲಾಂ ಬೇರೆ ಯಾವ ಮತಾಚಾರ್ಯನನ್ನೂ ಆಕ್ಷೇಪಿಸದ ಪರಿಶುದ್ಧ ಹಾಗು ಶಾಂತಿಯ ಧರ್ಮವಾಗಿದೆ. ಅದು ವಿವಿಧ ಸಮುದಾಯಗಳೆಡೆಯಲ್ಲಿ ಸಮಾಧಾನ ಮತ್ತು ಸೌಹಾರ್ದತೆಯ ತಳಹದಿ ಹಾಕಿ ಸಕಲ ಸಮುದಾಯಗಳ ಪ್ರವಾದಿಗಳನ್ನು ನಂಬಲು ಪ್ರಬೋಧಿಸುತ್ತದೆ. ಲೋಕದಲ್ಲಿ ಆಗಮಿಸಿನ ಎಲ್ಲಾ ಪ್ರವಾದಿಗಳನ್ನು ಸಹ ಯಾವ ವ್ಯತ್ಯಾಸವನ್ನೂ ಕಲ್ಪಿಸದೆ ನಂಬಬೇಕೆಂಬ ವಿಶಾಲ ಮನೋಭಾವವನ್ನು ಬೆಳೆಸುವ ತತ್ವಗಳ ನೆಲೆಗಟ್ಟೆಂಬ ಮಹಾತ್ಮೆ ಇಸ್ಲಾಮಿನ ಪವಿತ್ರ ಗ್ರಂಥವಾದ ಖುರ್‌ಆನಿಗೆ ಮಾತ್ರವಿದೆಯೆಂದು ಹೇಳಿದರೆ ಖಂಡಿಸಲಸಾಧ್ಯ. ಎಲ್ಲಾ ಪ್ರವಾದಿಗಳನ್ನು ನಂಬಲಿಕ್ಕೂ ಅವರ ಪೈಕಿ ಕೆಲವರನ್ನು ನಂಬಿ ಮತ್ತೆ ಕೆಲವರನ್ನು ನಂಬದಿರುವ ರೀತಿಯಲ್ಲಿ ವ್ಯತ್ಯಾಸ ಕಲ್ಪಿಸಬಾರದೆಂದು ಮುಸ್ಲಿಮರಿಗೆ ಖುರ್‌ಆನ್ ಶಾಸಿಸುತ್ತದೆ. (2:137)

ಸರ್ವದಾತನಾದ ಪರಮಾತ್ಮನ ಅನುಗ್ರಹ ಯಾವುದಾದರೂ ಜನಾಂಗಕ್ಕೆ ಮಾತ್ರ ಸೀಮಿತವೆಂದು ಖುರ್‌ಆನ್ ಹೇಳುವುದಿಲ್ಲ. ಇಸ್ರಾಯೀಲ್ ಗೋತ್ರದಲ್ಲಿ ಆಗಮಿಸಿದ ಯಅ್‌ಕೂಬ್, ಇಸ್‌ಹಾಕ್, ಮೂಸಾ, ದಾವೂದ್, ಈಸಾ ಮೊದಲಾದ ಪ್ರವಾದಿಗಳ ದೌತ್ಯವನ್ನು ಅಂಗೀಕರಿಸಿ ಭಾರತದಲ್ಲಿ, ಅಥವಾ ಪರ್ಷಿಯಾದಲ್ಲಿ ಅಥವಾ ಇನ್ನಾವುದೇ ರಾಜ್ಯದಲ್ಲಿ ಆಗಮಿಸಿದ ಯಾವ ಪ್ರವಾದಿಯನ್ನೂ ಮಿಥ್ಯಾವಾದಿಯೆಂದು ಅದು ಹೇಳಲಿಲ್ಲ. ಬದಲಾಗಿ, ಎಲ್ಲಾ ರಾಜ್ಯಗಳಲ್ಲೂ ಜಾತಿಗಳಲ್ಲೂ ಪ್ರವಾದಿಗಳು ನಿಯುಕ್ತರಾಗಿರುವರೆಂದು ಪ್ರಖ್ಯಾಪಿಸಿ ವಿವಿಧ ಸಮುದಾಯಗಳೆಡೆಯಲ್ಲಿ ಸಮಾಧಾನವನ್ನೂ ಸೌಹಾರ್ದತೆಯನ್ನೂ ಬೆಳೆಸಲು ಅಸ್ತಿವಾರವನ್ನು ಅದು ಭದ್ರಪಡಿಸಿದೆ. ಮಾತ್ರವಲ್ಲ, "ನಿನಗೆ ಮೊದಲು ಪ್ರವಾದಿಗಳನ್ನು ವಾವು ಕಳುಹಿಸಿದ್ದೇವೆ; ಅವರ ಪೈಕಿ ಕೆಲವರ ವಿವರ ನಾವು ನಿನಗೆ ತಿಳಿಸಿಕೊಟ್ಟಿರುವೆವು; ಮತ್ತೆ ಕೆಲವರ ಕುರಿತು ವಿವರಿಸಿಕೊಟ್ಟಿಲ್ಲ"-(40:79) ಎಂದೆಲ್ಲಾ ಪ್ರಸ್ತಾಪಿಸುತ್ತಾ ಖುರ್‌ಆನಿನಲ್ಲಿ ಹೆಸರು ಹೇಳಲ್ಪಡದಿದ್ದುದರಿಂದ ಬೇರಾವುದೇ ಜಾತಿಯವರೆಡೆಯಲ್ಲಿ ಬಂದಿರುವ ಪ್ರವಾದಿಗಳ ಕುರಿತು ವಿವರ ಲಭಿಸಿದರೆ ಮುಸ್ಲಿಮರು ಅವರನ್ನು ತಳ್ಳದೆ ಮನ್ನಿಸಬೇಕೆಂದು ಸಹ ಪ್ರಬೋಧಿಸಿದೆ. ಈ ತತ್ವವನ್ನು ಗ್ರಹಿಸಿದ ಆದಿ ಕಾಲದ ಮುಸ್ಲಿಮರಾದ ಮುಹಮ್ಮದ್ ಪೈಗಂಬರರ ಶಿಷ್ಯರಲ್ಲಿ ಓರ್ವ ಒಮ್ಮೆ ಸ್ಪಷ್ಟೀಕರಣಕ್ಕಾಗಿ ಪೈಗಂಬರರೊಡನೆ, ಪಾರ್ಸಿ ಭಾಷೆಯಲ್ಲೂ ಪರಮಾತ್ಮನು ಅವನ ವಚನವನ್ನು ಪ್ರಕಟಿಸಿರುವನೇ ಎಂದು ಪ್ರಶ್ನಿಸಿದರು. ಅದಕ್ಕುತ್ತರವಾಗಿ, "ದಿಟವಾಗಿಯೂ ದೇವನು ಪಾರ್ಸಿ ಭಾಷೆಯಲ್ಲೂ ಒಬ್ಬ ಪ್ರವಾದಿಯೊಂದಿಗೆ ಮಾತನಾಡಿದ್ದಾನೆ" ಎಂದು ಅವರು ಹೇಳಿರುವರೆಂದು ಪೈಗಂಬರರ ವಚನ ಸಂಗ್ರಹ ಗ್ರಂಥಗಳಲ್ಲಿ ಕಂಡು ಬರುತ್ತದೆ. ಮಾತ್ರವಲ್ಲ, ಭಾರತದಲ್ಲೂ ಪ್ರವಾದಿ ನಿಯೋಗ ಉಂಟಾಗಿತ್ತೆಂದು ಪೈಗಂಬರರು ಶಿಷ್ಯರಿಗೆ ಬೋಧಿಸಿದ್ದರು. ಅವರಲ್ಲಿ ಓರ್ವ ಮಹಾನ್ ಪ್ರವಾದಿಯ ವರ್ಣ ಮತ್ತು ಹೆಸರನ್ನು ಸಹ ಪೈಗಂಬರರು ನುಡಿದಿದ್ದರು. ಹೀಗೆ

ಸಕಲ ಜನಾಂಗಗಳಲ್ಲೂ ನಿಯುಕ್ತರಾದ ಪ್ರವಾದಿಗಳ ಮತ್ತು ಮಹಾಪುರುಷರ ಮೇಲೆ ಆದರಭಾವವನ್ನು ಉಂಟುಮಾಡಿದ ಇಸ್ಲಾಂ ಮತ ಸ್ಥಾಪಕರ ಹೆಸರಿನಲ್ಲಿ ಇತರ ಸಮುದಾಯದವರು ಅಕಾರಣವಾಗಿ ಆಕ್ಷೇಪ-ಅಪವಾದಗಳನ್ನು ಹೊರಿಸುವುದು ಅತ್ಯಂತ ಅನೀತಿಯೆಂದು ಹೇಳದೆ ನಿರ್ವಾಹವಿಲ್ಲ.

ಇಸ್ಲಾಮಿನ ಈ ಅಧ್ಯಾಪನವನ್ನನುಸರಿಸಿ ಒಬ್ಬ ಮುಸ್ಲಿಮನಿಗೆ ಅನ್ಯ ಮತಸ್ಥಾಪಕರ ಮತ್ತು ಮತಾಚಾರ್ಯರ ಮೇಲೆ ಗೌರವಾದರಗಳಲ್ಲದೆ ಅನಾದರ ಭಾವ ಉಂಟಾಗಬಾರದು. ಅವನ ದೃಷ್ಟಿಯಲ್ಲಿ ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ ಇವರೆಲ್ಲಾ ಮೋಶೆ, ಯೇಸು ಎಂಬವರ ಹಾಗೆಯೇ ದೇವನ ಪ್ರವಾದಿಗಳಾಗಿದ್ದಾರೆ. ಕೊನೆಗೆ ಹೇಳಿದ ಪ್ರವಾದಿಗಳೀರ್ವರ ಹೆಸರು ಖುರ್‌ಆನ್‌ನಲ್ಲಿ ಹೇಳಲಾಗಿದೆ, ಇತರರ ಹೆಸರು ಹೇಳಲಾಗಿಲ್ಲ ಎಂಬ ಒಂದೇ ವ್ಯತ್ಯಾಸ. ಒಬ್ಬ ಮುಸ್ಲಿಂ ಅವನಿಗೆ ಪರಿಚಯವಿಲ್ಲದ ಒಂದು ಪುರಾತನ ಮತದ ಕುರಿತು ಕೇಳಿದಾಗ ಅಥವಾ ತಾನು ಕೇಳಿರದ ಓರ್ವ ಪ್ರವಾದಿಯ ಕುರಿತು ಹೊಸತಾಗಿ ತಿಳಿದಾಗ, ಮತರಂಗದಲ್ಲಿ ಒಬ್ಬ ಎದುರಾಳಿ ಪ್ರತ್ಯಕ್ಷಗೊಂಡುದಾಗಿ ಭಾವಿಸಿ ಕುಪಿತನಾಗಬೇಕೆಂದಿಲ್ಲ. ಬದಲಾಗಿ, ಆತನು ತನಗೆ ಲಭಿಸಿದ ಈ ತಿಳುವಳಿಕೆಯನ್ನು ಇಸ್ಲಾಂ ಧರ್ಮದ ಸತ್ಯತೆಗೆ ಒಂದು ಹೊಸ ಸಾಕ್ಷ್ಯವಾಗಿಯೂ ಪವಿತ್ರ ಖುರ್‌ಆನಿನಲ್ಲಿ ಒಳಗೊಂಡಿರುವ ತತ್ವಗಳ ಒಂದು ನವ್ಯ ವ್ಯಾಖ್ಯಾನವಾಗಿಯೂ ಸಂತೋಷದಿಂದ ಸ್ವಾಗತಿಸಬೇಕಾಗಿದೆ. ದೇವನು ಸರ್ವಲೋಕಗಳ ರಕ್ಷಕನೂ ಪಾಲಕನೂ ("ರಬ್ಬಿಲ್ ಆಲಮೀನ್") ಆಗಿದ್ದಾನೆಂದೂ ಅವನ ಅನುಗ್ರಹಗಳು ಅರಬ್ ರಾಜ್ಯಕ್ಕೂ ಸಿರಿಯಾಕ್ಕೂ ಮಾತ್ರವುಳ್ಳದಲ್ಲವೆಂದೂ, ಈ ಪ್ರಪಂಚದ ಸೂರ್ಯನು ಲೋಕದ ಸಕಲ ಭಾಗಗಳಿಗೂ ಬೆಳಕು ನೀಡುವ ರೀತಿಯಲ್ಲಿ ದೈವವಚನವಾದ ಆಧ್ಯಾತ್ಮಿಕ ಸೂರ್ಯ ಲೋಕದ ಸರ್ವಭಾಗಗಳಲ್ಲೂ ಉದಯಿಸಿ ಅಲ್ಲೆಲ್ಲಾ ವಿವಿಧ ಜನಾಂಗಗಳಿಗೆ ಅಧ್ಯಾತ್ಮ ಪ್ರಕಾಶ ನೀಡಿರಬೇಕೆಂದು ಇಸ್ಲಾಂ ಪ್ರಬೋಧಿಸುತ್ತದೆ.

ಈ ಇಸ್ಲಾಮಿಕ ಅಧ್ಯಾಪನಗಳ ಆಧಾರದಿಂದ ಹಾಗೂ ಪರಮಾತ್ಮನಿಂದ ತನಗೆ ಲಭಿಸಿದ ದಿವ್ಯಜ್ಞಾನದಿಂದ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ಶ್ರೀಕೃಷ್ಣ, ಶ್ರೀರಾಮ ಮೊದಲಾದ ಮಹಾತ್ಮರು ಇಂಡಿಯಾದಲ್ಲಿ ಆಗಮಿಸಿದ ದಿವ್ಯ ಪ್ರವಾದಿಗಳೆಂದು ಘೋಷಿಸಿದರು. ವಿಶಿಷ್ಟವಾಗಿ, ಶ್ರೀಕೃಷ್ಣ ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಆಗತರಾದ ಮಹಾತ್ಮರಲ್ಲಿ ಅತ್ಯಂತ ಶ್ರೇಷ್ಠನಾಗಿದ್ದರೆಂದು ಅವರ ಸ್ವಂತ ಅಧ್ಯಾಪನಗಳಿಂದಲೂ ಕೋಟಿಗಟ್ಟಲೆ ಜನರು ಪ್ರಾಚೀನ ಕಾಲದಿಂದಲೇ ಆ ಮಹಾತ್ಮನ ಹೆಸರಿನಲ್ಲಿ ತೋರಿಸುತ್ತಿರುವ ಭಕ್ತ್ಯಾದರಗಳಿಂದಲೂ ತಿಳಿದು ಬರುತ್ತದೆ. ಆದ್ದರಿಂದ ಆ ಮಹಾತ್ಮನ ದಿವ್ಯದೌತ್ಯದ ಕುರಿತು ಹಝ್ರತ್ ಅಹ್ಮದ್‌ರವರು 1904ರಲ್ಲಿ ಸಿಯಾಲ್‌ಕೋಟ್‌ನಲ್ಲಿ ಸಮಾವೇಶಗೊಂಡ ವಿವಿಧ ಜಾತಿ ಮತಸ್ಥರ ಒಂದು ಮಹಾ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದರು. ಅವರು ಹೀಗೆ ಹೇಳಿದರು:

"ನನಗೆ ಪರಮಾತ್ಮನು ತಿಳಿಸಿಕೊಟ್ಟಿರುವಂತೆ ಮಹಾರಾಜ್ ಕೃಷ್ಣ ನಿಜವಾಗಿಯೂ ಒಬ್ಬ ಪರಿಪೂರ್ಣ ಮಹಾತ್ಮರಾಗಿದ್ದರು. ಹಿಂದೂ ಋಷಿಗಳಲ್ಲೂ ಅವತಾರ ಪುರುಷರಲ್ಲೂ ಅವರಿಗೆ ತುಲ್ಯರಾಗಿ ಯಾರೂ ಇಲ್ಲ. ಅವರು ದೇವನಿಂದ ದಿವ್ಯವಾಣಿ ಗಳಿಸುತ್ತಿದ್ದ ಓರ್ವ ಅವತಾರ ಪುರುಷ ಅಥವಾ ದೈವಪ್ರೇಷಿತರಾಗಿದ್ದರು. ಅವರು ಆರ್ಯಾವರ್ತವನ್ನು ಪಾಪದಿಂದ ಶುದ್ಧೀಕರಿಸಿದ ಒಬ್ಬ ಅನುಗ್ರಹೀತ ವ್ಯಕ್ತಿಯಾಗಿದ್ದರು. ನಿಜವಾಗಿಯೂ ಅವರು ತನ್ನ ಕಾಲದ ಒಬ್ಬ ಪ್ರವಾದಿಯಾಗಿದ್ದರು. ಆದರೆ. ಕಾಲಾಂತರದಲ್ಲಿ ಅವರ ಅಧ್ಯಾಪನಗಳು ಬಹಳಷ್ಟು ಮಾರ್ಪಾಟಿಗೆ ಗುರಿಯಾಗಿವೆ. ಅವರು ದೈವ ಪ್ರೇಮದಲ್ಲಿ ತಲ್ಲೀನರಾದವರೂ ಧರ್ಮವನ್ನು ಪ್ರೀತಿಸಿ ಅಧರ್ಮವನ್ನು ವಿರೋಧಿಸಿದ ಓರ್ವ ಪುಣ್ಯಾತ್ಮರೂ ಆಗಿದ್ದರು. (ಲೆಕ್ಚರ್ ಸಿಯಾಲ್ ಕೋಟ್, ಪುಟ 33-34)

ಹಝ್ರತ್ ಅಹ್ಮದ್‌ರವರು ತನ್ನ ಇತರ ಕೆಲವು ಕೃತಿಗಳಲ್ಲೂ ಶ್ರೀಕೃಷ್ಣ ಮಹಾತ್ಮನನ್ನು ಪ್ರಶಂಸಿ ಬರೆದಿರುತ್ತಾರೆ. ಉದಾಹರಣೆಗೆ ತನ್ನ 'ಬರಾಹೀನೆ ಅಹ್ಮದಿಯಾ' ಎಂಬ ಗ್ರಂಥದಲ್ಲಿ ಅವರು ಶ್ರೀಕೃಷ್ಣರ ಸ್ಥಾನ ಮಹಿಮೆಯ ಕುರಿತು ಹೀಗೆ ನ್ಯಾಯೀಕರಿಸಿರುವರು:

"ಕಷ್ಟ! ಅಧರ್ಮಿಗಳು ಪ್ರವಾದಿ ದಾವೂದ್ (**David**) ರವರ ಹೆಸರಿನಲ್ಲಿ ದುರ್ವರ್ತನೆಯನ್ನೂ ಅಪರಾಧವನ್ನೂ ಆರೋಪಿಸಿದಂತೆಯೇ ಶ್ರೀಕೃಷ್ಣರ ಹೆಸರಿನಲ್ಲೂ ಅಂತಹ ಅಪರಾಧವನ್ನು ಹೊರಿಸಿರುವರು.

ಆದರೆ ಯಾವ ರೀತಿಯಲ್ಲಿ ಪ್ರವಾದಿ ದಾವೂದ್ ದೇವನ ಯೋಧನೂ ಧೀರನೂ ದೇವನಿಗೆ ಪ್ರಿಯಕರನೂ ಆಗಿದ್ದರೋ ಅದೇ ಪ್ರಕಾರ ಆರ್ಯಾವರ್ತದಲ್ಲಿ ಶ್ರೀ ಕೃಷ್ಣ ಸಹ. ಒಟ್ಟಿನಲ್ಲಿ, ಪ್ರವಾದಿ ದಾವೂದ್ ಆರ್ಯಾವರ್ತದ ಕೃಷ್ಣನೂ ಶ್ರೀಕೃಷ್ಣ ಇಸ್ರಾಯಿಲ್ ಪರಂಪರೆಯ ದಾವೂದೂ ಆಗಿದ್ದರೆಂದು ಹೇಳಿದರೆ ಸರಿಯಾಗುವುದು" (ಸಂಪುಟ, 5 ಪುಟ 90).

1904ರಲ್ಲೇ ಲಾಹೋರ್‌ನಲ್ಲಿ ಸಾವಿರಾರು ವಿವಿಧ ಮತಸ್ಥರು ಸಮ್ಮೇಳಿಸಿದ ಒಂದು ಮಹಾಸಭೆಯಲ್ಲಿ ಮಾತನಾಡುತ್ತಾ, ಪುಣ್ಯಾತ್ಮರಾದ ಹಝ್ರತ್ ಅಹ್ಮದ್‌ರವರು ಶ್ರೀಕೃಷ್ಣ ಮತ್ತು ಶ್ರೀರಾಮಚಂದ್ರರ ಕುರಿತು ಹೀಗೆ ಹೇಳಿದರು :

"ಈ ಸಂದರ್ಭದಲ್ಲಿ ಒಂದು ಸಂಗತಿ ಮುಖ್ಯವಾಗಿ ಹೇಳಬೇಕಾಗಿದೆ. ಇಸ್ಲಾಮಿಗಿಂತ ಹಿಂದಿನ ಮತಗಳೆಲ್ಲಾ ಮಿಥ್ಯಾಧಿಷ್ಠಿತವೆಂದು ನಾನು ನಂಬುವುದಿಲ್ಲ. ಸರ್ವ ಜಾತಿ ಮತಸ್ಥರಾದ ಮನುಷ್ಯರಾಶಿಯ ಒಬ್ಬನೇ ದೇವನಾದ ಸೃಷ್ಟಿಕರ್ತ ಸಕಲರ ಪಾಲಕನೂ ಎಲ್ಲರಿಗೂ ಅವರ ಭೌತಿಕ ಮತ್ತು ಆಧ್ಯಾತ್ಮಿಕ ಆವಶ್ಯಕತೆಗಳನ್ನು ಒದಗಿಸಿಕೊಡುವವನೆಂದೂ ನಾನು ನಂಬುತ್ತೇನೆ. ಲೋಕಾರಂಭ ಮೊದಲ್ಗೊಂಡು ಅವನು ತನ್ನ ಆಧ್ಯಾತ್ಮಿಕ ಪಾರಿತೋಷಕಗಳನ್ನೂ ವರ ಪ್ರಸಾದಗಳನ್ನೂ ಒಂದೇ ಒಂದು ಜಾತಿಗಲ್ಲದೆ ಇನ್ನಾರಿಗೂ ನೀಡಲಿಲ್ಲವೆಂದೂ ಅವರನ್ನು ಮಾತ್ರ ಅವನು ತನ್ನ ವೃತಜನರನ್ನಾಗಿ ಮಾಡಿರುವನೆಂದೂ ಹೇಳುವುದು ಸರಿಯಲ್ಲ. ಈ ಅನುಗ್ರಹಗಳು ಎಲ್ಲಾ ಜಾತಿಯವರಿಗೂ ನೀಡಲಾಗಿದೆಯೆಂಬುದು ಸತ್ಯ. ಇದು ಯಾರನ್ನಾದರೂ ತೃಪ್ತಿಪಡಿಸಲಿಕ್ಕಾಗಲಿ ಸಂತೋಷ ಪಡಿಸಲಿಕ್ಕಾಗಲಿ ಹೇಳುವುದಲ್ಲ. ಶ್ರೀರಾಮ ಮತ್ತು ಶ್ರೀಕೃಷ್ಣ ಪರಮಾತ್ಮನ ಸತ್ಯದಾಸರೂ ಅವನ ದೃಢಬಂಧವನ್ನು ಸ್ಥಾಪಿಸಿದವರೂ ಆಗಿದ್ದರೆಂದು ಅವನು ನನಗೆ ದಿವ್ಯ ಅರಿವು ನೀಡಿರುವನು. ಅವರನ್ನು ಆಕ್ಷೇಪಿಸುವವನನ್ನೂ ಅವರ ಕುರಿತು ನಿಂದ್ಯವಾಗಿ ಮಾತನಾಡುವವನನ್ನೂ ನಾನು ದ್ವೇಷಿಸುತ್ತೇನೆ. ಅಂತಹವನಾದರೋ, ಸಮುದ್ರದ ವಿಶಾಲತೆಯ ಕುರಿತು ಅರಿಯದ ಕೂಪ ಮಂಡೂಕಕ್ಕೆ ಸಮಾನ. ಪ್ರಸ್ತುತ ಮಹಾತ್ಮರ ಜೀವನಕ್ರಮಗಳಿಂದ ಗ್ರಹಿಸಲು ಸಾಧ್ಯವಾದಷ್ಟರ ಮಟ್ಟಿಗೆ, ಅವರು ದೇವಮಾರ್ಗದಲ್ಲಿ ತೀವ್ರಯತ್ನಮಾಡಿ ದೇವನೆಡೆಗೆ ಕೊಂಡೊಯ್ಯುವ ಸತ್ಪಥವನ್ನು ಕಂಡುಹಿಡಿಯಲಿಕ್ಕಾಗಿ ತಮ್ಮ ಜೀವಿತದ ಅತ್ಯಂತ ಅಮೂಲ್ಯ ಭಾಗಗಳನ್ನು ವ್ಯಯಿಸಿದ್ದಾರೆ. ಅವರು ನೀತಿ ಮತ್ತು ಭಕ್ತಿಯುಳ್ಳವರಾಗಿರಲಿಲ್ಲವೆಂದು ಹೇಳುವವರು ಪವಿತ್ರ ಖುರ್‌ಆನಿನ ಅಧ್ಯಾಪನಕ್ಕೆ ವಿರುದ್ಧವಾಗಿ ವರ್ತಿಸುವವರಾಗಿದ್ದಾರೆ. ಏಕೆಂದರೆ, 'ವ ಇನ್‌ಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್' – ಓರ್ವ ಮುನ್ನೆಚ್ಚರಿಕೆನೀಡುವಾತ (ಪ್ರವಾದಿ) ಆಗಮಿಸಿರದ ಜನಾಂಗವೇ ಇಲ್ಲ ಎಂದು ಖುರ್‌ಆನ್ ಹೇಳುತ್ತದೆ. ಹಾಗಿರುವಾಗ, ಪ್ರತಿಯೊಂದು ಧರ್ಮ ಆರಂಭದಲ್ಲಿ ಸತ್ಯಾಧಿಷ್ಠಿತವಾಗಿದ್ದು ಕಾಲಾಂತರದಲ್ಲಿ ಅದರಲ್ಲಿ ಅಸಂಬದ್ಧತೆಗಳು ಬಂದುಸೇರಿದವೆಂದಾಗುತ್ತದೆ. ಅದರಲ್ಲೆಲ್ಲಾ ಈಗ ಸತ್ಯವಾದ ತತ್ವಗಳಿಗಿಂತ ಅಬದ್ಧ ಸಿದ್ಧಾಂತಗಳು ಒಳಗೊಂಡಿರುತ್ತವೆ. (ರಿವ್ಯೂ ಓಫ್ ರಿಲಿಜಿಯನ್ಸ್, ಒಕ್ಟೋಬರ್ 1904, ಪುಟ 374).

ಹೀಗೆ ವ್ಯಕ್ತವಾಗಿಯೂ ಸುದೃಢವಾಗಿಯೂ ಶ್ರೀ ಕೃಷ್ಣ, ಶ್ರೀರಾಮಚಂದ್ರರ ಪ್ರವಾದಿತ್ವದ ಕುರಿತು ಪ್ರಬೋಧಿಸಿ ಲಕ್ಷಗಟ್ಟಲೆ ಜನರು ಈ ಸತ್ಯವನ್ನು ನಂಬುವಂತೆ ಮಾಡಿದವರು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರಾಗಿದ್ದಾರೆ. ಆದರೆ ಅವರಿಗಿಂತ ಮೊದಲು ಸಹ ಕೆಲವು ಮುಸ್ಲಿಂ ಪಂಡಿತರು ಶ್ರೀಕೃಷ್ಣ ಓರ್ವ ಪ್ರವಾದಿಯಾಗಿದ್ದರೆಂದು ಹೇಳಿದ್ದರು. ಮಾತ್ರವಲ್ಲ ಶ್ರೀಕೃಷ್ಣ ಓರ್ವ ಪ್ರವಾದಿಯಾಗಿದ್ದರೆಂದು ವ್ಯಕ್ತಪಡಿಸುವ ಒಂದು ಹದೀಸು (ಪೈಗಂಬರರ ನುಡಿ) ಎಂಟೂವರೆ ಶತಮಾನಗಳ ಮೊದಲು ಜೀವಿಸಿದ್ದ ಓರ್ವ ಹದೀಸು ಪಂಡಿತನಾದ ದಯ್‌ಲಮೀ ತನ್ನ 'ತಾರೀಖ್ ಹಮದಾನ್' ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅದು ಈ ರೀತಿ ಇದೆ: "ಕಾನ ಫಿಲ್ ಹಿಂದಿ ನಬಿಯ್ಯುನ್ ಅಸ್‌ವದುಲ್ಲೌನಿ ಇಸ್ಮುಹು ಕಾಹಿನಾ" — ಇಂಡಿಯಾದಲ್ಲಿ ಶ್ಯಾಮಲ ವರ್ಣದ ಓರ್ವ ನಬಿ (ಪ್ರವಾದಿ) ಇದ್ದರು. ಅವರ ಹೆಸರು 'ಕಾಹಿನಾ' ಎಂದಾಗಿತ್ತು. (ತಾರೀಖ್ ಹಮದಾನ್-'ಬಾಬುಲ್ ಕಾಫ್'ಅಧ್ಯಾಯ). ಇಲ್ಲಿ ಈ ಪ್ರವಾದಿ 'ಕಪ್ಪು ಬಣ್ಣ'ದವರಾಗಿದ್ದರೆಂದು ಹೇಳಿದ್ದು 'ಕೃಷ್ಣ' ಎಂಬುದರ ಪರ್ಯಾಯವಾಗಿರಬೇಕು. 'ಕಾಹಿನಾ' ಎಂದು ಹೇಳಿದ್ದು ಅವರಿಗಿರುವ 'ಕನ್ನಾ' ಅಥವಾ 'ಕಣ್ಣ' ಎಂಬ ಹೆಸರುಗಳ ಕುರಿತಾಗಿರಬೇಕು.

ಹಿಜರಿ 12ನೇ ಶತಮಾನದಲ್ಲಿ ಜೀವಿಸಿದ್ದ ಜ್ಞಾನಿಯೂ ಭಕ್ತನೂ ಆಗಿದ್ದ ಹಝ್ರತ್ ಮಿರ್ಝಾ ಜಾನೆ ಜನಾನ್ ಎಂಬವರು ಶ್ರೀಕೃಷ್ಣ ದೇವರ ಓರ್ವ ವರಿಷ ದಾಸ ಹಾಗೂ ಈಶ್ವರ ಪ್ರೇಮದಲ್ಲಿ ಲೀನರಾಗಿದ್ದ ಮಹಾತ್ಮ ಆಗಿದ್ದರೆಂದು ಹೇಳಿದ್ದರು. ಹೀಗೆಯೇ 13ನೇ ಶತಮಾನದಲ್ಲಿ ಜೀವಿಸಿದ್ದ ಮೌಲಾನ ಗೌಸ್ ಅಲಿಷಾಹ್ ಎಂಬೋರ್ವ ಜ್ಞಾನಿ ಸಹ ಶ್ರೀಕೃಷ್ಣ ಪ್ರವಾದಿಯಾಗಿದ್ದರೆಂದು ಪ್ರಸ್ತಾವಿಸಿರುವರು. (ತದ್‌ಕಿರ ಗೌಸಿಯ್ಯ, ಪುಟ 48). ಪ್ರಸಿದ್ಧ ಪಂಡಿತನಾದ ಮೌಲವಿ ಮುಹಮ್ಮದ್ ನಾನೂತವೀ ಸಹ ತನ್ನ 'ಧರ್ಮಪ್ರಚಾರ' ಎಂಬ ಕೃತಿಯಲ್ಲಿ ಇದೇ ಸಂಗತಿ ಪ್ರಸ್ತಾವಿಸಿದ್ದರೆಂಬುದು ಇಲ್ಲಿ ಸ್ಮರಣಾರ್ಹ.

ಹೀಗೆ ಹಝ್ರತ್ ಅಹ್ಮದರ ಪ್ರಬೋಧನೆಗಿಂತ ಮೊದಲು ಸಹ ಕೆಲವು ಪಂಡಿತರು ಶ್ರೀಕೃಷ್ಣ ಓರ್ವ ದೈವನಿಯುಕ್ತ ಪ್ರವಾದಿಯಾಗಿದ್ದರೆಂದು ಹೇಳಿದ್ದರೂ ಮುಸ್ಲಿಮರು ಸಾಮಾನ್ಯವಾಗಿ ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ ಮೊದಲಾದವರನ್ನು ಪ್ರವಾದಿಗಳೆಂದು ಬಿಡಿ, ಧರ್ಮಾತ್ಮರೆಂದಾಗಲಿ ಪರಿಗಣಿಸುವುದಿಲ್ಲ. ಆದರೆ ಹಝ್‌ರತ್ ಅಹ್ಮದರ ಪ್ರಸ್ತುತ ಬೋಧನೆಯ ನಂತರ ಶ್ರೀಕೃಷ್ಣ, ಶ್ರೀರಾಮಚಂದ್ರರ ಪ್ರವಾದಿತ್ವ ಮುಸ್ಲಿಂ ಪಂಡಿತರೆಡೆಯಲ್ಲಿ ಚಿಂತಾವಿಷಯವಾಗಿದ್ದು ಅನೇಕ ಪಂಡಿತರು ಆ ಮಹಾತ್ಮರನ್ನು ಪ್ರವಾದಿಗಳೆಂದು ಸಮ್ಮತಿಸತೊಡಗಿದರು. ಉದಾಹರಣೆಗಾಗಿ, ಮೌಲಾನ ಅಬ್ದುಲ್‌ಬಾರೀ, ಖಾಜಾ ಹಸನ್ ನಿಜಾಮಿ, ಮೌಲವಿ ಮುಹಮ್ಮದ್ ಅಜ್‌ಮಲ್ ಖಾನ್ ಎಂ.ಎ., ಮೌಲಾನ ಹಝ್ರತ್ ಮೋಹಾನೀ, ಮೌಲವಿ ಝಫರ್‌ಅಲೀಖಾನ್, ಮೌಲವಿ ಖಲೀಲುರಹ್ಮಾನ್ ಮೊದಲಾದವರು ಪ್ರಸ್ತುತ ಸತ್ಯವನ್ನು ವ್ಯಕ್ತವಾಗಿ ಘೋಷಿಸಿದ ಪಂಡಿತರಲ್ಲಿ ಒಳಗೊಂಡವರಾಗಿದ್ದಾರೆ.

ಆದರೆ ಕೆಲವು ಆಲಿಮರು (ಮುಸ್ಲಿಂ ಮತಪಂಡಿತರು) ಅಹ್ಮದಿಯರನ್ನು ಮತಭ್ರಷ್ಟರೆಂದು ವಿಧಿಸುವುದಕ್ಕೆ ಒಂದು ಕಾರಣವಾಗಿ ಹೇಳುವುದು, ಅಹ್ಮದಿಯರು ಶ್ರೀಕೃಷ್ಣ. ಶ್ರೀರಾಮ, ಶ್ರೀಬುದ್ಧ ಮೊದಲಾದವರನ್ನು ಪ್ರವಾದಿಗಣದಲ್ಲಿ ಸೇರಿಸುತ್ತಾರೆ ಎಂದಾಗಿದೆ. ಮಾತ್ರವಲ್ಲ, ಕೆಲವು ಮೌಲವಿಗಳು ಅವರ 'ವಅಝ್' ಪ್ರವಚನಗಳಲ್ಲಿ, ಸ್ವಯಂ ಜನಸಾಮಾನ್ಯರ ಪ್ರೀತಿಗೂ ಪ್ರಶಂಸೆಗೂ ಪಾತ್ರರಾಗಲಿಕ್ಕಾಗಿ ಅಹ್ಮದಿಯರನ್ನು ಪ್ರಸ್ತುತ ವಿಶ್ವಾಸದ ಆಧಾರದಿಂದ ಮತಭ್ರಷ್ಟರೆಂದು ತೋರಿಸಿ ಅಪಹಾಸ್ಯ, ಆಕ್ಷೇಪಗಳಿಗೆ ಗುರಿ ಮಾಡುತ್ತಾರೆ. ಸಾಮಾನ್ಯ ಸ್ಥಿತಿ ಹೀಗಿದ್ದರೂ ಚಿಂತಾಶೀಲರೆಡೆಯಲ್ಲಿ ಈ ವಿಶ್ವಾಸಕ್ಕೆ ಪ್ರಚಾರ ಹೆಚ್ಚುತ್ತಾ ಬರುತ್ತಿರುವುದನ್ನು ಶುಭ ಸೂಚಕವೆಂದು ಭಾವಿಸಬಹುದು.

ಹಝ್‌ರತ್ ಅಹ್ಮದರ ಪ್ರಸ್ತುತ ಪ್ರಬೋಧನೆಯ ಬಳಿಕ, ಸುಮಾರು ಅರ್ಧ ಶತಮಾನದ ಮೊದಲು, ಕೇರಳದ ಒಬ್ಬ ಪ್ರಸಿದ್ಧ ಪಂಡಿತ ಮೌಲವಿ ಮುಹಮ್ಮದ್ ಅಬ್ದುಲ್ ಖಾದಿರ್ (ವಕ್ಕಂ) ಅವರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದ್ದ "ಮುಸ್ಲಿಂ" ಎಂಬ ಮಲೆಯಾಳಿ ಮಾಸಪತ್ರಿಕೆಯಲ್ಲಿ 'ಇಸ್ಲಾಂ ದೂತನ್' ಎಂಬ ಶೀರ್ಷಿಯಲ್ಲಿ ಪ್ರಕಾಶಗೊಂಡ ಒಂದು ಧಾರವಾಹಿ ಲೇಖನದಲ್ಲಿ ಬುದ್ಧ, ಬ್ರಹ್ಮಾ ಎಂಬಿವರು ಇಂಡಿಯಾದಲ್ಲಿ ಬಂದ ಪ್ರವಾದಿಗಳಾಗಿದ್ದರೆಂದು ಪ್ರಸ್ತಾಪಿಸಿದ್ದು ಇಲ್ಲಿ ಸ್ಮರಿಸಬಹುದು. ಪ್ರಸ್ತುತ ಲೇಖನ ಮಿಸ್ರ್‌ನ ಓರ್ವ ಪಂಡಿತ ಅಲ್ಲಾಮ ಮುಹಮ್ಮದ್ ಫರೀದ್ ವಜ್‌ದೀ ಅವರು ಅರಬಿ ಭಾಷೆಯಲ್ಲಿ ಬರೆದ 'ಸಫೀರುಲ್ ಇಸ್ಲಾಂ' ಎಂಬ ಲಘು ಪುಸ್ತಕದ ಭಾಷಾಂತರವಾಗಿದೆ. ಈ ಭಾಷಾಂತರ ಒಂದು ಪುಸ್ತಿಕೆ ರೂಪದಲ್ಲೂ ಪ್ರಕಾಶಿತವಾಗಿದೆಯೆಂದು ನನ್ನ ನೆನಪು. ಇದರಲ್ಲಿ ಹೇಳಿದಂತೆ ಬುದ್ಧ, ಬ್ರಹ್ಮಾ ಎಂಬಿವರು ಪ್ರವಾದಿಗಳಾಗಿದ್ದರೆಂಬ ವಿಚಾರದಲ್ಲಿ ಮೌಲವಿ ಅಬ್ದುಲ್ ಖಾದಿರ್‌ರವರಿಗೆ ಭಿನ್ನಾಭಿಪ್ರಾಯವುಳ್ಳದ್ದಾಗಿ ಅವರು ತಮ್ಮ ಪತ್ರಿಕೆಯಲ್ಲಿ ಸೂಚಿಸಿಲ್ಲವಾದುದರಿಂದ ಅವರ ಅಭಿಪ್ರಾಯ ಸಹ ಅದೇ ಆಗಿತ್ತೆಂದು ತಿಳಿದುಕೊಳ್ಳಬೇಕಾಗಿದೆ. ಹಾಗಿರುವಾಗ, ಬುದ್ಧ, ಬ್ರಹ್ಮಾ ಎಂಬಿವರು ಇಂಡಿಯಾದಲ್ಲಿ ಆಗಮಿಸಿದ ಪ್ರವಾದಿಗಳಾಗಿದ್ದರೆಂದು ದಿವಂಗತ ಮಾನ್ಯ ಮೌಲವಿ ಮುಹಮ್ಮದ್ ಅಬ್ದುಲ್‌ಖಾದಿರ್‌ರವರು ಸಹ ನಂಬಿದ್ದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ವಿಶ್ವಾಸ ಮುಸ್ಲಿಮರೆಡೆಯಲ್ಲಿ ಪ್ರಚರಿಸಲ್ಪಟ್ಟು ಕಾಣಲಿಕ್ಕೆ ಆಶಿಸಿಯಾಗಿರಬೇಕಲ್ಲವೇ ಅವರು ಕಷ್ಟಪಟ್ಟು ಆ ಅರಬಿ ಕೃತಿಯನ್ನು ಮಲೆಯಾಳಿಯಲ್ಲಿ ಭಾಷಾಂತರಿಸಿ ತನ್ನ ಮಾಸಿಕದಲ್ಲಿ ಪ್ರಕಟಿಸಿದ್ದು ಮತ್ತು ಪುಸ್ತಕ ರೂಪದಲ್ಲಿ ಪ್ರಕಾಶ ಪಡಿಸಿದ್ದು. ಪ್ರಸ್ತುತ ಲೇಖನದಲ್ಲಿ ಹೀಗೆ ಬರೆಯಲಾಗಿದೆ:

"ಪ್ರವಾದಿಗಳ ಕುರಿತು (ಖುರ್‌ಆನಿನಲ್ಲಿ) ದೇವನು ಹೀಗೆ ಹೇಳುತ್ತಾನೆ: 'ಯಾವುದೇ ಜನಾಂಗದಲ್ಲೂ

ಓರ್ವ ಪ್ರವಾದಿ ಬಾರದೆ ಇರಲಿಲ್ಲ.' 'ಅವರ ಪೈಕಿ ಕೆಲವರ ಕುರಿತು ನಾವು ನಿನ್ನೊಡನೆ ಹೇಳಿದ್ದೇವೆ; ಬೇರೆ ಕೆಲವರ ಕುರಿತು ಹೇಳಲಿಲ್ಲ.' ಇದರಿಂದ ಒಂದು ದೊಡ್ಡ ಮತದ ಸ್ಥಾಪಕನೆಂಬ ನೆಲೆಯಲ್ಲಿ ಬುದ್ಧನ ಶ್ರೇಷ್ಠತೆಯನ್ನು ಇಸ್ಲಾಂ ಮತ ಅಲ್ಲಗಳೆಯುವುದಿಲ್ಲವೆಂದೂ ಅವರನ್ನು ಮಹಾತ್ಮರಾದ ಪ್ರವಾದಿಗಳಲ್ಲಿ ಒಬ್ಬರೆಂದು ಗಣಿಸಲಿಕ್ಕೆ ಇಸ್ಲಾಂ ಮತ ಸಮ್ಮತಿಸುತ್ತದೆಂದೂ ಒಬ್ಬ ಬುದ್ಧ ಮತಸ್ಥನಿಗೆ ಕಾಣಬಹುದಾಗಿದೆ." ("ಮುಸ್ಲಿಂ", ಸಂಚಿಕೆ 5, ಸಂಪುಟ 2, ಪುಟ 37, ಕೊಲ್ಲಂ ಶಕ 1091).

"ಮೂಸಾರವರನ್ನು ಇಸ್ರಾಯೀಲ್ ವಂಶಜರಲ್ಲಿ ಒಂದು ವಿಶಿಷ್ಟ ವೇದ ಸಹಿತ ದೇವನಿಂದ ನಿಯುಕ್ತರಾದ ಪ್ರವಾದಿಯೆಂದು ನಂಬಿ ಬುದ್ಧ, ಜೊರಾಸ್ಟರ್, ಬ್ರಹ್ಮಾ, ಮುಹಮ್ಮದ್ ಎಂಬಿವರನ್ನೂ ಇವರಿಗೆ ಮೊದಲು ಸನ್ಮಾರ್ಗದರ್ಶಕಗಳಾದ ಒಂದೊಂದು ವೇದ ಸಹಿತ ಒಂದೊಂದು ವರ್ಗವನ್ನು ಸತ್ಪಥಕ್ಕೆ ದಾರಿ ತೋರಿಸಿದ ಮಹಾತ್ಮರನ್ನೂ ಆ ಪ್ರಕಾರ ನಂಬದೆ ಇರುವುದಕ್ಕೆ ಏನು ನ್ಯಾಯವಿದೆ? ದೇವನು ಮೂಸಾರನ್ನು ಮಾತ್ರ ಇಸ್ರಾಯೀಲ್ ವಂಶಜರಾದ ಕೆಲವು ಜನರಿಗೆ ಮಾರ್ಗದರ್ಶಕನಾಗಿ ನಿಯಮಿಸಿ ಚೀನೀಯರು ಜಪಾನಿಯರು ಮೊದಲಾದ ಏಷ್ಯನ್ನರು, ಆಫ್ರಿಕನ್ನರು, ಆಸ್ಟ್ರೇಲಿಯನ್ನರು ಎಂಬಿತ್ಯಾದಿ ಇತರ ಜನರನ್ನೆಲ್ಲಾ ಜ್ಞಾನವಾಗಲಿ, ವೇದವಾಗಲಿ, ಮಾರ್ಗದರ್ಶನವಾಗಲಿ ಏನೂ ಇಲ್ಲದೆ ಅಂಧಕಾರದಲ್ಲೂ ಅಪಥದಲ್ಲೂ ತೊಳಲಾಡಲು ಬಿಟ್ಟು ಬಿಡುವುದು ಸಂಭವನೀಯವೇ?" (ಸಂಪುಟ 5, ಸಂಚಿಕೆ 3, ಪುಟ 68).

ಹೀಗೆ ಬುದ್ಧಿಶಾಲಿಗಳೂ ಚಿಂತಾಶೀಲರೂ ಆದ ಮುಸ್ಲಿಮರು, ಎಲ್ಲಾ ಜಾತಿಗಳಲ್ಲೂ ಸನ್ಮಾರ್ಗವನ್ನು ಬೋಧಿಸಲಿಕ್ಕೋಸ್ಕರ ಪ್ರವಾದಿಗಳು ನಿಯುಕ್ತರಾಗಿದ್ದರೆಂಬ ಖುರ್‌ಆನಿನ ಪಾಠ – ಮುಹಮ್ಮದ್ ಪೈಗಂಬರರ ಅಧ್ಯಾಪನ–ಅನುಸರಿಸಿ, ಶ್ರೀಬುದ್ಧ, ಶ್ರೀಕೃಷ್ಣ ಮೊದಲಾದ ಮಹಾತ್ಮರು ಭಾರತದಲ್ಲಿ ಆಗತರಾದ ಪ್ರವಾದಿಗಳೆಂದು ವಿಶ್ವಾಸಾದರ ಅರ್ಪಿಸಲು ತೊಡಗಿ ಅರ್ಧ ಶತಕ ಕಳೆಯಿತು. ಸರ್ವ ಸಮುದಾಯ ಮೈತ್ರಿಗೂ ಸೌಹಾರ್ದ ಭಾವನೆಗೂ ಪರ್ಯಾಪ್ತವಾದ ಈ ಮನಃ ಪರಿವರ್ತನೆಗಾಗಿ ಉಪದೇಶವಿತ್ತ ಮುಹಮ್ಮದ್ ಪೈಗಂಬರರು ಲೋಕಕ್ಕೆ ಒಂದು ಅನುಗ್ರಹವಾಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಹಿಂದೂಗಳ ಮತ್ತು ಬೌದ್ಧರ ಮಾತ್ರವಲ್ಲ, ಯಹೂದರ, ಕ್ರೈಸ್ತರ ಮತ್ತಿತರ ಪುರಾತನ ಮತಸ್ಥರ ಮಹಾತ್ಮರಾದ ಆಚಾರ್ಯರಲ್ಲೆಲ್ಲಾ ವಿಶ್ವಾಸವಿರಿಸಿ ಗೌರವಿಸಲು ಕಲಿಸಿದ ಪೈಗಂಬರರನ್ನು ಇತರ ಸಮುದಾಯದವರು ನ್ಯಾಯರಹಿತವಾಗಿ ಆಕ್ಷೇಪಿಸಿ, ಕಲಹಗಾರನೆಂದು ಚಿತ್ರೀಕರಿಸುವರಾದರೆ ಅದೆಷ್ಟು ನಿಂದನೀಯ ಹಾಗೂ ಆಕ್ಷೇಪಾರ್ಹವೆಂದು ಹೇಳಬೇಕಾಗಿಲ್ಲ. ನಮ್ಮ ಮೇಲೆ ಪುಷ್ಪವೃಷ್ಟಿ ಸುರಿಸುವವರಿಗೆ ಕಲ್ಲೆಸೆಯುವುದು ಮತ್ತು ಹಾಲು ಕೊಟ್ಟು ಸತ್ಕರಿಸುವವರಿಗೆ ಎಂಜಲು ನೀರು ಕೊಡುವುದು ನ್ಯಾಯವಾಗಲಾರದಷ್ಟೇ. ಒಟ್ಟಿನಲ್ಲಿ, ವಿದ್ಯಾಸಂಪನ್ನರಾದ ಇತರ ಸಮುದಾಯದವರು ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯನ್ನೂ ಅಧ್ಯಾಪನಗಳನ್ನೂ ಕಲಿಯಲು ಪ್ರಯತ್ನಿಸಬೇಕೆಂದು ಅವರನ್ನು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ಮುಸ್ಲಿಮರು ಸಹ ಇತರ ಮತಾಚಾರ್ಯರಾದ ಮಹಾತ್ಮರ ಕುರಿತು ಹೆಚ್ಚು ಹೆಚ್ಚು ತಿಳಿಯಲಿಕ್ಕೆ ಯತ್ನಿಸಬೇಕು. ಇದು ವಿಭಿನ್ನ ಜನಾಂಗಗಳಿಗೆ ಪರಸ್ಪರ ತಿಳಿಯಲಿಕ್ಕೂ ಮತಾಚಾರ್ಯರನ್ನು ಆದರಿಸಲಿಕ್ಕೂ ಪ್ರಜ್ಞೆಯನ್ನುಂಟು ಮಾಡಲು ಸಹಾಯಕವಾಗುವುದೆಂದು ಭರವಸೆ ಪಡಬಹುದು.



# ಯೇಸು ಕಾಶ್ಮೀರದಲ್ಲಿ

★ ಸರ್ ಮುಹಮ್ಮದ್ ಝಫರುಲ್ಲಾ ಖಾನ್.

ಯೇಸು ಕ್ರಿಸ್ತರ ಶಿಲುಬೆಯ ಮೇಲಿನ ಮರಣ, ಪುನರುತ್ಥಾನ ಮತ್ತು ಶರೀರದಿಂದೊಡಗೂಡಿದ ಆಕಾಶಾರೋಹಣ ಇವು ಕ್ರೈಸ್ತ ಧರ್ಮದ ಮೂಲ ತತ್ವಗಳಾಗಿವೆ. ಈ ಕಾಲ್ಪನಿಕಥೆಗಳಿಗೆ ಕ್ರೈಸ್ತ ಜನತೆ ಅಧರಸಮ್ಮತಿ ನೀಡುತ್ತಿರುವರಾದರೂ ಕ್ರೈಸ್ತ ರಾಜ್ಯಗಳಲ್ಲಿಯೂ ಚಿಂತಕರು ಈ ತಥಾಕಥಿತ ಸಿದ್ಧಾಂತಗಳನ್ನು ಒಪ್ಪುವುದಿಲ್ಲ ಹಾಗೂ ಅವುಗಳ ಐತಿಹಾಸಿಕ ಹಿನ್ನೆಲೆಗಳನ್ನು ಅಂಗೀಕರಿಸುವುದಿಲ್ಲ. ಶಿಲುಬೆಯ ಮೇಲಿನ ಮರಣವನ್ನು ಪರಿಗಣಿಸುವಂತಹ ಪ್ರಾಥಮಿಕ ಆಧಾರವಾಗಲಿ ಇಲ್ಲವೆಂಬುದು ಸತ್ಯ. ಪುನರುತ್ಥಾನ ಮತ್ತು ಸ್ವರ್ಗಾರೋಹಣ ಇತ್ಯಾದಿ ನಿಯತಿವಿರುದ್ಧ ಸಿದ್ಧಾಂತಗಳಿಗೆ ಆಧಾರವಾಗಿ ಯಾವ ಪುರಾವೆಯೂ ಲಭ್ಯವಲ್ಲ.

ಈ ಕಾಲ್ಪನಿಕ ಕಥೆಗಳನ್ನು ಶಕ್ತಿಯುತವಾಗಿ ಬೈಬಲೇ ಖಂಡಿಸುತ್ತದೆ. ಯೇಸು ದೇವಪುತ್ರನೆಂದೂ ಮನುಷ್ಯ ವಂಶದ ಎಲ್ಲಾ ಪಾಪ ಭಾರವನ್ನು ಹೊರಲಿಕ್ಕಾಗಿ ಮತ್ತು ಶಿಲುಬೆಯ ಮೇಲೆ ಪ್ರಾಯಶ್ಚಿತ್ತ ಬಲಿಯಾಗಲಿಕ್ಕಾಗಿ ಮನುಷ್ಯ ರೂಪದಲ್ಲಿ ಅವರು ಅವತರಿಸಿದರೆಂದೂ ಈ ಪಾಪನಿವೃತ್ತಿ ತತ್ವದಲ್ಲಿ ವಿಶ್ವಾಸವಿರಿಸಿದರೆ ಮನುಷ್ಯ ವಂಶ ರಕ್ಷಿಸಲ್ಪಡುವುದೆಂದೂ ಕ್ರೈಸ್ತ ಮತದ ಮೂಲ ಸಿದ್ಧಾಂತವಾಗಿದೆ. ದೇವಪುತ್ರನಾದುದರಿಂದ ಯೇಸು ಸಹ ದೇವನೇ! ಶಿಲುಬೆಯಲ್ಲಿ ಮರಣವನ್ನು ಪಡೆದು ಯೇಸು ಮನುಷ್ಯವಂಶಕ್ಕಾಗಿ ಸ್ವಯಂ "ಶಾಪಗ್ರಸ್ತ"ನಾಗಿ[1] ಪಾಪದ ಪ್ರಾಯಶ್ಚಿತವಾಗಿ ಮೂರು ದಿನಗಳ ವರೆಗೆ ಆ ಸ್ಥಿತಿಯಲ್ಲಿ ಕಳೆದರು! ನಂತರ ಪುನರುತ್ಥಾನಗೊಂಡು ಆಕಾಶಾರೋಹಣ ಮಾಡಿದರು! ಅಂತ್ಯಕಾಲದಲ್ಲಿ ಯೇಸು ಭೂಮಿಗಿಳಿದು ಬಂದು ಮನುಷ್ಯವಂಶಕ್ಕೆ ನ್ಯಾಯ ವಿಧಿಸುವರು!

ಈ ಮೇಲೆ ಹೇಳಿದ ಸಿದ್ಧಾಂತಗಳನ್ನು ಬೆಂಬಲಿಸುವ ಅಥವಾ ನ್ಯಾಯೀಕರಿಸುವ ಏನನ್ನೂ ಯೇಸುವಿನ ಅಂಗೀಕೃತ ವಚನಗಳಲ್ಲಾಗಲಿ ಅಧ್ಯಾಪನಗಳಲ್ಲಾಗಲಿ ಕಾಣಲಸಾಧ್ಯ. ಅವರ ಸ್ವಂತ ವಚನ ಪ್ರಕಾರ ತಾನು ಇಸ್ರಾಯಿಲ್ ವಂಶಜರಿಗೆ ಮುಖ್ಯವಾಗಿ, ಇಸ್ರಾಯೇಲ್ ಮನೆತನದ "ತಪ್ಪಿಸಿಕೊಂಡ ಕುರಿಗಳ ಬಳಿಗೆ"[2] ಮಾರ್ಗದರ್ಶನಕ್ಕಾಗಿ ನಿಯುಕ್ತರಾದ ಓರ್ವ ಪ್ರವಾದಿಯಾಗಿದ್ದರು. ಅವರೇ ದೇವನಾಗಿದ್ದರೆ ಮತ್ತು ಈ ಭೂಮಿಯಲ್ಲಿ ತನ್ನ ಅಲ್ಪ ಕಾಲ ಪ್ರವಾಸದ ಉದ್ದೇಶ ಮನುಷ್ಯವಂಶದ ಪಾಪಗಳಿಗೆ ಪ್ರಾಯಶ್ಚಿತ್ತ ಬಲಿಯಾಗಿ ಶಿಲುಬೆಯ ಮೇಲೆ ಮರಣ ಹೊಂದುವುದಾಗಿದ್ದರೆ, ಶಿಲುಬೆಯ ಮೇಲಿನ ಮೃತ್ಯುವೆಂಬ ಪಾನಪಾತ್ರೆ ನೀಗಿಸಲ್ಪಡಲಿಕ್ಕಾಗಿ ಗೆತ್ಸೇಮನೆ ತೋಟದಲ್ಲಿ ಯೇಸು ಯಾತನೆ ಪಟ್ಟು ಪ್ರಾರ್ಥಿಸುತ್ತಲೂ[3] ಶಿಷ್ಯರೊಡನೆ ಆ ರೀತಿ ಪ್ರಾರ್ಥಿಸಲು ಕೇಳಿಕೊಳ್ಳುತ್ತಲೂ ಇರಲಿಲ್ಲ. ತನ್ನ ಪ್ರಾರ್ಥನೆಗಳನ್ನೆಲ್ಲಾ ಪರಮಾತ್ಮನು ಕೇಳುತ್ತಾನೆಂದು ಯೇಸು ನಂಬಿದ್ದರು. ಈ ಪ್ರಾರ್ಥನೆಗೂ ಸಹ ದೇವರು ಕಿವಿಗೊಡುವನೆಂದು ಅವರು ದೃಢವಾಗಿ ನಂಬಿರಬೇಕು. ಮನುಷ್ಯ ವಂಶದ ಎಲ್ಲಾ ಪಾಪಗಳನ್ನು ಈ ರೀತಿಯಲ್ಲಿ ನಿವಾರಿಸುವುದು ಯೇಸು ಕ್ರಿಸ್ತರ ಅವತಾರದ ಉದ್ದೇಶವಾಗಿದ್ದರೆ ಆ ರೀತಿಯ ಮರಣದಿಂದ ತನ್ನನ್ನು ಕಾಪಾಡಬೇಕೆಂದು ಸಂಕಟಪಟ್ಟು ಅವರು ಪ್ರಾರ್ಥಿಸಿದ್ದೇಕೆ? ಈ ಪ್ರಾರ್ಥನೆ ಅವರ ಆಗಮನೋದ್ದೇಶ ಅದಾಗಿರಲಿಲ್ಲವೆಂದು ಸ್ಪಷ್ಟ ಪಡಿಸುತ್ತದೆ.

1. ಗಲಾತ್ಯರಿಗೆ 3:13
2. ಮತ್ತಾಯ 15:24
3. ಮತ್ತಾಯ 26:39

ಪ್ರಾರ್ಥನೆಗುತ್ತರವಾಗಿ ತಾನು ಕಾಪಾಡಲ್ಪಡುವನೆಂಬ ಭರವಸೆ ದೇವರಿಂದ ಅವರಿಗೆ ಲಭಿಸಿರಬೇಕು.[4] ಶಿಲುಬೆಯ ಮೇಲೆ ಜಡಿಯಲ್ಪಟ್ಟ ಸಂದರ್ಭದಲ್ಲಿ, ಅತ್ಯಂತ ಅವಮಾನಕರವೂ ಅತೀವ ವೇದನಾಜನಕವೂ ಆದ ಆ ಮರಣದಿಂದ ಬದುಕುಳಿಯುವರೆ ಬಾಹ್ಯವಾಗಿ ಎಲ್ಲಾ ಮಾರ್ಗಗಳು ಮುಚ್ಚಲ್ಪಟ್ಟುದಾಗಿ ಅವರು ಅರಿತಾಗ ತನ್ನ ವಿಮುಕ್ತಿಯನ್ನು ಅಸಾಧ್ಯಗೊಳಿಸುವ ಏನಾದರೂ ಅಪರಾಧವನ್ನು ತಾನು ಮಾಡಿರುವನೇ ಎಂಬ ಭಯ ಅವರನ್ನು ತುಸುಕಾಲ ಬಾಧಿಸಿತು. ಏಕೆಂದರೆ, ಗೆತ್ಸೇಮನೆ ತೋಟದಲ್ಲಿ ಮನಕರಗುವ ತನ್ನ ಪ್ರಾರ್ಥನೆಗಳ ನಂತರ ತನ್ನ ರಕ್ಷಣೆಯ ಕುರಿತು ದೇವರಿಂದ ಅವರಿಗೆ ಸ್ಪಷ್ಟ ಭರವಸೆ ಲಭಿಸಿತ್ತು. ಆದ್ದರಿಂದಲೇ "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ಎಂದು ಅವರು ಮಹಾಧ್ವನಿಯಿಂದ ಕೂಗಿದರು[5] ಶಿಲುಬೆಯ ಮೇಲೆ ಮೃತ್ಯುವನ್ನಪ್ಪುವುದು ಯೇಸುಕ್ರಿಸ್ತರು ಮನುಷ್ಯ ವಂಶಕ್ಕೆ ನಿಯೋಗಿತರಾದ ಉದ್ದೇಶವಾಗಿದ್ದರೆ, ಆ ಉದ್ದೇಶದ ಪೂರ್ತೀಕರಣವೆಂಬಂತೆ ಮೃತ್ಯು ಅವರನ್ನು ಸಮೀಪಿಸುತ್ತಾ ಅವರು ಪಕ್ಕನೆ ಮೂರ್ಛಾವಸ್ಥೆಯನ್ನು ಪಡೆಯುತ್ತಿದ್ದಾಗ, ತನ್ನ ಅವತಾರದ ಉದ್ದೇಶ ನೆರವೇರಿತೆಂದೂ ಕೆಲವೇ ಗಂಟೆಗಳೊಳಗೆ ಅದು ಪೂರ್ಣಗೊಳ್ಳುವುದೆಂದೂ ನೆನಸಿ ಅವರು ಆಹ್ಲಾದಿಸಬೇಕಾಗಿತ್ತು. ತಾನು ನಿಸ್ಸಹಾಯಕನೆಂದು ಭಾವಿಸಿದ ಸಂದರ್ಭದಲ್ಲಿ ಅವರು ಹಾಗೆ ದೀನರೋದನವಮಾಡುತ್ತಿರಲಿಲ್ಲ. "ಏಲೀ, ಏಲೀ, ಲಮಾ ಸಬಕ್ತಾನೀ"[6]ಎಂದು ಮರಣ ಸಂಕಟದಿಂದ ಪುಲಾಪಿಸುವ ಬದಲು"ಹಾ,ಜಯಿಸಿತು! ಹಾ,ಜಯಿಸಿತು! ಉದ್ದೇಶ ಸಿದ್ಧಿಸಿತು, ನನ್ನ ಮುಖಾಂತರ ಮನುಷ್ಯ ಕುಲ ವಿಮೋಚನೆಗೊಂಡಿತು"ಎಂದು ಅವರು ಸಾರಬೇಕಾಗಿತ್ತು.

ಯೇಸು ಶಿಲುಬೆಯ ಮೇಲೆ ಮೃತಪಟ್ಟ ನಂತರ ಪುನರುತ್ಥಾನಗೊಂಡಿದ್ದರೆ, ಯೆರೂಸಲೇಮಿನ ಅತ್ಯಂತ ಉನ್ನತವಾದ ಸ್ಥಳವನ್ನೇರಿ ನಿಂತು ಮರಣದ ಮೇಲೆ ತನಗುಂಟಾದ ವಿಜಯದ ಕುರಿತು ಅವಿಶ್ವಾಸಿಗಳಾದ ಯಹೂದರ ಮುಂದೆ ಘೋಷಿಸಿ, ತಾನು ದೇವನ ಪುತ್ರನೇ ಆಗಿರುವೆನೆಂದು ಸಾಬೀತು ಪಡಿಸಲು ಈ ಖಂಡಿಸಲಾಗದ ದೃಷ್ಟಾಂತವನ್ನು ತೋರಿಸಿ, ತನ್ನಲ್ಲಿ ವಿಶ್ವಾಸವಿರಿಸಲು ಅವರನ್ನು ಆಹ್ವಾನಿಸುತ್ತಿದ್ದರು. ಆದರೆ ಯೇಸು ಹಾಗೆ ಮಾಡಿರಲಿಲ್ಲ. ಬದಲಾಗಿ, ತಾನು ಶಿಲುಬೆಯ ಮೇಲೆ ಮೃತಪಡಲಿಲ್ಲವೆಂದೂ ತಾನು 'ಶಾಪಗ್ರಸ್ತ'ನಲ್ಲವೆಂದೂ ಪಾರ್ಥಿವ ಶರೀರ ಸಹಿತ ಬದುಕಿರುವನೆಂದೂ ತನ್ನ ಶಿಷ್ಯರಿಗೆ ತಿಳಿಸಲಿಕ್ಕಾಗಿ ಅವರ ಪೈಕಿ ಕೆಲವರನ್ನು ಕೆಲವು ಸಂದರ್ಭಗಳಲ್ಲಿ ಭೇಟಿಯಾಗಿದ್ದರು. ತಾನು ಬದುಕುಳಿದಿರುವನೆಂಬ ಸಂಗತಿ ಬಯಲುಗೊಳಿಸಬಾರದೆಂದು ಅವರು ಶಿಷ್ಯರಿಗೆ ಹೇಳಿ ರಹಸ್ಯವಾಗಿ ಮಾತ್ರ ಅವರನ್ನು ಸಂದಿಸಿ, ಮಾತನಾಡುತ್ತಿದ್ದರು.[7] ಯೇಸು ಮೃತಪಟ್ಟ ನಂತರ ಪುನರುತ್ಥಾನ ಗೊಂಡುದನ್ನು ಅವಲಂಬಿಸಿ ಆ ಕಾಲದ ಒಬ್ಬ ಯಹೂದ್ಯನಾಗಲಿ ಯಹೂದ್ಯನಲ್ಲದವನಾಗಲಿ ಅವರನ್ನು ವಿಶ್ವಸಿಸಿದ್ದಾಗಿ ಯಾವ ಚರಿತ್ರೆ ದಾಖಲೆಯೂ ಇಲ್ಲ. ನಿಜವಾಗಿಯೂ ಹಾಗೆ ಸಂಭವಿಸಿದ್ದರೆ ಅದಕ್ಕಿಂತ ಮಿಗಿಲಾಗಿ ಕಾಣಲಿಚ್ಛಿಸಲಿಕ್ಕಿರುವ ಪವಾಡಕೃತ್ಯವೇನಿದೆ? ಒಟ್ಟಿನಲ್ಲಿ, ಶಿಲುಬೆಯ ಮೇಲಿನ ಮರಣ ಯೇಸುವಿನ ಆಗಮನದ ಉದ್ದೇಶವಾಗಿದೆ ಹಾಗೂ ಈ ಉದ್ದೇಶ ನೆರವೇರಿದೆ ಎಂಬ ಸಿದ್ಧಾಂತ ತೀರಾ ವಿಸಂಗತವೆಂದು ಮೇಲಿನ ವಿವರಣೆಗಳು ಸಾಬೀತು ಪಡಿಸುತ್ತವೆ.

ಯೇಸು ಮೇಲೆ ಹೇಳಿದ ಸಿದ್ಧಾಂತಗಳನ್ನು ಕಲಿಸಲಿಲ್ಲ. "ಧರ್ಮಶಾಸ್ತ್ರವನ್ನೂ ಪ್ರವಾದಿಗಳನ್ನೂ" ಅನುಸರಿಸುವುದೇ ಮುಕ್ತಿಮಾರ್ಗವೆಂದು ಯೇಸು ಒತ್ತಿ ಹೇಳಿದ್ದರು. ಯಾವುದು ಈ ಧರ್ಮಶಾಸ್ತ್ರ? ಅದು ಮೋಶೆಯ ಧರ್ಮಶಾಸ್ತ್ರವೆಂಬುದು ಸ್ಪಷ್ಟ. ಯಾವ ಪ್ರವಾದಿಗಳು? ಮೋಶೆಯ ನಂತರ ಇಸ್ರಾಯೇಲ್ ಪರಂಪರೆಯಲ್ಲಿ ಬಂದ ಪ್ರವಾದಿಗಳು. ಧರ್ಮಶಾಸ್ತ್ರವನ್ನು ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ತಾನು ಬಂದದ್ದೆಂದು ಯೇಸು ಪುನಃ ಪುನಃ ಹೇಳಿದರು. "ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು"[8] ಎಂದು ಸಹ ಯೇಸು ಹೇಳಿದರು.

---

4. ಇಬ್ರಿಯರಿಗೆ 5:7
5. ಮತ್ತಾಯ 27:46
6. ಮತ್ತಾಯ 27:46
7. ಅಪೊಸ್ತಲರ ಕೃತ್ಯಗಳು 10:41
8. ಮತ್ತಾಯ 5:17, 18

ಶಾಸ್ತ್ರಿಗಳೂ ಫಾರಿಸಾಯರೂ ಹೇಳಿದ ಪ್ರಕಾರ ಮಾಡಲಿಕ್ಕೆ ಅವರು ಶಿಷ್ಯರಿಗೂ ಅನುಯಾಯಿಗಳಿಗೂ ಬೋಧಿಸಿದರು. ಏಕೆಂದರೆ ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿರುವವರಾದ ಕಾರಣ ಮೋಶೆಯ ಧರ್ಮಶಾಸ್ತ್ರವನ್ನು ವ್ಯಾಖ್ಯಾನಿಸಲಿಕ್ಕೂ ವಿವರಿಸಲಿಕ್ಕೂ ಅವರಿಗೆ ಅಧಿಕಾರವಿದೆ. ಆದರೆ "ಅವರ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೇ ಹೊರತು ನಡೆಯುವುದಿಲ್ಲ" ಎಂದು ಯೇಸು ಹೇಳಿದರು.[9]

ಧರ್ಮಶಾಸ್ತ್ರ ಶಾಪವೆಂದೂ "ಪಾಪನಿವೃತ್ತಿ" ಮೂಲಕ ಮಾತ್ರವೇ ಮುಕ್ತಿ ಸಿದ್ಧಿಸುವುದೆಂಬ ವಿಶ್ವಾಸದಲ್ಲಿ ಅಧಿಷ್ಠಿತವಾದ ಈ ಸಿದ್ಧಾಂತ ಕಾಲಾಂತರದ ಒಂದು ಕಂಡುಹಿಡಿತ ಮಾತ್ರವಾಗಿದೆ. ಯೇಸು ಹೇಳಿದ ಅಥವಾ ಮಾಡಿದ ಯಾವುದರಲ್ಲೂ ಅದಕ್ಕೆ ಆಧಾರವಿಲ್ಲ. ತಾನು ದೇವಪುತ್ರನೆಂದು ಯೇಸು ಹೇಳಿದುದಾಗಿ ಪ್ರಸ್ತಾವಿಸಲಾಗಿದ್ದರೂ ಅದು ಮತಗ್ರಂಥಗಳಲ್ಲಿ ಸಾಮಾನ್ಯವಾಗಿ ಕಾಣಲ್ಪಡುವ ಒಂದು ರೂಪಕ ಪ್ರಯೋಗ ಮಾತ್ರವೆಂಬುದು ಸ್ಪಷ್ಟ. ಇದಕ್ಕೆ ಸಂಬಂಧಿಸಿ ಯಹೂದ್ಯ ಪುರೋಹಿತರು ಯೇಸುವಿನ ಮೇಲೆ ಅಪವಾದವನ್ನು ಹೊರಿಸಿದಾಗ ಯೇಸು ಅವರೊಡನೆ "ದೇವರವಾಕ್ಯವನ್ನು ಹೊಂದಿದವರನ್ನು ದೇವರುಗಳೆಂದು ಹೇಳಿರುವಲ್ಲಿ ತಂದೆಯು ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನುತ್ತೀರೋ?[10] ಎಂದು ಕೇಳಿದ್ದರು. ಇಸ್ರಾಯೇಲ್‌ಜನವು ದೇವರ "ಮಗ"ನೆಂದೂ "ಚೊಚ್ಚಲ ಮಗ"[11]ನೆಂದೂ ಬೈಬಲಿನಲ್ಲಿ ಹೇಳಲಾಗಿದೆ. ಸಮಾಧಾನ ಪಡಿಸುವವರನ್ನು "ದೇವರ ಮಕ್ಕಳು" ಎಂದು ವರ್ಣಿಸಲಾಗಿದೆ.[12] ಪ್ರಾರ್ಥನೆಯಲ್ಲಿ ವಿಶ್ವಾಸಿಗಳು ದೇವರನ್ನು ತಂದೆಯೇ ಎಂದು ಸಂಬೋಧಿಸುತ್ತಾರೆ. ಹೀಗೆ ವಿಶ್ವಾಸಿಗಳೆಲ್ಲ ದೇವರ ಪುತ್ರರಾಗುಗುತ್ತಾರೆ. ದೇವರ ವರಿಷ್ಠರನ್ನೂ ಸದಾಚಾರಿಗಗಳನ್ನೂ ಮನುಷ್ಯ ವಂಶವನ್ನೂ ಉದ್ದೇಶಿಸಿ ಈ ರೂಪಕ ಮಾತು ಬೈಬಲ್‌ನಲ್ಲೇ ಪ್ರಯೋಗಿಸಲ್ಪಟ್ಟುದಾಗಿ ಕಾಣಬಹುದು.

"ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ; ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ."[13] ಎಂದು ಯೇಸು ಸಾರಿ ಹೇಳಿದ್ದರು. ಯೋನಾ ಪ್ರವಾದಿ ತಿಮಿಂಗಿಲದ ಹೊಟ್ಟೆಯೊಳಗೆ ಜೀವಂತವಾಗಿ ಪ್ರವೇಶಿಸಿ, ಪ್ರಜ್ಞಾಹೀನ ಸ್ಥಿತಿಯಲ್ಲಾಗಿದ್ದರೂ ಜೀವಂತವಾಗಿ ಅಲ್ಲಿ ವಾಸಿಸಿ, ಜೀವಂತವಾಗಿಯೇ ಅದರಿಂದ ಹೊರಗೆ ಬಂದಿದ್ದರೆಂಬುದು ಇಲ್ಲಿ ಸ್ಮರಿಸಬಹುದು.[14] ಇದೇ ಪ್ರಕಾರ ಯೇಸು ಸಹ ಶಿಲುಬೆಯಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿ ಕೆಳಗಿಳಿಸಲ್ಪಟ್ಟು, ಜೀವಂತವಾಗಿ ಶವಕುಟೀರದಲ್ಲಿ ವಾಸ ಮಾಡಿಜೀವಂತವಾಗಿಯೇ ಅದರಿಂದ ಹೊರಗೆ ಬಂದರು.

ಅವರು ಶಿಲುಬೆಯ ಮೇಲೆ ಮೃತಪಟ್ಟಿದ್ದರೆ ಯೋನಾ ಪ್ರವಾದಿಯ ಸಂಭವದೊಂದಿಗೆ ಯಾವ ಸಾಮ್ಯತೆ ಅಥವಾ ತಾರತಮ್ಯತೆ ಇರುತ್ತಿರಲಿಲ್ಲ. ಅಲ್ಲವಾದರೆ ಯೋನಾ ತಿಮಿಂಗಿಲದ ಹೊಟ್ಟೆಯೊಳಗೆ ನಿರ್ಜೀವವಾಗಿದ್ದರೆಂದೂ ಅದರಿಂದ ಹೊರಗೆ ಬಂದ ನಂತರ ಪುನರುತ್ಥಾನಗೊಂಡರೆಂದೂ ಹೇಳಬೇಕಾದೀತು. ಇದನ್ನಾದರೋ, ಕ್ರೈಸ್ತ ಮತಾಧಿಕಾರಿಗಳು ಸಮ್ಮತಿಸಲಾರರು.

1946ರಲ್ಲಿ ನ್ಯೂಯೋರ್ಕಿನ 'ತೋಮಸ್ ನೆಲ್ಸನ್ ಎಂಡ್ ಸನ್ಸ್' ಪ್ರಕಾಶಗೊಳಿಸಿದ ಹೊಸ ಒಡಂಬಡಿಕೆಯ ರಿವೈಸ್ಡ್ ಸ್ಟೇಂಡರ್ಡ್ ವೆರ್ಶನ್‌ನಲ್ಲಿ ಯೇಸುವಿನ ಸಶರೀರ ಸ್ವರ್ಗಾರೋಹಣದ ಕುರಿತು ಹೇಳದೇ ಇರುವುದು ಅತ್ಯಂತ ಗಮನಾರ್ಹ.

ಪವಿತ್ರ ಖುರ್‌ಆನಿನ ಅಧ್ಯಾಪನವನುಸರಿಸಿ, ಯೇಸು ಇಸ್ರಾಯಿಲ್ಯರಲ್ಲಿ ನಿಯುಕ್ತರಾದ ಓರ್ವ ಸತ್ಯ ಪ್ರವಾದಿಯೆಂದು ಮುಸ್ಲಿಮರು ವಿಶ್ವಸಿಸುತ್ತಾರೆ. ಇಸ್ರಾಯಿಲ್ಯರಲ್ಲಿ ನಿಯೋಗಿತರಾದ ಕೊನೆಯ ಪ್ರವಾದಿ ತಾನೆಂದೂ ಯಹೂದ್ಯರು ತನ್ನನ್ನೂ ಅಂಗೀಕರಿಸುವುದಿಲ್ಲವಾದರೆ ಸ್ವರ್ಗರಾಜ್ಯ ಬೇರೊಂದು ಜನಾಂಗಕ್ಕೆ ಸಿಗುವುದೆಂದೂ ಯೇಸು ಒತ್ತಿ ಹೇಳಿದ್ದರು. ಒಟ್ಟಿನಲ್ಲಿ, ಇಸ್ರಾಯಿಲ್ಯರಲ್ಲಿ ಪ್ರವಾದಿ ಪರಂಪರೆ ಕೊನೆಗೊಂಡು

9. ಮತ್ತಾಯ 23:2, 3.
10. ಯೋಹಾನ. 10:35, 36
11. ವಿಮೋಚನ ಕಾಂಡ 4:22
12. ಮತ್ತಾಯ 5:9
13. ಮತ್ತಾಯ 16:4
14. ಯೋಹಾನ, ಅಧ್ಯಾಯ 2

ಇಸ್ರಾಯೆಲ್ಯರ "ಸಹೋದರರಾದ" ಇಶ್ಮಾಯೆಲ್ ಸಂತತಿಗಳಲ್ಲಿ "ಆಶ್ವಾಸಕ" ಅಥವಾ "ಸತ್ಯದ ಆತ್ಮ" ಆವಿರ್ಭವಿಸಿದರು.[15]

ಅವರು ಧರ್ಮಶಾಸ್ತ್ರ ವಾಹಕರಾದ ಕೊನೆಯ ಪ್ರವಾದಿಯಾಗಿದ್ದರು. ಅವರ ಮುಖಾಂತರ ಧರ್ಮ ಶಾಸ್ತ್ರವು ದೇವವಚನವಾದ ಪವಿತ್ರ ಖುರ್‌ಆನಿನ ರೂಪ ದಲ್ಲಿ ತಿಳಿಸಲ್ಪಟ್ಟಿತ್ತು. ಯೇಸು ಸಾರಿ ಹೇಳಿದಂತೆ ಮನುಷ್ಯವಂಶಕ್ಕೆಲ್ಲಾ ಮಾರ್ಗದರ್ಶಕವಾದ ಆ ಗ್ರಂಥದಲ್ಲಿ "ಸಕಲ ವಿಷಯದಲ್ಲಿಯೂ ಸತ್ಯ" ವಿಚಾರಗಳು ಅಡಕ ವಾಗಿವೆ.[16]

ಗೆತ್ಸೇಮನೆ ತೋಟದಲ್ಲಿ ಯೇಸುವಿನ ಹೃದಯ ವಿದ್ರಾವಕವಾದ ಪ್ರಾರ್ಥನೆ, ಶಿಲುಬೆಯ ಮೇಲೆ ದೀನ ರೋದನ, ಶಿಲುಬೆಯ ಮೇಲೆ ಕಷ್ಟಗಳನ್ನು ಅನುಭವಿಸಿದ ಪರಿಣಾಮದಿಂದ ಮೂರ್ಛೆಗೊಂಡು ಎಚ್ಚರ ಪಡೆದ ನಂತರ ಶಿಷ್ಯರನ್ನು ಭೇಟಿಯಾಗುವ ವಿಷಯದಲ್ಲಿ ಅವರು ಕೈಗೊಂಡ ರಕ್ಷೋಪಾಯಗಳು ಇವೆಲ್ಲಾ ಖುರ್‌ಆನ್ ಘೋಷಿಸುವ ಸತ್ಯಕ್ಕೆ ಅನುಸಾರವಾಗಿರುತ್ತವೆ. ಶಿಲುಬೆಯ ಮೇಲಿನ ಅಪಮಾನಕರವಾದ ಮರಣದಿಂದ ರಕ್ಷೆ ಹೊಂದುವ ಸ್ವಾಭಾವಿಕವಾದ ಆಶೆಯಾಗಿತ್ತು ಗೆತ್ಸೇಮನೆ ತೋಟದಲ್ಲಿ ಅವರು ಮಾಡಿದ ಪ್ರಾರ್ಥನೆಗೆ ಪ್ರೇರಣೆ. ಶಿಲುಬೆಗೇರಿಸಿ ಕೊಲ್ಲುವುದರಲ್ಲಿ ಯಹೂದರು ಜಯ ಶಾಲಿಗಳಾದರೆ, ತಾನು ಶಾಪಗ್ರಸ್ತನಾದನೆಂದೂ, ಒಟ್ಟಾರೆ ಸತ್ಯಪ್ರವಾದಿಯಾಗುವರೆ ಸಾಧ್ಯವಿಲ್ಲವೆಂದೂ ಅವರು ವಾದಿಸುವರೆಂಬ ಶಂಕೆ–ಯಹೂದರು ಇಂದಿಗೂ ಹೇಳುವುದು ಹಾಗೆಯೇ[17]–ಅವರ ಆ ಇಚ್ಛೆಯನ್ನು ಬಲ ಪಡಿಸಿತು.

ಮನುಷ್ಯ ವಂಶಕ್ಕಾಗಿ "ಶಾಪಗ್ರಸ್ತ"ನಾಗಲಿಕ್ಕಲ್ಲ, ಆ ಹೀನಾಯ ಮರಣದಿಂದ ರಕ್ಷೆಹೊಂದಕ್ಕಾಗಿ ಆ ಮಹಾತ್ಮರು ವ್ಯಾಕುಲರಾಗಿದ್ದರು. ತನ್ನಲ್ಲಿ ವಿಶ್ವಾಸವಿರಿಸುವ ಸಂಗತಿಯಲ್ಲಿ ತನ್ನ ಜನತೆಗೆ ಒಂದು ಸ್ಥಿರವಾದ ಮಾರ್ಗ ತಡೆಯುಂಟಾಗಬಾರದೆಂದು ಅವರ ಅಭಿಲಾಷೆಯಾಗಿತ್ತು. ಮನುಷ್ಯಕುಲಕ್ಕಾಗಿ ಅಲ್ಪಕಾಲಕ್ಕಾದರೂ ಶಾಪಗ್ರಸ್ತನಾಗುವ ಮನೋಗತ ಯೇಸುವನ್ನು ಸ್ಪರ್ಶಿಸಲೇ ಇಲ್ಲ.

15. ಧರ್ಮೋಪದೇಶ ಕಾಂಡ 18:18
16. ಯೋಹಾನ 16:13
17. ಧರ್ಮೋಪದೇಶ ಕಾಂಡ 21:23

ತನ್ನೊಂದಿಗೆ ಶಿಲುಬೆಗೆ ಹಾಕಲಾದ ಇಬ್ಬರು ಕಳ್ಳರಲ್ಲಿ ಒಬ್ಬನೊಡನೆ, ಅವನು ಅಂದು ರಾತ್ರಿ ತನ್ನ ಸಂಗಡ ಪರದೈಸಿನಲ್ಲಿರುವಿ ಎಂದು ಹೇಳಿದರು. ರಕ್ಷೆಹೊಂದಲು ಯಾವ ದಾರಿಯೂ ತೋರುವುದಿಲ್ಲವೆಂದಾಗ, ದೇವರ ಅಚಂಚಲವಾದ ಇಚ್ಛೆ ತಾನು ಮರಣ ಹೊಂದಬೇಕೆಂದಿದ್ದರೆ, ಹಾಗೇ ಆಗಲಿ ಎಂದು ಅಂದುಕೊಂಡರು. ಆದರೂ ಯಹೂದರ ಕಣ್ಣೆದುರಿಗೆ ತಾನು ಒಂದು ವೇಳೆ "ಶಾಪ ಗ್ರಸ್ತ" ಆಗಿಬಿಟ್ಟರೆ ಉಂಟಾಗಬಹುದಾದ ಪರಿಣಾಮ ಗಳನ್ನು ನೆನೆಸಿ ಅವರು ಉಡುಗಿಕೊಳ್ಳದಿರಲಿಲ್ಲ. ಹಾಗೆ, ಅವರು ಆ ಕಳ್ಳನಿಗೆ, ಮರಣದ ಕವಾಟವನ್ನು ಆ ದಿನ ತಾವಿಬ್ಬರೂ ದಾಟಿ ಬಿಟ್ಟರೆ, ಪರದೈಸಿನಲ್ಲಿ ಇಬ್ಬರು ಒಟ್ಟಿಗೆ ಇರುವುದಾಗಿ ಭರವಸೆಯಿತ್ತರು.[18]

ಯೇಸುವಿನ ಶರೀರವನ್ನು ಅರಿಮಥ್ಯದ ಯೊಸೆಫ ನಿಗೆ ಕೈವರ್ತಿಸುವರೆ ಶಿಲುಬೆಯಿಂದ ಇಳಿಸುವ ತುಸು ಮೊದಲು ಯೇಸುವಿನ ಪಕ್ಕೆಯನ್ನು ರೋಮನ್ ಸಿಪಾಯಿ ಯೋರ್ವ ಈಟಿಯಿಂದ ತಿವಿದಾಗ ರಕ್ತವೂ ನೀರೂ ಹೊರಟಿತು.[19] ಇದು ಅವರು ಮೃತಪಟ್ಟಿರಲಿಲ್ಲವೆಂಬು ದಕ್ಕೆ ಪ್ರಬಲವಾದೊಂದು ಸಾಕ್ಷ್ಯವಾಗಿದೆ.

ಒಟ್ಟಿನಲ್ಲಿ, ಯೇಸು ಶಿಲುಬೆಯ ಮೇಲೆ ಮೃತಪಡ ಲಿಲ್ಲವೆಂಬ ವಿಚಾರದಲ್ಲಿ ಯಾವ ವಿವಾದಕ್ಕೂ ಎಡೆಯಿಲ್ಲ. ಶಿಲುಬೆಯಿಂದ ಕೆಳಗಿರಿಸಿದಾಗ ಅವರು ಪ್ರಜ್ಞಾರಹಿತರಾಗಿದ್ದರು. ಅವರ ಶರೀರವನ್ನು ಪಡೆಕೊಂಡ ಶಿಷ್ಯರು ಸ್ನೇಹಪುರಸ್ಸರದಿಂದ ಶುಶ್ರೂಷೆ ನೀಡಿ ಗಾಯಗಳಿಗೆ ಲೇಪನ ದ್ರವ್ಯಗಳನ್ನೂ ಗಿಡ ಮೂಲಿಕೆಗಳನ್ನೂ ಹಚ್ಚಿದರು. ಹಾಗೆ ಮೂರನೆಯ ದಿನ ಶವ ಕುಟೀರ ಬಿಟ್ಟು ಹೊರಗೆ ಬರಲಿಕ್ಕಾಗುವಷ್ಟರ ಮಟ್ಟಿಗೆ ಅವರು ಗುಣ ಹೊಂದಿದರು. ತದನಂತರ ಯೇಸು ಹಲವೆಡೆಗಳಲ್ಲಿ ತನ್ನ ಶಿಷ್ಯಜನರನ್ನು ಸಂದಿಸುತ್ತಲೂ (ಇದಕ್ಕೆ ಸಂಬಂಧಿಸಿ ಸುವಾರ್ತೆ ವಿವರಣೆಗಳಲ್ಲಿ ಬಹಳಷ್ಟು ಪರಸ್ಪರ ಭಿನ್ನತೆ ಗಳಿವೆ) ಆ ಸಂದರ್ಭದಲ್ಲೆಲ್ಲಾ ತನ್ನ ಸುಳುಹು ಹೊರಗೆಡ ಹದಿರಲಿಕ್ಕೂ ತಾನು ಬದುಕುಳಿದಿರುವೆನೆಂದು ವಾರ್ತೆ ವೈರಿಗಳ ಕಿವಿಗೆ ಬೀಳದಿರಲಿಕ್ಕಾಗಿಯೂ ಅಗತ್ಯವಿದ್ದ ಜಾಗ್ರತೆಯನ್ನು ವಹಿಸುತ್ತಿದ್ದರು.

18. ಲೂಕ 23:43
19. ಯೋಹಾನ, 19:34



ಶ್ರೀನಗರದಲ್ಲಿ ಯೇಸುವಿನ ಸಮಾಧಿ

ಹಾಗೆ ತಾನು ಶಿಲುಬೆಯ ಮೇಲೆ ಮೃತಪಡಲಿಲ್ಲ ವೆಂಬ ವಿಚಾರದಲ್ಲಿ ಸಾಕಷ್ಟು ಸಾಕ್ಷ್ಯಗಳನ್ನೂ ಪುರಾವೆ ಗಳನ್ನೂ ದೃಢಪಡಿಸಿದ ನಂತರ ದೈವಿಕ ನಿರ್ದೇಶವನ್ನನು ಸರಿಸಿ ಪೆಲೆಸ್ತೀನ್ ಬಿಟ್ಟು ಇಸ್ರಾಯಿೂಲ್ ಮನೆತನದ ಕಾಣೆಯಾದ ಗೋತ್ರಗಳು ವಾಸಿಸುತ್ತಿದ್ದ ರಾಜ್ಯಗಳಲ್ಲಿ ಸಂಚರಿಸಿ ದಿವ್ಯ ಸಂದೇಶವನ್ನು ಅವರಿಗೆ ತಲಪಿಸುವ ತನ್ನ ದೌತ್ಯನಿರ್ವಹಣೆಗಾಗಿ ಹೊರಡಲು ತೀರ್ಮಾನಿಸಿದರು.

ಹೀಗೆ ಯೇಸು ತನ್ನ ದೌತ್ಯ ಪೂರ್ತಿಗೊಳಿಸಿದ ನಂತರ ನೈಸರ್ಗಿಕ ರೀತಿಯಲ್ಲಿ ಮರಣವನ್ನಪ್ಪಿ ಕಾಶ್ಮೀರದ ಶ್ರೀನಗರದಲ್ಲಿ ಸಮಾಧಿ ಹೊಂದಿದರು. ದೈವಿಕ ಜ್ಞಾನ ಹಾಗೂ ನಂತರ ನಡೆಸಿದ ಪರಿಶೋಧನೆಯ ಮೂಲಕ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಶ್ರೀನಗರದ ಖಾನ್ ಯಾರ್ ಬೀದಿಯಲ್ಲಿ ಯೇಸು ಕ್ರಿಸ್ತರ ಸಮಾಧಿಯನ್ನು ಗುರುತಿಸಿದರು. ಆ ಸಮಾಧಿ ಈಗಲೂ ಅಲ್ಲಿದೆ. ಯೇಸು ಶಿಲುಬೆಯ ಮೇಲೆ ಮೃತಪಡಲಿಲ್ಲವೆಂಬ ವಿಚಾರ ದಲ್ಲಿ ಉಂಟಾಗಬಹುದಾದ ಸಕಲ ಸಂಶಯಗಳು ಈ ಸಂಶೋಧನೆ ಮೂಲಕ ನಿವಾರಿಸಲ್ಪಟ್ಟಿವೆ. ಮಾತ್ರವಲ್ಲ, ಯೇಸುವಿನ ಜೀವಿತದ ಕುರಿತು ನೂರಾರು ವರ್ಷಗಳಿಂದ ಊಹಿಸಿಕೊಂಡು ಬರುತ್ತಿರುವ ಅನೇಕ ಅನಿಶ್ಚಿತ ವಿಚಾರ ಗಳಿಗೂ ಪರಿಹಾರವುಂಟಾಯಿತು.

ಪರಮಾತ್ಮನು ಆ ಮಹಾತ್ಮನ ಆತ್ಮಕ್ಕೆ ಚಿರಶಾಂತಿ ನೀಡಿ ಅವರ ಮೇಲೆ ಕರುಣೆಯನ್ನು ಸುರಿಸಲಿ.

★


READ **BADR**

URDU WEEKLY

Single Copy: 0–30 Paise    Annual Subscription: Rs. 15/-

Apply To : The Manager,
"Badr" Urdu Weekly, P. O. QADIAN–143516. (Punjab)

READ **MINARET**

ENGLISH QUARTERLY JOURNAL

Single Copy : Rs. 1-25    Annual Subscription: Rs. 5/-

Apply to : Mr. M. P Koyatty
Minaret Accounting Section
14/346, Francis Road,
CALICUT-670003 (Kerala)

# ಹಿಜರಿ ಹದಿನಾಲ್ಕನೆಯ ಶತಮಾನದ ಕೊನೆ

## ಮುಸಲ್ಮಾನರಿಗೆ ಚಿಂತಾರ್ಹವಾದ ಸಂಗತಿ

—ಮೌಲಾನಾ ಶರೀಫ್ ಅಹ್ಮದ್ ಅಮೀನಿ,
ನಾಝಿರ್ ವಅವತ್-ವೊ-ತಬ್ಲೀಗ್, ಸದರ್ ಅಂಜುಮನ್ ಅಹ್ಮದಿಯಾ, ಖಾದಿಯಾನ್.

"ವಖ್ತ್ ಥಾ ವಖ್ತೇ ಮಸೀಹಾ ನ ಕಿಸೀ ಔರ್ ಕಾ ವಕ್ತ್
ಮೈಂ ನ ಆತಾ ತೊ ಕೊಈ ಔರ್ ಹಿ ಆಯಾ ಹೋತಾ"

(ಕಾಲವು ಮಸೀಹ್ ಬರುವ ಕಾಲವೇ ಆಗಿತ್ತು. ಇದು ಬೇರೆಯವರ ಆಗಮನದ ಕಾಲವಾಗಿರಲಿಲ್ಲ. ನಾನು ಬಂದಿರಲಿಲ್ಲವಾದರೆ ಬೇರೆ ಯಾರಾದರೂ ಬರುತ್ತಿದ್ದರು).

"ಇಸ್ಮವೂಸೌತಸ್ಸಮಾ–ಜಾಅಲ್ ಮಸೀಹ್ ಜಾಅಲ್ ಮಸೀಹ್
ನೇಝ್ ಬಶ್ನೊ ಅಝ್ ಝಮೀನ್ ಆಮದ್ ಇಮಾಮೆ ಕಾಮ್‌ಗಾರ್"

(ಆಕಾಶದ ಧ್ವನಿಯನ್ನು ಆಲಿಸಿರಿ: ಮಸೀಹ್ ಬಂದಿರುವರು, ಮಸೀಹ್ ಬಂದಿರುವರು. ಪುನ: ಆಲಿಸಿರಿ: ಕಾರ್ಯ ಕೌಶಲವುಳ್ಳ ನಾಯಕ (ಇಮಾಮ್) ಭೂಮಿಯಿಂದಲೇ ಬರುವರು).

—ಹಝ್‌ರತ್ ಅಹ್ಮದ್
(ಮಸೀಹ್ ಮೌಊದ್ – ವಾಗ್ದತ್ತ ಮಸೀಹ್)

### 1

ಮಾನ್ಯ ಸಹೋದರರೇ, ಇಂದಿನಿಂದ ಹದಿನಾಲ್ಕು ನೂರು ವರ್ಷಗಳ ಹಿಂದೆ ಹಝ್‌ರತ್ ಮುಹಮ್ಮದ್ ಪೈಗಂಬರರು ಮುಸ್ಲಿಮ್ ಜನಾಂಗದಲ್ಲಿ ಮುಜದ್ದಿದರ (ಧಾರ್ಮಿಕ ಸುಧಾರಕರ) ಮತ್ತು ಒಬ್ಬ ಮಹದೀ ಮತ್ತು ಮಸೀಹರ ಆಗಮನದ ಕುರಿತು ಭವಿಷ್ಯ ನುಡಿದಿದ್ದರು. ಈ ಭವಿಷ್ಯವಾಣಿ ಪೈಗಂಬರರ ವಚನ ಸಂಗ್ರಹಗಳಲ್ಲಿ ಉಲ್ಲೇಖಿತವಾಗಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

(i) "ಇನ್ನಲ್ಲಾಹ ಯಬ್‌ಅಸು ಲಿಹಾದಿಹಿಲ್ ಉಮ್ಮತಿ ಅಲಾ ರಅ್‌ಸಿ ಕುಲ್ಲಿ ಮಿಅತಿ ಸನತಿನ್ ಮನ್ ಯುಜದ್ದಿದು ಲಹಾ ದೀನಹಾ" (ಅಬೂದಾವೂದ್, ಸಂಪುಟ 2 ಪುಟ 241 ಮತ್ತು ಉಸೂಲ್ ಕಾಫೀ ಪುಟ 691, ಖಾತಿಮತುತ್ತಬಅ)

—ಪ್ರತಿಯೊಂದು ಶತಮಾನದ ಆರಂಭದಲ್ಲಿ ದೇವರು ಮತ ಸುಧಾರಕರಾದ ಮುಜದ್ದಿದ್‌ರನ್ನು ಈ ಜನಾಂಗದ ಸುಧಾರಣೆಗೆ ಕಳುಹಿಸುವನು.

(ii) ಕೈಫ ಅನ್‌ತುಮ್ ಇದಾ ನಝಲ ಫೀ ಕುಮುಬ್ನುಮರ್‌ಯಮ ವ ಇಮಾಮುಕುಮ್ ಮಿನ್ ಕುಮ್" (ಬುಖಾರಿ, ಸಂಪುಟ 2– ಮಿಷ್ಕಾತ್, ಬಾಬ್, ನುಜೂಲ್ ಈಸಾ)

—ಓ ಜನರೇ, ನಿಮ್ಮವರಲ್ಲಿಯೇ ನಿಮ್ಮ ನೇತಾರನಾಗಿ ಈಸಬ್ನು ಮರ್‌ಯಮ್ ಆಗಮಿಸುವಾಗ ನಿಮ್ಮ ಸ್ಥಿತಿ ಯಾವ ರೀತಿ ಇರುವುದು?

(iii) "ವ ಲಲ್ ಮಹ್‌ದೀ ಇಲ್ಲಾ ಈಸಬ್ನು ಮರ್‌ಯಮ" (ಇಬ್ನ ಮಾಜ, ಬಾಬ್ ಶಿದ್ದತುಝ್ಝಮಾನ್)

—ಇಮಾಮ್ ಮಹದೀ ಮತ್ತು ಈಸಬ್ನು ಮರ್‌ಯಮ್ ಒಬ್ಬರೇ ಆಗಿರುವರು.

(iv) "ಯೂಶಿಕು ಮನ್ ಆಷ ಮಿನ್‌ಕುಮ್ ಅನ್‌ಯ್ಯಲ್‌ಖಾ ಈಸಬ್ನ ಮರ್‌ಯಮ ಇಮಾಮನ್ ಮಹದಿಯ್ಯನ್ ಹಕಮನ್ ಅದ್‌ಲಾ" (ಮುಸ್ನದ್ ಅಹ್ಮದಿಬ್ನು ಹಂಬಲ್ ಸಂಪುಟ 2, ಪುಟ 411)

—ನಿಮ್ಮವರ ಪೈಕಿ ಜೀವಿಸಿರುವವರು ಈಸಬ್ನು ಮರ್‌ಯಮ್‌ರವರನ್ನು ಭೇಟಿಯಾಗುವರು. ಅವರು ಇಮಾಂ ಮಹ್‌ದಿಯಾಗಿಯೂ ಆಜ್ಞಾಪಿಸುವವರಾಗಿಯೂ, ನ್ಯಾಯ ಪರಿಪಾಲನೆ ಮಾಡುವವರಾಗಿಯೂ ಆಗಮಿಸುವರು.

(v) "ಅನ್ ಹುದೈಫತಿಬ್ನಿ ಯಮಾನ್ ಖಾಲ ರಸೂಲುಲ್ಲಾಹಿ ಸಲ್‌ಅಮ್ ಇದಾ ಮಲತ್ ಅಲ್‌ಫುನ್ ವ ಮಿಅತಾನಿ ವ ಅರ್‌ಬಊನ ಸನತನ್ ಯಬ್‌ಅಸುಲ್ಲಾಹುಲ್ ಮಹದೀ" (ಅನ್ನಜ್ಮುಸ್ಸಾಖಿಬ್ ಸಂಪುಟ 2, ಪುಟ 209).

—ಹಝ್ರತ್ ಹುದೈಫತಿಬ್ನು ಯಮಾನ್ ಈ ರೀತಿ ವರದಿ ಮಾಡಿರುವರು: "ಪೈಗಂಬರರು ಈ ರೀತಿ ಹೇಳಿದರು: 1240 ವರ್ಷ ದಾಟಿದ ಮೇಲೆ ದೇವರು ಮಹ್‌ದೀಯವರನ್ನು ಕಳುಹಿಸುವನು.

(vi) "ಯಖ್ರುಜುಲ್ ಮಹ್‌ದೀ ಮಿನ್ ಕರ್‌ಯತಿನ್ ಯುಖಾಲು ಲಹಾ ಕಾದಿಅ." (ಜವಾಹಿರುಲ್ ಅಸ್ರಾರ್ ಕಲಮೀ ಹಝ್ರತ್ ಶೇಖ್ ಅಲಿ ಹಂಜಬ್ನು ಮಲಿಕ್ ಥೂಸೀ ಮತ್ತು ಇರ್‌ಶಾದಾತೆ ಫರೀದೀ, ಸಂಪುಟ 3, ಪುಟ 70).

—ಮಹ್‌ದೀ ಕಾದಿಅ ಎಂಬ ಊರಲ್ಲಿ ಜನಿಸುವರು. (ಕಾದಿಅ ಎಂಬುದು ಖಾದಿಯಾನ್ ಶಬ್ದದ ಅರಬೀ ರೂಪವಾಗಿದೆ.)

(vii) ಇನ್ನ ಲಿ ಮಹ್‌ದೀನಾ ಆಯತೈನಿ ಲಮ್ ತಕೂನಾ ಮುಂದು ಖಲ್‌ಖಿಸ್ಸಮಾವಾತಿ ವಲ್ ಅರ್‌ಲಿ ಯನ್‌ಕಸಿಫುಲ್ ಖಮರ ಲಿ ಅವ್ವಲಿ ಲೈಲತಿನ್ ಮಿನ್ ರಮಲಾನ ವ ತನ್‌ಕಸಿಫುಶ್ಶಂಸ ಫಿನ್ನಿಸ್‌ಫಿ ಮಿನ್‌ಹು". (ದಾರ್ ಖುಥ್ನಿ, ಪುಟ 188).

—ನಮ್ಮ ಮಹ್‌ದಿ ಅವರಿಗೆ ಎರಡು ವಿಶೇಷ ಚಿಹ್ನೆಗಳಿವೆ ಈ ಚಿಹ್ನೆಗಳು ಆಕಾಶ ಭೂಮಿಗಳ ಸೃಷ್ಟಿಯ ನಂತರ ಯಾರ ಪರವಾಗಿಯೂ ವ್ಯಕ್ತಗೊಳಿಸಲ್ಪಟ್ಟಿಲ್ಲ. ರಮ್‌ಝಾನ್ ತಿಂಗಳಲ್ಲಿ ಚಂದ್ರಗ್ರಹಣ ಸಂಭಾವ್ಯ ರಾತ್ರೆಗಳಲ್ಲಿ ಪ್ರಥಮ ರಾತ್ರೆ (13ನೇ ರಾತ್ರೆ) ಮತ್ತು ಸೂರ್ಯಗ್ರಹಣ ಸಂಭಾವ್ಯ ದಿನಗಳಲ್ಲಿ ಮಧ್ಯ ದಿನ ಎಂದರೆ (28ನೇ ದಿನ) ಚಂದ್ರ – ಸೂರ್ಯ ಗ್ರಹಣಗಳು ಸಂಭವಿಸುವುವು.

ಈ ಗ್ರಹಣಗಳು ಕ್ರಿ. ಶ. 1894ನೇ ಇಸವಿಯಲ್ಲಿ (ಹಿಜರಿ 1311ನೇ ವರ್ಷದಲ್ಲಿ) ನಿಶ್ಚಿತ ದಿನಾಂಕಗಳಲ್ಲಿ ಸಂಭವಿಸಿದುವು.

ಹಝ್ರತ್ ಈಸಬ್ನು ಮರ್‌ಯಮ್ (ಅ.) ಮೃತರಾಗಿರುವರೆಂದು ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಅವರು ಪುನರಾಗಮಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಇದೇ ಕಾರಣದಿಂದ ಬರಲಿರುವ ಇಮಾಮ್ ಮಹ್‌ದಿಯವರನ್ನು ಮಸೀಹ್ ಮೌಊದರೆಂದು ಕರೆಯಲಾಯಿತು. ಆಗಮಿಸುವರೆಂದು ಭವಿಷ್ಯ ನುಡಿಯಲ್ಪಟ್ಟವರು ಇಬ್ಬರು ವ್ಯಕ್ತಿಗಳಲ್ಲವೆಂದೂ ಒಬ್ಬರೇ ವ್ಯಕ್ತಿಯೆಂದೂ ಅವರು ಇಮಾಮ್ ಮಹ್‌ದೀ ಮತ್ತು ಮಸೀಹ್ ಎಂಬ ಹೆಸರಿನಿಂದ ಕರೆಯಲ್ಪಟ್ಟಿರುವರೆಂದೂ ವ್ಯಕ್ತವಾಗುತ್ತದೆ.

## 2

ಸತ್ಯಾನ್ವೇಷಿಗಳೇ, ಮೇಲಿನ ಪೈಗಂಬರ್ ವಚನಗಳಲ್ಲಿ ಸೂಚಿತವಾದ ಚಿಹ್ನೆಗಳು ವ್ಯಕ್ತಗೊಂಡ ಕಾರಣ ಮುಸ್ಲಿಂ ಜನಾಂಗದ ಹಿರಿಯರು ಹಿಜರಿ ಹದಿಮೂರನೇ ಶತಮಾನದ ಕೊನೆಯಲ್ಲಿ ಅಥವಾ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಇಮಾಮ್ ಮಹ್‌ದೀ ಮತ್ತು ಮಸೀಹ್ ಆಗಮಿಸುವರೆಂದು ಶುಭವಾರ್ತೆ ನೀಡುತ್ತಾ ಇದ್ದರು. ಉದಾಹರಣೆಗಾಗಿ ನೋಡಿರಿ:—

(ಅ) ನವಾಬ್ ಸಿದ್ದೀಖ್ ಹಸನ್‌ಖಾನ್ ಸಾಹೇಬ್ (ಭೋಪಾಲಿನವರು) ಹಿಜರಿ ಹದಿಮೂರನೆಯ ಶತಮಾನದ ಕೊನೆಯಲ್ಲಿ ತನ್ನ ಗ್ರಂಥವಾದ "ಹುಜಜುಲ್ ಕಿರಾಮ"ದ 139ನೇ ಪುಟದಲ್ಲಿ ಈ ರೀತಿ ಬರೆದಿರುತ್ತಾರೆ:

"ವ ಬರ್ ಸರ್ ಮಿಅತ್ ಥಾರ್‌ದಹಮ್ ಕೆ ದಹ್ ಸಾಲ್ ಕಾಮಿಲ್ ಆನ್‌ರಾ ಬಾಖೀ ಅಸ್ತ್ ಅಗರ್ ಝುಹೂರೇ ಮಹ್‌ದೀ ಅಲೈಹಿಸ್ಸಲಾಮ್ ವ ನುಝೂಲೇ ಈಸಾ ಸೂರತ್ ಗಿರಫ್ತ್ ಪಸ್ ಏಶಾನ್ ಮುಜದ್ದಿದ್ ವ ಮುಜ್ತಹಿದ್ ಬಾಶಂದ್."

—ಹದಿನಾಲ್ಕನೆಯ ಹಿಜರಿ ಶತಮಾನ ಆರಂಭವಾಗಲಿಕ್ಕೆ ಇನ್ನು ಹತ್ತು ವರ್ಷಗಳು ಬಾಕಿ ಇವೆ. ಹದಿನಾಲ್ಕನೆಯ ಶತಮಾನದ ಆರಂಭಕಾಲದಲ್ಲಿ ಇಮಾಮ್ ಮಹ್‌ದೀ ಮತ್ತು ಮಸೀಹ್ ಆಗಮಿಸಿದರೆ ಅವರು ಆ

ಶತಮಾನದ ಮುಜದ್ದಿದ್ ಮತ್ತು ಮುಜ್ತಹಿದ್ (ಧರ್ಮಸುಧಾರಕ ಮತ್ತು ಚಿಂತಕ) ಆಗುವರು.

(ಆ) ಇದೇ ಪ್ರಕಾರ ನವಾಬ್ ಸಾಹೇಬರ ಸುಪುತ್ರರಾದ ಅಬುಲ್‌ಖೈರ್ ನವಾಬ್ ನೂರುಲ್ ಹಸನ್ ಖಾನ್ ಸಾಹೇಬ್ ಹಿಜರಿ ಹದಿನಾಲ್ಕನೆಯ ಶತಮಾನ ಆರಂಭಗೊಂಡ ನಂತರ ತನ್ನ "ಇಖ್ತಿರಾಬು ಸ್ಸಾಅತ್" ಎಂಬ ಗ್ರಂಥದ 221 ನೇ ಪುಟದಲ್ಲಿ ಈ ರೀತಿ ಬರೆದಿರುತ್ತಾರೆ:—

"ಇಸ್ ಹಿಸಾಬ್ ಸೆ ಝುಹೂರೆ ಮಹ್‌ದೀ ಅಲೈಹಿಸ್ಸಲಾಮ್ ತೇರವೀನ್ ಸದೀ ಮೇ ಹೋವಾ ಚಾಹಿಯೇ ಥಾ. ಮಗರ್ ಯಹ್ ಸದೀ ಪೂರೀ ಗುಝರ್ ಗಯೀ ತೊ ಮಹ್‌ದೀ ನ ಆಯೇ. ಅಬ್ ಚೌಧವೀನ್ ಸದೀ ಹಮಾರೇ ಸಿರ್‌ಪರ್ ಆತೀ ಹೈ. ಇಸ್ ಸದೀ ಕೆ ಇಸ್ ಕಿತಾಬ್ ಕೆ ಲಿಖ್ನೇತಕ್ ಛೇ ಮಾಹ್ ಗುಝರ್ ಚುಕೇ ಹೈಂ–ಶಾಯದ್ ಅಲ್ಲಾಹ್ ತಆಲಾ ಅಪ್ನಾ ಫಝಲ್ ವ ಅದಲ್ ವ ರಹಮ್ ವ ಕರಮ್ ಫರ್ಮಾಯೆ. ಚಾರ್ ಛೇ ಸಾಲ್ ಕೆ ಅಂದರ್ ಮಹದೀ ಝುಹಿರ್ ಹೋ ಜಾಯೇಂ."

—ಈ ಲೆಕ್ಕದ ಪ್ರಕಾರ ಮಹ್‌ದೀ ಅವರ ಆಗಮನ ಹಿಜರಿ ಹದಿಮೂರನೆಯ ಶತಮಾನದಲ್ಲಿ ಆಗಬೇಕಿತ್ತು. ಆದರೆ ಈ ಶತಮಾನ ಪೂರ್ಣವಾಗಿ ಮುಗಿದರೂ ಮಹ್‌ದೀ ಅವರು ಬರಲಿಲ್ಲ. ಈಗ ಹದಿನಾಲ್ಕನೆಯ ಶತಮಾನವನ್ನು ನಾವು ಪ್ರವೇಶಿಸಿರುವೆವು. ಈ ಗ್ರಂಥ ಬರೆಯುವ ತನಕ ಈ ಶತಮಾನ ಆರಂಭವಾಗಿ ಆರು ತಿಂಗಳು ಕಳೆದಿವೆ. ದೇವರು ತನ್ನ ಅನುಗ್ರಹ ಮತ್ತು ದಯೆಯನ್ನು ನಮ್ಮ ಮೇಲೆ ಸುರಿಸಲಿ. ನಾಲ್ಕು–ಆರು ವರ್ಷಗಳೊಳಗೆ ಮಹ್‌ದಿ ಆಗಮಿಸುವಂತೆ ಆಗಲಿ."

(ಇ) ಖ್ವಾಜಾ ಹಸನ್ ನಿಝಾಮಿ ಸಾಹೇಬರು ಮುಸ್ಲಿಮ್ ದೇಶಗಳನ್ನು ಸಂದರ್ಶಿಸಿದ ನಂತರ ಈ ಕೆಳಗಿನಂತೆ ಬರೆದರು :

"ಮಮಾಲಿಕೆ ಇಸ್ಲಾಮಿಯಾ ಕೆ ಸಫರ್ ಮೇ ಜಿತ್ನೇ ಮಶಾಯಿಖ್ ಔರ್ ಉಲಮಾ ಸೆ ಮುಲಾಖಾತ್ ಹುಯೀ ಮೈಂ ನೇ ಉನ್‌ಕೋ ಇಮಾಮ್ ಮಹ್‌ದೀ ಕಾ ಬಡೀ ಬೇತಾಬೀ ಸೇ ಮುಂತಜಿರ್ ಪಾಯಾ. ಶೇಖ್ ಸನೂಸೀ ಕೇ ಏಕ್ ಖಲೀಫಾ ಸೇ ಮುಲಾಖಾತ್ ಹುಯೀ. ಉನೋಂನೆ ತೋ ಯಹಾಂ ತಕ್ ಕಹ್ ದಿಯಾ ಕೆ ಇಸೀ ಸಿನ 1331 ಹಿಜರೀ ಮೇಂ ಇಮಾಮ್ ಮಾಸ್‌ದೂಹ್ ಝುಹಿರ್ ಹೋ ಜಾಯೇಂಗೆ." (ಅಹ್ಲೆ ಹದೀಸ್, 26 ಜನವರಿ 1912 ಇಸವಿ)

—ಮುಸ್ಲಿಮ್ ರಾಷ್ಟ್ರಗಳ ಪರ್ಯಟನೆಯ ಕಾಲ ದಲ್ಲಿ ನಾನು ಭೇಟಿ ಮಾಡಿದ ಮುಸ್ಲಿಮ್ ಶೇಖರು ಮತ್ತು ಮತ ಪಂಡಿತರು ಬಹಳ ಉತ್ಸುಕರಾಗಿ ಇಮಾಮ್ ಮಹ್‌ದೀ ಅವರನ್ನು ನಿರೀಕ್ಷಿಸುತ್ತಾ ಇರುವು ದಾಗಿ ಕಂಡೆನು. ಶೇಖ್ ಸನೂಸೀ ಅವರ ಒಬ್ಬ ಖಲೀ ಫರನ್ನು ಭೇಟಿಯಾದಾಗ ಅವರು ಎಷ್ಟರ ಮಟ್ಟಿಗೆ ಹೇಳಿದರೆಂದರೆ ಇದೇ ವರ್ಷ ಎಂದರೆ ಹಿಜರಿ 1311ನೇ ವರ್ಷವೇ ಸ್ತುತಿಸಲ್ಪಟ್ಟ ಇಮಾಮ್ ಮಹದೀ ಆಗಮಿ ಸುವರು.

## 3

ಮಾನ್ಯ ಸಹೋದರರೇ, 1400ನೇ ಹಿಜರಿ ಶತ ಮಾನದ ಕೊನೆಯ ವರ್ಷ ಮುಹರ್ರಮ್ ತಿಂಗಳ ಒಂದನೇ ದಿನಾಂಕದಿಂದ (1979ನೇ ಇಸವಿ ನವೆಂಬರ್ 26ನೇ ತಾರೀಕಿನಿಂದ) ಪ್ರಾರಂಭವಾಗಿದೆ. ಈ ಒಂದು ವರ್ಷ ಪೂರ್ತಿಗೊಂಡ ನಂತರ ಹೊಸ ಹಿಜರಿ ಶತಮಾನ ಎಂದರೆ ಹಿಜರಿ ಹದಿನೈದನೇ ಶತಮಾನ ಆರಂಭಗೊಳ್ಳು ವುದು. ಹಿಜರಿ ಹದಿನಾಲ್ಕನೆಯ ಶತಮಾನದ ಕೊನೆ ಮತ್ತು ಹದಿನೈದನೇ ಶತಮಾನದ ಆರಂಭದ ಈ ಸಂದರ್ಭದಲ್ಲಿ ಸಹೋದರರಾದ ನಿಮಗೆಲ್ಲರಿಗೂ ಒಂದು ಚಿಂತಾರ್ಹವಾದ ಸಂಗತಿಯಿದೆ. ನೀವೆಲ್ಲರೂ ಶಾಂತಚಿತ್ತ ರಾಗಿ ಆಲೋಚಿಸಿರಿ. ಈ ಶತಮಾನದ ಮುಜದ್ದಿದ್. ಇಮಾಮ್ ಮಹ್‌ದೀ ಮತ್ತು ಮಸೀಹ್ ಮೌಊದ್ ಯಾರೆಂದೂ ಅವರೆಲ್ಲಿರುವರೆಂದೂ ಆಲೋಚಿಸಿರಿ. ಇಸ್ಲಾಮಿ ಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಆ ಮಹ್‌ದೀ ಮಸೀಹ್ ಎಲ್ಲಿರುವರು? ಭವಿಷ್ಯವಾಣಿಗಳ ಪ್ರಕಾರ ಬರಬೇಕಾದ ಮಹಾಪುರುಷರು ಹದಿನಾಲ್ಕನೆಯ ಶತಮಾನದಲ್ಲಿಯೇ ಬರುವರೆಂದು ಪ್ರತೀಕ್ಷಿಸಲ್ಪಡು ತ್ತಿದ್ದು ಅವರು ಬರಲಿಲ್ಲವೇ? ಭವಿಷ್ಯವಾಣಿಗಳಲ್ಲಿ ನುಡಿ ಯಲ್ಪಟ್ಟ ಚಿಹ್ನೆಗಳು ಪ್ರತ್ಯಕ್ಷಗೊಂಡಿವೆ. ಕಾಲವು ದೈವಿಕ ಅನುಗ್ರಹದಿಂದ ಆಗಮಿಸುವ ಆ ಪುರುಷರಿಗಾಗಿ ಕಾದಿ ತ್ತು. ಆದರೆ ಮಾನ್ಯರಾದ ಮತಪಂಡಿತರ ಮತ್ತು

ಮುಸ್ಲಿಮ್ ಜನತೆಯ ಅಭಿಪ್ರಾಯದಲ್ಲಿ ಆ ಇಮಾಮ್ ಮಹದೀ ಮತ್ತು ಮಸೀಹ್ ಮೌಊದ್ ಇನ್ನೂ ಬಂದಿಲ್ಲ! ಈ ಇಡೀ ಶತಮಾನ ಪ್ರತೀಕ್ಷೆಯಲ್ಲಿಯೇ ಮುಗಿದು ಹೋಯಿತು. ಈಗ ಯೋಚಿಸಬೇಕಾದ ಸಂಗತಿ ಇದಾಗಿದೆ:

ಮುಸ್ಲಿಮರು ನಿರಾಶೆಯ ಪ್ರತೀಕವಾಗಿ ಅಲ್ಲಾಮ ಇಕ್ಬಾಲರ ಈ ಕೆಳಗಿನ ಪದ್ಯದಂತೆ ತಮ್ಮ ಹೃದಯಕ್ಕೆ ಸಾಂತ್ವನ ನೀಡಬೇಕೆ?—

"ಮಿನಾರೆ ದಿಲ್ ಪೆ ಅಪ್ನೇ ಖುದಾ ಕಾ ನುಝೂಲ್ ದೇಖ್ ಅಬ್ ಇಂತಿಝಾರೆ ಮಹ್‌ದೀ ವ ಈಸಾ ಭೀ ಛೋಡ್‌ದೇ" (ತನ್ನ ಹೃದಯದ ಗೋಪುರ ದಲ್ಲಿ ದೇವರ ಅವತೀರ್ಣವನ್ನು ನೋಡು. ಈಗ ಮಹ್‌ದೀ ಮತ್ತು ಈಸಾರ ಪ್ರತೀಕ್ಷೆಯನ್ನು ಕೈಬಿಡು)

ಅಥವಾ ಲಾಹೋರಿನ "ಚಟಾನ್" ಪತ್ರಿಕೆಯ ಸಂಪಾದಕ ಶೋರಿಶ್ ಕಾಶ್ಮೀರೀಯ ಈ ಮಾತನ್ನು ಹೇಳಿ ಸಮಾಧಾನಗೊಳ್ಳಬೇಕೆ?—

"ರಹಾ ಮಹ್‌ದೀ ಮೌಊದ್ ಕಾ ಅಖೀದ ತೋ ಯಹ್ ಝುಬೂನ್ ಕಾರೋಂ ಔರ್ ಬೇ ಹಿಮ್ಮತೋಂ ಕೇ ಕಾರ್‌ಖಾನೆ ಕಾ ಮಝ್‌ರೂಬ್ ಹೈ"

(ಚಟಾನ್ ಲಾಹೋರ್ 28–5–1962)

—ಮಹ್‌ದಿಯ ಕುರಿತು ನಂಬಿಕೆ, ಇದು ನಿರು ದ್ಯೋಗಿಗಳ ಮತ್ತು ಧೈರ್ಯವಿಲ್ಲದವರ ಗಿರಣಿಯ ಕಚ್ಚಾ ವಸ್ತುವಾಗಿದೆ.

ಅಥವಾ ಪರಿಶುದ್ಧವಾದ ಹೃದಯದಿಂದ ಮತ್ತು ಉದ್ದೇಶ ಶುದ್ಧಿಯೊಂದಿಗೆ ದೈವ ನಿಯುಕ್ತರಾದ ಆ ಮಹಾತ್ಮರ ಅನ್ವೇಷಣೆಯಲ್ಲಿ ತೊಡಗಿ ಅವರನ್ನು ಕಂಡು ಹಿಡಿದು ಅವರ ಸಂಘಟನೆಯಲ್ಲಿ ಸೇರಿ ಇಸ್ಲಾಮ್ ಧರ್ಮದ ಸೇವೆ ಮತ್ತು ಇಸ್ಲಾಮ್ ಧರ್ಮ ಪ್ರಚಾರದ ಅನುಗ್ರಹ ಪಡೆಯುವಂತಹವರಾಗಬೇಕೆ? ಯೋಚಿಸಿರಿ.

## 4

ಪ್ರಿಯ ಸಹೋದರರೇ, ನೀವು ನಿರಾಸೆಯಿಂದ ಹತಾಶೆಗೊಳ್ಳುವ ಅಗತ್ಯವಿಲ್ಲ. ನಿಮಗೊಂದು ಶುಭ ವಾರ್ತೆ ನೀಡಲು ನಾವು ಇಚ್ಛಿಸುತ್ತೇವೆ. ಪೈಗಂಬರ್ ವಚನಗಳಲ್ಲಿ ನಿರೂಪಿಸಲ್ಪಟ್ಟಿರುವ ಭವಿಷ್ಯವಾಣಿಯ ಪ್ರಕಾರ ಹಿಜರಿ ಹದಿನಾಲ್ಕನೆಯ ಶತಮಾನದ ಆರಂಭದ ಕಾಲದಲ್ಲಿಯೇ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹೇಬ್ ಅಲೈಹಿಸ್ಸಲಾಮರು ದೇವರಿಂದ ಜ್ಞಾನಗಳಿಸಿ ಖಾದಿ ಯಾನ್ ಎಂಬ ಪವಿತ್ರ ಊರಿನಲ್ಲಿ ಈ ರೀತಿ ಘೋಷಿಸಿ ದರು:

(i) "ಜಬ್ ತೇರವೀನ್ ಸದೀ ಕಾ ಆಖಿರ್ ಹುವಾ ಅವರ್ ಚೌದವೀನ್ ಸದೀ ಕಾ ಝುಹೂರ್ ಹೋನೆಲಗಾ ತೋ ಅಲ್ಲಾಹ್ ತಆಲಾ ನೆ ಇಲ್‌ಹಾಮ್ ಕೆ ಝರಿಯೆ ಮುಝೆ ಖಬರ್ ದೀ ಕೆ ತೂ ಇಸ್ ಸದೀ ಕಾ ಮುಜ ದ್ದಿದ್ ಹೈ." (ಕಿತಾಬುಲ್ ಬರ್ರಿಯಾ, ಪುಟ 128)

—ಹಿಜರಿ ಹದಿಮೂರನೆಯ ಶತಮಾನ ಕೊನೆ ಗೊಂಡು ಹದಿನಾಲ್ಕನೆಯ ಶತಮಾನ ಪ್ರಾರಂಭವಾಗ ಲಿದ್ದಾಗ ದೇವರು ತನ್ನ ಪವಿತ್ರವಾಣಿ (ಇಲ್‌ಹಾಮ್) ಮೂಲಕ ನಾನು ಈ ಶತಮಾನದ ಮಹದಿಯೆಂದು ನನಗೆ ತಿಳಿಸಿದನು.

(ii) "ಮುಝೆ ಖುದಾ ಕಿ ಪಾಕ್ ಔರ್ ಮುತ ಹ್ಹರ್ ವಹೀ ಸೆ ಇತ್‌ಲಾಅ್ ದೀ ಗಯಾ ಹೈ ಕೆ ಮೈಂ ಉಸ್‌ಕೀ ತರಫ್ ಸೆ ಮಸೀಹ್ ಮೌಊದ್ ಔರ್ ಮಹದೀ ಮೌಊದ್ ಹೂಂ ಔರ್ ಅಂದರೂನಿ ಔರ್ ಬೇರೂನೀ ಇಖ್ತಿಲಾಫಾತ್ ಕಾ ಹಕಂ ಹೂಂ" (ಅರ್‌ಬಈನ್)

—ನನಗೆ ಅಲ್ಲಾಹುವಿನ ಪರಿಶುದ್ಧ ಮತ್ತು ಪವಿತ್ರ ವಹೀ (ವಾಣಿ) ಮೂಲಕ ತಿಳಿಸಲಾಗಿದೆ–ನಾನು ಅವನ ಕಡೆಯಿಂದ ಮಸೀಹ್ ಮೌಊದ್ ಮತ್ತು ಮಹ್‌ದೀ ಮೌಊದ್ ಆಗಿದ್ದೇನೆ; ನಾನು ಒಳಗಣ ಮತ್ತು ಹೊರಗಣ ಎಲ್ಲಾ ಭಿನ್ನಾಭಿಪ್ರಾಯಗಳ ತೀರ್ಪು ಗಾರನಾಗಿದ್ದೇನೆ.

ಮತ್ತೂ ಹೀಗೆ ಹೇಳಿದರು:

" ವಖ್ತ್ ಥಾ ವಕ್ತೆ ಮಸೀಹಾ ನ ಕಿಸೀ ಔರ್ ಕಾ ವಖ್ತ್–ಮೈಂ ನ ಆತಾ ತೋ ಕೊಹಿ ಔರ್ ಹೀ ಆಯಾ ಹೋತಾ! ಇಸ್ಮವೂ ಸೌತಸ್ಸಮಾ ಜಾಅಲ್ ಮಸೀಹ್ ಜಾಅಲ್ ಮಸೀಹ್-ನೇಝ್ ಬಶ್ನೂ ಅಝ್ ಝಮೀನ್ ಆಮದ್ ಇಮಾಮೆ ಕಾಮಗಾರ್"

—ಕಾಲವು ಮಸೀಹ್ ಬರುವ ಕಾಲವೇ ಆಗಿತ್ತು. ಇದು ಬೇರೆಯವರ ಆಗಮನದ ಕಾಲವಾಗಿರಲಿಲ್ಲ. ನಾನು ಬಂದಿರಲಿಲ್ಲವಾದರೆ ಬೇರೆ ಯಾರಾದರೂ ಬರುತ್ತಿದ್ದರು ಆಕಾಶದ ಧ್ವನಿಯನ್ನು ಆಲಿಸಿರಿ: ಮಸೀಹ್ ಬಂದಿರು ವರು, ಮಸೀಹ್ ಬಂದಿರುವರು. ಪುನಃ ಆಲಿಸಿರಿ:

ಕಾರ್ಯಕೌಶಲವುಳ್ಳ ನಾಯಕ (ಇಮಾಮ್) ಭೂಮಿಯಿಂದಲೇ ಬರುವರು.

ಹಿಜರಿ ಹದಿನಾಲ್ಕನೆಯ ಶತಮಾನ ಕೊನೆಗೊಳ್ಳುತ್ತಿರುವ ಈ ವರ್ಷದಲ್ಲಿ ಹದಿನೈದನೇ ಹಿಜರಿ ಶತಮಾನದ ಸ್ವಾಗತಕ್ಕಾಗಿ ಮುಸ್ಲಿಮ್ ಲೋಕದಲ್ಲಿ ಸಿದ್ಧತೆಗಳಾಗುತ್ತಿರುವ ಈ ಸಂದರ್ಭದಲ್ಲಿ ನಾನು ಸಹೋದರರಾದ ನಿಮ್ಮೊಡನೆ ಸ್ನೇಹ ಪೂರ್ವಕವಾಗಿ ಈ ರೀತಿ ವಿಜ್ಞಾಪಿಸಿಕೊಳ್ಳುತ್ತೇನೆ: ಅಹ್ಮದಿಯಾ ಜಮಾಅತಿನ ಸ್ಥಾಪಕರ ವಾದಗಳ ಕುರಿತು ಸಮಾಧಾನಚಿತ್ತರಾಗಿ ಗಾಢವಾಗಿ ಆಲೋಚಿಸುವ ಕಾಲ ಇದೋ ಬಂದಿದೆ. ಅವರಲ್ಲದೆ ಬೇರೆ ಯಾವ ಇಮಾಮ್ ಮಹ್‌ದೀ ಅಥವಾ ಮಸೀಹ್ ಇಲ್ಲ. ಅವರ ವಾದಗಳನ್ನು ರುಜುಪಡಿಸಲಿಕ್ಕಾಗಿ ಆಕಾಶ ಭೂಮಿಗಳು ಸಹ ಸಾಕ್ಷ್ಯ ನುಡಿದಿವೆ. ಅಹ್ಮದಿಯಾ ಜಮಾಅತಿನ ಸ್ಥಾಪಕರ ಮಹತ್ವಾದ ಗ್ರಂಥಗಳನ್ನೂ ಇತರ ಅಹ್ಮದಿಯಾ ಸಾಹಿತ್ಯಗಳನ್ನೂ ಪಠಿಸಲು ನಿಮ್ಮನ್ನು ನಾನು ಕೋರುತ್ತೇನೆ. ಬರಬೇಕಾಗಿದ್ದ ವಾಗ್ದತ್ತ ಮಸೀಹರು ಸರಿಯಾದ ಸಮಯದಲ್ಲಿಯೇ ಬಂದರು. ಅವರು ಪ್ರಪಂಚದಾದ್ಯಂತ ಇಸ್ಲಾಮ್ ಪ್ರಚಾರ ಕೈಗೊಂಡಿರುವಂತಹ ಒಂದು ಕಾರ್ಯತತ್ಪರವಾದ ಸಂಘಟನೆಯನ್ನು ಸ್ಥಾಪಿಸಿ ತನ್ನ ಉದ್ದೇಶದಲ್ಲಿ ಜಯಗಳಿಸಿ ಈ ಪ್ರಪಂಚಕ್ಕೆ ವಿದಾಯ ಹೇಳಿರುವರು. ನೀವು ನಿರಾಶೆಗೊಳ್ಳುವುದರ ಬದಲಾಗಿ ಸಂತೋಷದಿಂದ ಆಶಾಭರಿತರಾಗಿರಿ. ನೀವು ಈ ಕಾಲದ ಮುಜದ್ದಿದ್, ಇಮಾಮ್ ಮಹ್‌ದೀ ಮತ್ತು ಮಸೀಹರ ಜಮಾಅತಿನಲ್ಲಿ ಸೇರಿದರೆ ನಿಮಗೆ ಇಸ್ಲಾಮ್ ಧರ್ಮದ ಸೇವೆಯ ಸುವರ್ಣಾವಸರವು ಲಭಿಸುವುದು. ಇಮಾಮ್ ಮಹ್‌ದಿಯ ಕುರಿತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ನೀಡಿದ ನಿರ್ದೇಶಗಳನ್ನು ಪಾಲಿಸುವ ಭಾಗ್ಯವು ನಿಮಗೆ ದೊರೆತು ನೀವು ದೇವರ ತೃಪ್ತಿಯನ್ನೂ ಅನುಗ್ರಹವನ್ನೂ ಪಡೆಯುವಿರಿ.

ಅಹ್ಮದಿಯಾ ಜಮಾಅತಿನ ಸ್ಥಾಪಕರ ಈ ಕೆಳಗಿನ ಭವಿಷ್ಯವಾಣಿಯನ್ನೂ ನೀವು ಶ್ರದ್ಧಾಪೂರ್ವಕವಾಗಿ ಗಮನಿಸಿರಿ:

"ವಾಗ್ದತ್ತ ಮಸೀಹ್ (ಮಸೀಹ್ ಮೌಊದ್) ಆಕಾಶದಿಂದ ಇಳಿಯುವರೆಂಬುದು ಒಂದು ಸುಳ್ಳು ಭಾವನೆಯಾಗಿದೆ. ನೀವು ಚೆನ್ನಾಗಿ ಜ್ಞಾಪಕದಲ್ಲಿಡಿರಿ: ಯಾರೂ ಆಕಾಶದಿಂದ ಇಳಿದು ಬರಲಿಕ್ಕಿಲ್ಲ. ಈಗ ಜೀವಿಸಿರುವ ನಮ್ಮ ವಿರೋಧಿಗಳೆಲ್ಲರೂ ತೀರಿ ಹೋಗುವರು. ಆದರೆ ಅವರ ಪೈಕಿ ಒಬ್ಬ ವ್ಯಕ್ತಿಯೂ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಿಕ್ಕಿಲ್ಲ. ನನ್ನ ವಿರೋಧಿಗಳ ಬಾಕಿಯಿರುವ ಮಕ್ಕಳೆಲ್ಲರೂ ಸಹ ಮೃತ ಹೊಂದುವರು. ಆದರೆ ಅವರ ಪೈಕಿ ಒಬ್ಬನೇ ಒಬ್ಬ ವ್ಯಕ್ತಿ ಸಹ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಿಕ್ಕಿಲ್ಲ. ಅನಂತರ ಅವರ ಮಕ್ಕಳ ಮಕ್ಕಳು ಸಹ ಮರಣ ಹೊಂದುವರು. ಅವರು ಸಹ ಈಸಬ್ನುಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಆಗ ಈಸಬ್ನು ಮರ್‌ಯಮ್‌ರವರನ್ನು ಪ್ರತೀಕ್ಷಿಸುತ್ತಿರುವವರ ಹೃದಯದಲ್ಲಿ ದೇವರು ಗಾಬರಿಯನ್ನುಂಟು ಮಾಡುವನು. ಆ ಕಾಲದಲ್ಲಿ ಶಿಲುಬೆಯ ವಿಜಯದ ಕಾಲವು ಮುಗಿಯುವ ಸ್ಥಿತಿಯಲ್ಲಿರುವುದು, ಮತ್ತು ಲೋಕವು ಹೊಸ ಬಣ್ಣವನ್ನು ತಳೆಯುವುದು. ಆದರೆ ಮರ್‌ಯಮ್‌ರವರ ಪುತ್ರ ಈಸಾ ಆಕಾಶದಿಂದ ಇಳಿದು ಬಂದಿರಲಿಕ್ಕಿಲ್ಲ. ಆಗ ಬುದ್ಧಿವಂತರು ಈ ನಂಬಿಕೆಯ ಕುರಿತು ಬೇಸರಗೊಳ್ಳುವರು. ಈ ದಿನದಿಂದ ಮುನ್ನೂರು ವರ್ಷಗಳು ಪೂರ್ಣವಾಗುವ ಮುಂಚೆಯೇ ಈಸಾ ಪ್ರವಾದಿಯನ್ನು ಪ್ರತೀಕ್ಷಿಸುತ್ತಿರುವ ಮುಸ್ಲಿಮರೂ ಕ್ರೈಸ್ತರೂ ಬಹಳ ನಿರಾಶೆಯಿಂದಲೂ ಸಂಶಯದಿಂದಲೂ ಕೂಡಿ ಈ ಅಬದ್ಧ ವಿಶ್ವಾಸವನ್ನು ತೊರೆಯುವರು. ಆಗ ಪ್ರಪಂಚದಲ್ಲಿ ಒಂದೇ ಮತ ಒಬ್ಬನೇ ಧಾರ್ಮಿಕ ನಾಯಕ ಇರುವರು. ನಾನೊಂದು ಬೀಜ ಬಿತ್ತಲು ಬಂದಿರುವೆನು. ನನ್ನ ಕೈಯಿಂದ ಆ ಬೀಜ ಬಿತ್ತಲಾಗಿದೆ. ಅದು ಮೊಳಕೆಯೊಡೆದು ಬೆಳೆದು ಹೂ ಬಿಡುವುದು. ಅದನ್ನು ತಡೆಯುವವರು ಯಾರೂ ಇರಲಾರರು" (ತದ್‌ಕಿರತುಶ್ಶಹಾದತೈನ್, ಪುಟ 64-65)

ಅಲ್ಲಾಹು ನಮ್ಮ ಸಹೋದರರಿಗೆ ಹಝ್ರತ್ ಇಮಾಂ ಮಹ್‌ದೀ ಅಲೈಹಿಸ್ಸಲಾಮರನ್ನು ಗುರುತಿಸುವ ಹಾಗೂ ಸತ್ಯವನ್ನು ಸ್ವೀಕರಿಸುವ ಭಾಗ್ಯವನ್ನು ನೀಡಲಿ. (ಆಮೀನ್).

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯಲಿಚ್ಛಿಸುವವರು ಅಥವಾ ಸಾಹಿತ್ಯಗಳನ್ನು ಓದಲು ಅಪೇಕ್ಷಿಸುವವರು "ನಿಝಾರತ್ ದವ್ ಅತೆ ತಬ್ಲೀಗ್, ಅಂಜುಮಾನ್ ಅಹ್ಮದಿಯಾ, ಖಾದಿಯಾನ್-143516" ಎಂಬ ವಿಳಾಸದಲ್ಲಿ ವ್ಯವಹರಿಸಬಹುದು. (ಭಾಷಾಂತರ: M.U.) ●

— ಎ. ತಾಹಿರ್

# ಮುಲ್ಲಾ ಮೌದೂದಿ

ಮುಲ್ಲಾ ಅಬುಲ್ ಆಲಾ ಮೌದೂದಿ ಅವರು ಕಳೆದ ವರ್ಷ ಸಪ್ಟೆಂಬರ್ 22ರಂದು ಅಮೇರಿಕದಲ್ಲಿ ನಿಧನ ಹೊಂದಿದರು. ಅವರು ಅಹ್ಮದಿಯಾ ಸಂಘಟನೆಗೆ ವಿರುದ್ಧ ನಡೆಸಿದ ಹೋರಾಟದ ಒಂದು ಕಿರು ಪರಿಚಯ ನೀಡುವುದು ಸಂದರ್ಭೋಚಿತವಾಗುವುದೆಂದು ಭಾವಿಸುತ್ತೇನೆ.

ಮುಲ್ಲಾ ಮೌದೂದಿ ಭಾರತದ ಔರಂಗಾಬಾದಿನಲ್ಲಿ ಜನಿಸಿದ್ದು ದೀರ್ಘಕಾಲ ಹೈದರಾಬಾದಿನಲ್ಲಿ ತರ್ಜುಮಾನುಲ್ ಖುರ್‌ಆನ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಇವರ ಆರಂಭ ಕಾಲದ ಲೇಖನಗಳಲ್ಲಿ ಕೆಲವು ಅಹ್ಮದಿಯಾ ಸಂಘಟನೆಯ ಸ್ಥಾಪಕರ ವಾದಗಳನ್ನು ಪುಷ್ಟೀಕರಿಸುವಂತಹದ್ದಾಗಿದ್ದುವು. ಧಾರ್ಮಿಕ ವಿದ್ವಾಂಸ ಎಂಬ ಸ್ಥಾನದಿಂದ ಬೇಸತ್ತ ಈ ವ್ಯಕ್ತಿ ಕೊನೆಗೆ ಇಸ್ಲಾಂ ಪ್ರಭುತ್ವ ಸ್ಥಾಪಿಸುವ ಕನಸು ಕಾಣತೊಡಗಿದರು. ಫ್ಯಾಸಿಸ್ಟ್ ಮಾದರಿಯ 'ಗುರಿ ಸಾಧಿಸಲು ಏನನ್ನೂ ಮಾಡಬಹುದೆ'ಂಬ ಸಿದ್ಧಾಂತವನ್ನು ಈ ವ್ಯಕ್ತಿ ತನ್ನ ಪತ್ರಿಕೆಯ ಮೂಲಕ ವ್ಯಕ್ತಗೊಳಿಸಿದರು. ಎಲ್ಲಾ ಅಮುಸ್ಲಿಮ್ ಸರಕಾರಗಳನ್ನು ಕಿತ್ತೆಸೆಯಬೇಕೆಂದೂ ದೇವರ ಸಾಮ್ರಾಜ್ಯ ಸ್ಥಾಪಿಸಬೇಕೆಂದೂ ಇವರು ತನ್ನ ಲೇಖನಗಳಲ್ಲಿ ಆಹ್ವಾನ ನೀಡಿದರು. ದೇಶದ ವಿಭಜನೆಯ ಮೊದಲು ಪಠಾನ್‌ಕೋಟ್‌ನಲ್ಲಿ ತನ್ನ ಕೇಂದ್ರವನ್ನು ಸ್ಥಾಪಿಸಿದ ಮುಲ್ಲಾ ಸಾಹೇಬ್ ಪಾಕಿಸ್ತಾನ ಸ್ಥಾಪನೆಯಾದ ಕೂಡಲೇ ಪಾಕಿಸ್ತಾನಕ್ಕೆ ಪಲಾಯನ ಗೈದರು. ಪಾಕಿಸ್ತಾನದ ಸ್ಥಾಪಕರಾದ ಜಿನ್ನಾ ಸಾಹೇಬರನ್ನು "ಕಾಯದೇ ಆರ್ಝುಂ" ಎಂದು ಇತರ ಮುಸ್ಲಿಮರು ಕರೆಯುತ್ತಿದ್ದಾಗ "ಕಾಫಿರೇ ಆರ್ಝುಂ" ಎಂದು ಮುಲ್ಲಾ ಸಾಹೇಬ್ ಕರೆದಿದ್ದರು. ಪಾಕಿಸ್ತಾನವನ್ನು "ನಾಪಾಕಿಸ್ತಾನ್" ಎಂದು ಸಹ ಕರೆದಿದ್ದ ಮುಲ್ಲಾ ಸಾಹೇಬ್ ತನ್ನ ಮೇಲಿನ ಕಳಂಕವನ್ನು ದೂರೀಕರಿಸಲು ಮತ್ತು ಮುಸ್ಲಿಮರ ಶ್ರದ್ಧೆಯನ್ನು ತನ್ನ ಗತಕಾಲದ ಜೀವನದಿಂದ ದೂರಸರಿಸಲಿಕ್ಕಾಗಿ ಹೊಸ ದಾರಿಯನ್ನು ಕಂಡುಹಿಡಿದರು. "ಅಂತ್ಯ ಪ್ರವಾದಿತ್ವದ ಸಂರಕ್ಷಣೆ" ಎಂಬ ಹೆಸರಿನಲ್ಲಿ ಒಂದು ಸಂಘಟನೆಯನ್ನು ಸುನ್ನಿ ಮುಸ್ಲಿಮರೊಂದಿಗೆ ರೂಪಿಸಿ ಪಾಕಿಸ್ತಾನದಲ್ಲಿ ಅಹ್ಮದಿಯರ ಕಗ್ಗೊಲೆ 1953ನೇ ಇಸವಿಯಲ್ಲಿ ನಡೆಸುವಂತೆ ಗೂಂಡಾ ಜನರನ್ನು ಪ್ರೇರೇಪಿಸಿದರು. ಅಹ್ಮದಿಯಾ ವಿರುದ್ಧ ಚಳುವಳಿಯ ಹಿನ್ನೆಲೆಯಲ್ಲಿ ಪಾಕಿಸ್ತಾನ ಸರಕಾರವನ್ನು ಭಂಗಗೊಳಿಸಿ ತನ್ನ "ಇಸ್ಲಾಮಿಕ್ ಪ್ರಭುತ್ವ" ಸ್ಥಾಪಿಸುವುದೂ ಮುಲ್ಲಾಜಿಯ ಗುರಿಯಾಗಿತ್ತು. ಆಗಿನ ಮುಖ್ಯ ಮಂತ್ರಿಯಾಗಿದ್ದ ಖಾಜಾ ನಾಸಿಮುದ್ದೀನ್ ಮಾರ್ಷಲ್ ಲಾವನ್ನು ಪಂಜಾಬಿನಲ್ಲಿ ಜಾರಿಗೆ ತಂದು ದಂಗೆಗಳನ್ನು ನಿಯಂತ್ರಿಸಿದರು. ಮುಲ್ಲಾ ಮೌದೂದಿ ಮತ್ತು ಮುಲ್ಲಾ ಅಬ್ದುಸ್ಸತ್ತಾರ್ ನಿಯಾಜಿಗೆ ದಂಗೆ, ಕೊಲೆ, ಬೆಂಕಿ ಕೊಡುವಿಕೆ, ಸ್ತ್ರೀಯರ ಅಪಹಾರ, ಬಲಾತ್ಕಾರ ಮತ್ತು ದರೋಡೆಗಳನ್ನು ಸಂಘಟಿಸಿದುದಕ್ಕಾಗಿ ಮರಣದಂಡನೆ ನೀಡಲಾಯಿತು. ಅನಂತರ ಈ ಮರಣದಂಡನೆಯ ಶಿಕ್ಷೆ 14 ವರ್ಷಕ್ಕೆ ಇಳಿಸಲಾಯಿತು. ಮುಲ್ಲಾ ಮೌದೂದಿಗೆ ಮರಣದಂಡನೆ ಕೊಡಲು ಕಾರಣ ಮುಲ್ಲಾ ಸಾಹೇಬ್ "ಖಾದಿಯಾನಿ ಮಸ್‌ಅಲ" ಎಂಬ ಒಂದು ಚಿಕ್ಕಪುಸ್ತಕವನ್ನು ಬರೆದ ಕಾರಣವೆಂದು 'ಮೌದೂದಿ'ಗಳು ಸುಳ್ಳು ಸುಳ್ಳೇ ಬರೆಯುತ್ತಾರೆ. ಸುಳ್ಳು ಹೇಳುವುದಕ್ಕೆ ಯಾವುದೇ ನಾಚಿಕೆ ಇಲ್ಲದ ಈ ವ್ಯಕ್ತಿಗಳು, ಕೆಲವು ಸಂದರ್ಭಗಳಲ್ಲಿ ವ್ಯಾವಹಾರಿಕ ಜೀವನದಲ್ಲಿ ಸುಳ್ಳು ಹೇಳುವುದು ನಿರ್ಬಂಧಕರವಾಗಿದೆ (ತರ್ಜುಮಾನುಲ್ ಖುರ್‌ಆನ್, ಮೇ 1958) ಎಂಬ ಮುಲ್ಲಾ ಮೌದೂದಿಯ ನಿರ್ದೇಶವನ್ನು ಪಾಲಿಸುತ್ತಿದ್ದಾರಲ್ಲದೆ ಇನ್ನೇನೂ ಅಲ್ಲ. ಮುಲ್ಲಾ ಮೌದೂದಿಯ ಚಿಕ್ಕ ಪುಸ್ತಕದ ಕಾರಣ ಅವರಿಗೆ ಮರಣದಂಡನೆ ವಿಧಿಸಿದ್ದರೆ, ಆ ಪುಸ್ತಕವನ್ನು ಸರಕಾರ ರದ್ದುಗೊಳಿಸುತ್ತಿತ್ತು. ಆದರೆ ಆ ರೀತಿಯೇನೂ ಮಾಡಿಲ್ಲ. ಮುಲ್ಲಾ ಮೌದೂದಿಗೆ

ದಂಗೆಗಳ ಪ್ರಧಾನ ಸಂಘಟಕ ಎಂಬ ನೆಲೆಯಲ್ಲಿಯೇ ಶಿಕ್ಷೆ ವಿಧಿಸಲಾಗಿತ್ತು.

ಮುಲ್ಲಾ ಮೌದೂದಿಯ ಪ್ರಥಮ ಪ್ರಯತ್ನ ಪರಾಜಯಗೊಂಡಿತು. ಅನಂತರ ಬಂದ ಸರಕಾರ ಮುಲ್ಲಾ ಸಾಹೇಬರ ಶಿಕ್ಷೆಯನ್ನು ರದ್ದುಗೊಳಿಸಿತು. ಅಯ್ಯೂಬ್‌ಖಾನ್ 1958ರಲ್ಲಿ ಅಧಿಕಾರಕ್ಕೆ ಬಂದರು. ಅವರ ವಿರುದ್ಧ ಮುಲ್ಲಾ ಮೌದೂದಿ ಮತ್ತು ಅವರ ಉತ್ತರಾಧಿಕಾರಿ ಮುಲ್ಲಾ ತುಫೇಲ್ ಮುಹಮ್ಮದ್ ಒಳಗಿಂದೊಳಗೆ ಪ್ರಯತ್ನ ನಡೆಸುತ್ತಿದ್ದರು. ಅಯ್ಯೂಬ್ ಖಾನ್ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆ ಏರ್ಪಡಿಸಿದಾಗ ಮುಲ್ಲಾ ಮೌದೂದಿ ಅಯ್ಯೂಬ್‌ಖಾನರನ್ನು "ಖಾದಿಯಾನಿ" ಎಂದು ಪ್ರಚಾರ ಮಾಡುತ್ತಾ ಫಾತಿಮಾ ಜಿನ್ನಾರನ್ನು ಬೆಂಬಲಿಸಿ ಪರಾಜಯಗೊಂಡರು. "ಇಸ್ಲಾಮಿಕ ಸಂವಿಧಾನ" ಎಂಬ ಗ್ರಂಥದಲ್ಲಿ ಸ್ತ್ರೀಯರು ಯಾವುದೇ ಅಧಿಕಾರದಲ್ಲಿ ಇರುವುದನ್ನು ವಿರೋಧಿಸಿ ಬರೆದಿದ್ದರೂ ಫಾತಿಮಾ ಜಿನ್ನಾರನ್ನು ಅಧ್ಯಕ್ಷ ಸ್ಥಾನಾರ್ಥಿಯಾಗಿ ಬೆಂಬಲಿಸುವುದಕ್ಕೆ ಮುಲ್ಲಾ ಮೌದೂದಿ ಹಿಂಜರಿಯಲಿಲ್ಲ. ಅಹ್ಮದಿಯಾ ಸಂಘಟನೆಯ ವಿರುದ್ಧ ಜಿಹಾದ್ ಮಾಡಲು ಎಂದರೆ ಅವರನ್ನು ಕೊಲೆ ಮಾಡಲು, ಅವರ ಸ್ವತ್ತುಗಳಿಗೆ ಬೆಂಕಿ ಕೊಡಲು, ಸ್ತ್ರೀಯರ ಮಾನಭಂಗ ಮಾಡಲು ಮುಲ್ಲಾ ಮೌದೂದಿಗೂ ಅನುಯಾಯಿಗಳಿಗೂ ಅಯ್ಯೂಬ್‌ಖಾನ್ ಸಮ್ಮತಿಸದುದೇ ಮೌದೂದಿಯ ದ್ವೇಷಕ್ಕೆ ಕಾರಣವಾಗಿತ್ತು.

ಭೂಟ್ಟೋ ಪಾಕಿಸ್ತಾನದ ಅಧ್ಯಕ್ಷನಾದಾಗ ಮುಲ್ಲಾ ಮೌದೂದಿಗೆ ಇನ್ನೊಂದು ಉತ್ತಮ ಸಂದರ್ಭ ಜಿಹಾದ್ ನಡೆಸಲು ಲಭಿಸಿತು. ಸೌದೀ ಅರೇಬಿಯಾ ಮತ್ತಿತರ ಮುಸ್ಲಿಮ್ ರಾಜ್ಯಗಳ ನೆರವನ್ನು ಪಡೆದು ಮೌದೂದಿ ರಹಸ್ಯ ಏರ್ಪಾಡು ಮಾಡಿದರು. ಫೈಝಲ್ ದೊರೆಯನ್ನು ಖಲೀಫರನ್ನಾಗಿ ಮಾಡುವುದಾಗಿ ಅವರಿಗೆ ಆಶ್ವಾಸನೆ ನೀಡಿ ಅವರಿಂದ ಕೋಟಿಗಟ್ಟಲೆ (ಒಂಭತ್ತು ಕೋಟಿ ಡಾಲರ್ ಹಣವೆಂದು ಲಂಡನಿನ ಇಕೋನೋಮಿಸ್ಟ್ ಪತ್ರಿಕೆ ವರದಿ ಮಾಡಿದೆ) ರೂಪಾಯಿ ಪಡೆದರು. ಗೂಂಡಾಗಳಿಗೆ ಹಣ ವಿತರಣೆ ಮಾಡಿ ರಾತ್ರೆ ಹಗಲು ಕೊಲೆ, ಸುಲಿಗೆ ಮತ್ತು ಬೆಂಕಿ ಕೊಡುವಿಕೆಯನ್ನು ಸಂಘಟಿಸಿದ ಮುಲ್ಲಾ ಮೌದೂದಿ 1974ನೇ ಇಸವಿಯ ಆದ್ಯ ಘಟ್ಟದಲ್ಲಿ ಹೆಚ್ಚಿನ ಹಣವನ್ನು ಪಡೆಯಲು ಅಮೇರಿಕದ ಕೇಂದ್ರ ಬೇಹುಗಾರಿಕಾ ಸಂಸ್ಥೆ (ಸಿ.ಐ.ಎ.)ಯೊಂದಿಗೆ ರಹಸ್ಯ ಸಂಧಾನವೇರ್ಪಡಿಸಲು ಅಮೇರಿಕದಲ್ಲಿ ತಳವೂರಿದ್ದು ಇಲ್ಲಿ ಸ್ಮರಣೀಯವಾಗಿದೆ.

ಅಹ್ಮದಿಯಾ ಸಂಘಟನೆಯನ್ನೂ ಅದರ ಕೇಂದ್ರವನ್ನೂ ಪಾಕಿಸ್ತಾನದಿಂದ ನಿರ್ಮೂಲನಗೊಳಿಸುವುದು ಮೌದೂದಿಯ ಉದ್ದೇಶವಾಗಿತ್ತು. ಅಲ್ಲಾಹು ಅಹ್ಮದಿಯರನ್ನು ರಕ್ಷಿಸಿದನು. ಮುಲ್ಲಾ ಮೌದೂದಿಯ ರಹಸ್ಯ ತಂತ್ರಗಳಿಗೆ ಸಮ್ಮತಿಯನ್ನಿತ್ತ ಭುಟ್ಟೋ ಸಾಹೇಬರೇ ಕೊನೆಗೆ ಮೌದೂದಿಯ ಮತ್ತು ಸಿ.ಐ.ಎ.ಯ ರಹಸ್ಯ ತಂತ್ರಗಳ ಬಲಿಪಶುವಾಗಬೇಕಾಯಿತು.

(ಚಂದ್ರಿಕ 10-4-1979)

ಅಹ್ಮದಿಯಾ ಸಂಘಟನೆಯ ಸದಸ್ಯರು ಪಾಕಿಸ್ತಾನದಲ್ಲಿ ಹೆಚ್ಚುತ್ತಾ ಹೋದರು. ಮುಲ್ಲಾ ಮೌದೂದಿ ನಿರಾಶೆಯ ನಿಟ್ಟುಸಿರು ಬಿಡುತ್ತಾ ಇದ್ದರು. ಮುಲ್ಲಾ ಮೌದೂದಿಗೆ ಕೊನೆಯ ಒಂದು ಆಶೆ ಇತ್ತು. ಇರಾನಿಗೆ ಮುಲ್ಲಾ ಖುಮೇನಿ ಪ್ರವೇಶಿಸಿದ ಹಾಗೆ ವಿಜೃಂಭಣೆಯಿಂದ ರಾಷ್ಟ್ರಾಧ್ಯಕ್ಷನಾಗಿ ಸಿಐಎ ಸ್ವರ್ಗವಾದ ಅಮೇರಿಕದಿಂದ ಪಾಕಿಸ್ತಾನಕ್ಕೆ ಯಾತ್ರೆ ನಡೆಸಿ ಅಲ್ಲಿ ಇಸ್ಲಾಮೀ ಕ್ರಾಂತಿಕಾರಿ ಸರಕಾರ ಸ್ಥಾಪಿಸಿ ಅಹ್ಮದಿಯರ ಕೊಲೆ ನಡೆಸುವುದೇ ಈ ಆಶೆಯಾಗಿತ್ತು. ಮುಲ್ಲಾ ಮೌದೂದಿಯ ಈ ಸಂಚು 7–9–'79ರಲ್ಲಿ "ಬುನ್‌ಯಾದ್" ಎಂಬ ಡೆಲ್ಲಿಯಿಂದ ಹೊರಡುವ ಉರ್ದು ವಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮುಲ್ಲಾ ಮೌದೂದಿ ಆ ದಿನಗಳಲ್ಲಿ ಅಮೇರಿಕದಲ್ಲಿ ಆರೋಗ್ಯ ಸುಧಾರಿಸಲು ಹೋಗಿದ್ದರು. ಆದರೆ ಅಲ್ಲಾಹುವಿನ ಪ್ರತಿನಿಧಿಯಾದ ಅಹ್ಮದಿಯಾ ಖಲೀಫರ ಮೇಲೆ ಕೈ ಮಾಡಲು ರೂಪಿಸಿದ ಈ ಪಿತೂರಿ ಸಹ ನಿರರ್ಥಕವಾಯಿತು. ಅಮೇರಿಕದಿಂದ ಮುಲ್ಲಾ ಮೌದೂದಿಯ ಮೃತ ದೇಹ ಮಾತ್ರ ಪಾಕಿಸ್ತಾನ ತಲುಪಿತು. ಅಹ್ಮದಿಯಾ ಸಂಘಟನೆಯ ನಾಶದ ಕನಸುಗಂಡ ಮೌದೂದಿ ನಿರಾಸೆಯಿಂದ ಚಿರನಿದ್ರೆಯನ್ನು ಹೊಂದಿದರು.

ಮುಲ್ಲಾ ಮೌದೂದಿ ಮತ್ತು ಸಿಐಎ ಸಂಬಂಧದ ಕುರಿತು ಕೆಲವರಿಗೆ ಸಂಶಯ ತೋರಬಹುದು. ಅಮೇರಿಕದ ಹಿತಾಸಕ್ತಿಗಳಿಗೆ ವಿರುದ್ಧವಾದ ಶಕ್ತಿಗಳನ್ನು ಸದೆಬಡಿಯಲು ಮತ್ತು ಮುಸ್ಲಿಮರಿಗೆ ದೋಷವನ್ನುಂಟು ಮಾಡಲು ಸದಾಕಾಲ ಕಾರ್ಯತತ್ಪರವಾಗಿರುವ ರಹಸ್ಯ

ಸಂಸ್ಥೆ ಸಿ. ಐ. ಎ. ಆಗಿದೆ. ಮುಲ್ಲಾ ಮೌದೂದಿಯ ತತ್ವಗಳು ಇಸ್ಲಾಮನ್ನು ಲೋಕದೃಷ್ಟಿಯಲ್ಲಿ ನಿಕೃಷ್ಟ ವಾಗಿ ಕಾಣುವಂತೆ ಮಾಡಲು ಸಹಾಯಕವಾಗಿದೆ. ಕ್ರೈಸ್ತ ಪಾದರಿಗಳು ಇಸ್ಲಾಮಿನ ಕುರಿತು ಯಾವ ರೀತಿ ಪ್ರಚಾರ ಮಾಡುತ್ತಿರುವರೋ ಅವರನ್ನು ಅನುಕರಿಸಿ ಪ್ರಚಾರ ಮಾಡುವ ಮುಲ್ಲಾ ಮೌದೂದಿ ಸಿ.ಐ.ಎ.ಗೆ ಪ್ರಿಯನಾದುದರಲ್ಲಿ ಆಶ್ಚರ್ಯಕರವೇನಿಲ್ಲ. ಇಸ್ಲಾಮ್ ಖಡ್ಗಬಲದಿಂದ ಹಬ್ಬಿತೆಂದು ಕ್ರೈಸ್ತ ಪಾದರಿಗಳೂ ಮುಲ್ಲಾಮೌದೂದಿಯೂ ಹೇಳುತ್ತಾರೆ. ಯೇಸುಕ್ರಿಸ್ತರು ಜೀವಿಸಿರುವರೆಂದು ಕ್ರೈಸ್ತ ಪಾದರಿಗಳೂ ಮುಲ್ಲಾ ಮೌದೂದಿಯೂ ಹೇಳುತ್ತಾರೆ. ಇಸ್ಲಾಮಿನಲ್ಲಿ ದಯೆಗೆ ಸ್ಥಾನವಿಲ್ಲವೆಂದು ಕ್ರೈಸ್ತ ಪಾದರಿಗಳೂ ಮುಲ್ಲಾ ಮೌದೂದಿಯೂ ಹೇಳುತ್ತಾರೆ. ಆದುದರಿಂದ ಮುಲ್ಲಾಜಿ ಸಿಐಎಗೆ ಪ್ರಿಯಕರನಾದರು. ಅಂತಿಮ ಕಾಲದ ಮುಲ್ಲಾಗಳು ಆಕಾಶದ ಕೆಳಗಿರುವ ಜೀವಿಗಳಲ್ಲಿ ಅತ್ಯಂತ ನಿಕೃಷ್ಟರಾಗುವರೆಂದು ಮುಹಮ್ಮದ್ ಪೈಗಂಬರ್ (ಸ) ಹೇಳಿದ ವಚನ ಮುಲ್ಲಾ ಮೌದೂದಿ ಗಳಂತಹ ಸ್ವಾರ್ಥಿಗಳ ಜೀವಿತದಲ್ಲಿ ಚೆನ್ನಾಗಿ ಪ್ರತಿಬಿಂಬಿ ಸುತ್ತದೆ. ಇವರಿಗೆ ಇಸ್ಲಾಮಿನ ಸುಂದರ ಪಾಠಗಳ ಕುರಿತು ಯಾವುದೇ ಕಳಕಳಿಯಿಲ್ಲ. ಇಸ್ಲಾಮಿನ ಅವ ಹೇಳನವಾದರೂ ರಾಷ್ಟ್ರದ ನಾಶವಾದರೂ ಪ್ರಜೆಗಳು ದಾರಿದ್ರ್ಯದ ದವಡೆಗೆ ಸಿಲುಕಿದರೂ ಇವರಿಗೆ ಯಾವುದೇ ಪರವೆಯಿಲ್ಲ. ಇವರಿಗೆ ಬೇಕಾದುದು ಅಧಿಕಾರ ಮತ್ತು ಸುಖ ಸಂಪತ್ತು. ಇವರು ಅದಕ್ಕಾಗಿ ಇಸ್ಲಾಮಿನ ಹೆಸ ರನ್ನು ದುರುಪಯೋಗಿಸುತ್ತಾರೆ.

ಮುಲ್ಲಾ ಮೌದೂದಿ ನಿರಾಶೆಯ ಮರಣ ಹೊಂದಿ ಯಾಯಿತು. ಆ ವ್ಯಕ್ತಿ ಸ್ಥಾಪಿಸಿದ ಸಂಸ್ಥೆ ಸಹ ಸತ್ಯ ವಿರುದ್ಧ ಚಟುವಟಿಕೆಯಲ್ಲಿ ಮುಂದುವರಿದರೆ ನಾಮಾವ ಶೇಷವಾಗುವುದೆಂದು ಇದೋ ನಾವು ಮುನ್ನೆಚ್ಚರಿಕೆ ನೀಡುತ್ತೇವೆ.

□

# ನಿಧನ ವಾರ್ತೆಗಳು

ಮಂಜೇಶ್ವರದವರಾದ ಹಾಗೂ ಕೆಲವು ವರ್ಷಗಳಿಂದ ಉಳ್ಳಾಲದಲ್ಲಿ ವಾಸಿಸುತ್ತಿದ್ದ ಜನಾಬ್ ಸೈಯದ್ ಇಸ್ಮಾಯಿಲ್ ಸಾಹೇಬರು 12–2–'80ರಂದು ತನ್ನ 60ನೇ ಪ್ರಾಯದಲ್ಲಿ ನಿಧನ ಹೊಂದಿದರು. ಮೃತದೇಹ ವನ್ನು ಮಂಜೇಶ್ವರದ ಜನಾಬ್ ಅಬ್ದುಲ್ ರಶೀದ್ ಸಾಹೇಬರ (ಪ್ರೆಸಿಡೆಂಟ್) ಸ್ಥಳದಲ್ಲಿ ದಫನ ಮಾಡಲಾಯಿತು. ಮೃತರು ಮೂವರು ಪುತ್ರಿಯರನ್ನೂ ಮೂವರು ಪುತ್ರರನ್ನೂ ಧರ್ಮಪತ್ನಿಯನ್ನೂ ಅನೇಕ ಸ್ನೇಹಿತರನ್ನೂ ಅಗಲಿ ಹೋಗಿರುವರು.

□ □ □

ಅಹ್ಮದಿಯಾ ಜಮಾಅತಿನ ಪ್ರಮುಖರಲ್ಲೋರ್ವರೂ ಕೇರಳದ ಅಹ್ಮದಿಯಾ ಮಿಶನರಿಯಾಗಿದ್ದ ದಿವಂಗತ ಮೌಲಾನ ಬಿ. ಅಬ್ದುಲ್ಲಾ ಸಾಹೇಬರ ಸಹೋದರನೂ ಆಗಿದ್ದ ಬಿ. ಅಬ್ದುರ್ರಹೀಂ ಸಾಹೇಬ್ (ಎಡ್ವಕೇಟ್) ತನ್ನ 75ನೇ ವಯಸ್ಸಿನಲ್ಲಿ ಪಯಂಗಾಡಿಯಲ್ಲಿರುವ ತನ್ನ ನಿವಾಸದಲ್ಲಿ 30–3–80ರಂದು ನಿಧನ ಹೊಂದಿದರು. ಸೌದಿ ಅರೇಬಿಯಾದ ರಿಯಾದ್ ನ್ಯಾಶನಲ್ ಹೊಸ್ಪಿಟಲಿನ ಚೀಫ್ ಗೈನೋಕೊಲೋಜಿಸ್ಟ್ ಡಾಕ್ಟರ್ ಅಬ್ದುಲ್ಲ, ಅಬ್ದುಲ್ ಹಮೀದ್ (ಫಲ್ದಾರಿ ಒಟೋಮೊಬೈಲ್ಸ್, ದುಬಾಯಿ), ಪಯಂಗಾಡಿಯ ಡಾಕ್ಟರ್ ಮುಬಾರಕ ಮುಹಮ್ಮದ್, ಡಾಕ್ಟರ್ ಅಬ್ದುಲ್ ಲತೀಫ್ (ದುಬಾಯಿ), ಎ. ಅಹ್ಮದ್ (ಸೌದಿ ಅರೇಬಿಯಾ) ಎಂಬವರು ಅವರ ಮಕ್ಕಳು. ಧರ್ಮಪತ್ನಿಯನ್ನೂ ಅನೇಕ ಅಭಿಮಾನಿಗಳನ್ನೂ ಮೃತರು ಅಗಲಿ ಹೋಗಿರುವರು.

□ □ □

ಈರ್ವ ಸಹೋದರರಿಗೂ ಅಲ್ಲಾಹು ಮಗ್‌ಫಿರತನ್ನೂ ಸಂತಪ್ತ ಕುಟುಂಬಗಳಿಗೆ ಮತ್ತು ಅಭಿಮಾನಿಗಳಿಗೆ ಸಹನೆಯನ್ನೂ ಕರುಣಿಸಲಿ.

# ಮಟ್ಟನ್ನೂರಿನಲ್ಲಿ ಪೈಗಂಬರ ದಿನಾಚರಣೆ—ಗಲಭೆ

ಕೂಡಾಳಿ ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಮಟ್ಟನ್ನೂರ್ (ಕಣ್ಣನ್ನೂರು ಜಿಲ್ಲೆ) ಬಸ್‌ಸ್ಟೇಂಡಿನ ಸಮೀಪದ ಒಂದು ಖಾಸಗಿ ಸ್ಥಳದಲ್ಲಿ ಫೆಬ್ರವರಿ 1, 2 ಮತ್ತು 3ನೇ ದಿನಾಂಕಗಳಲ್ಲಿ ಪೈಗಂಬರ ದಿನಾಚರಣೆ ಹಾಗೂ ಇಸ್ಲಾಂ ಮತ ಭಾಷಣಗಳನ್ನು ನಡೆಸಲು ತೀರ್ಮಾನಿಸಲಾಗಿತ್ತು.

ಜನವರಿ 31ರಂದು ರಾತ್ರೆ ಅಹ್ಮದಿಯಾ ವಿರೋಧಿಗಳಿಂದ ಸಮ್ಮೇಳನ ವೇದಿಕೆ ನಾಶಗೊಳಿಸಲ್ಪಟ್ಟಿತ್ತು. ಆದ ಕಾರಣ ಹೊಸವೇದಿಕೆ ನಿರ್ಮಿಸಿ ಪೋಲೀಸ್ ಸಂರಕ್ಷಣೆಯೊಂದಿಗೆ ಜನವರಿ ಒಂದರಂದು ಅಹ್ಮದಿಯಾ ಸಭೆ ಆರಂಭಗೊಂಡಿತು. ಕೇರಳ ಅಹ್ಮದಿಯಾ ಮಿಶನರಿ ಮೌಲಾನ ಅಬುಲ್ ವಫಾ ಸಾಹೇಬರು ಅಧ್ಯಕ್ಷತೆ ವಹಿಸಿದರು. ಭಾರತದ ಪ್ರಚರಣಾ ಕಾರ್ಯದರ್ಶಿ ಮೌಲಾನ ಶರೀಫ್ ಅಹ್ಮದ್ ಅಮೀನಿಯವರು ಪೈಗಂಬರರ ಜೀವನ ಚರಿತ್ರೆಯನ್ನು ವಿವರಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಅಹ್ಮದಿಯಾ ವಿಶ್ವಾಸಕ್ಕೆ ವಿರೋಧವುಳ್ಳ ಬಹುಸಂಖ್ಯಾತ ಸುನ್ನಿ ಮುಸ್ಲಿಮರ ಒಂದು ಸಂಘ ಸುಮಾರು 200 ಗಜ ದೂರವಿರುವ ಜುಮ್ಮಾ ಮಸೀದಿಯಲ್ಲಿ ಧಾರಾಳ ತುಂಬಿದ್ದರು. ಮುನ್ನೆಚ್ಚರಿಕೆಯ ಕ್ರಮವಾಗಿ ಸಮ್ಮೇಳನ ಸ್ಥಳದಲ್ಲಿ ಮತ್ತು ಮಸೀದಿಯ ಸುತ್ತುಮುತ್ತ ಪೋಲಿಸರು ಠಾಣೆ ಹೂಡಿದ್ದರು. ಮಗ್‌ರಿಬ್ ಪ್ರಾರ್ಥನೆಯ ನಂತರ ಮಸೀದಿಯಲ್ಲಿರುವವರು "ಅಲ್ಲಾಹು ಅಕ್ಬರ್" ಎಂದು ಹೇಳುತ್ತಾ ಅಹ್ಮದಿಯಾ ಸಭೆಯ ಸ್ಥಳಕ್ಕೆ ಜಾಥಾ ಹೊರಡಲು ತಯಾರಾದಾಗ ಪೋಲೀಸರು ಅವರನ್ನು ತಡೆದರು. ಅಹ್ಮದಿಯರ ಸಭೆ ಜರಗಲು ಸಮ್ಮತಿಸಲಾರವೆಂದು ಹೇಳಿ ಅವರು ಸಮ್ಮೇಳನ ಸ್ಥಳಕ್ಕೆ ಧಾವಿಸಲು ಪ್ರಯತ್ನಿಸಿದರೆಂದೂ ಆದ್ದರಿಂದ ಅವರನ್ನು ಮಸೀದಿಯ ಗೇಟುದಾಟಿ ಹೊರಗೆ ಬರಲು ಬಿಡದೆ ತಡೆಯಲಾಯಿತೆಂದೂ ಪೋಲೀಸ್ ವಕ್ತಾರರು ಹೇಳುತ್ತಾರೆ. ಆಗ ಸುನ್ನಿ ಮುಸ್ಲಿಮರು ಪೋಲೀಸರ ಕಡೆಗೆ ಸೋಡಾ ಬಾಟ್ಲಿ ಮತ್ತು ಕಲ್ಲುಗಳನ್ನೆಸೆದರು. ಪೋಲೀಸರು ಲಾಠಿ ಪ್ರಯೋಗ ನಡೆಸಿದರು. ತಲಚೇರಿ ಅಸಿಸ್ಟೆಂಟ್ ಪೋಲೀಸ್ ಸುಪರಿಂಟೆಂಡೆಂಟ್ ಕೆ. ಪಿ. ಸೋಮರಾಜನ್ ಮತ್ತು ಇತರ 10 ಮಂದಿ ಪೋಲೀಸರು ಗಾಯಗೊಂಡರು. ಪೋಲೀಸರ ಲಾಠಿ ಪ್ರಯೋಗದಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ದಾಖಲಾದ 11 ಮಂದಿ ಸುನ್ನಿ ಮುಸ್ಲಿಮರಲ್ಲಿ ಅಖಿಲ ಭಾರತ ಮುಸ್ಲಿಂ ಯೂತ್ ಲೀಗಿನ ಸಂಸ್ಥಾನ ಜನರಲ್ ಸೆಕ್ರೆಟರಿ ಅಬ್ದುರ್ರಹಿಮಾನ್ ಕಲ್ಲಾಯಿ ಮತ್ತು ಜಂಇಯ್ಯತುಲ್ ಮುಅಲ್ಲಿಮೀನ್ ಕಣ್ಣನ್ನೂರು ಜಿಲ್ಲಾ ಪ್ರೆಸಿಡೆಂಟ್ ವಲಿಯ ಪರಂಬತ್ ಎಂ. ಫೌಝಿ ಸಹ ಸೇರಿದ್ದಾರೆ. ಇತರ ಏಳು ಸುನ್ನಿ ಮುಸ್ಲಿಮರನ್ನು ಕೈದು ಮಾಡಲಾಗಿದೆ. ಅಹ್ಮದಿಯರ ಪೈಕಿ ಯಾರಿಗೂ ಗಾಯವಾಗಲಿಲ್ಲ; ಯಾರನ್ನೂ ಕೈದು ಮಾಡಲಿಲ್ಲ. ಕಾರಣವೇನೆಂದರೆ ಯಾವನೇ ಅಹ್ಮದಿ ಈ ಅನಿಷ್ಟ ಸಂಭವ ನಡೆದ ಜಾಗದಲ್ಲಿರಲಿಲ್ಲ; ಯಾವೊಬ್ಬನೂ ಹಿಂಸಾಕೃತ್ಯಕ್ಕೆ ಪ್ರೇರಣೆ ನೀಡಿರಲಿಲ್ಲ.

**ಶಾಂತಿ ಸಭೆ:** ಮಟ್ಟನ್ನೂರಿನಲ್ಲಿ ನಡೆದ ಘಟನೆ ದೌರ್ಭಾಗ್ಯಕರವೆಂದು ಮರುದಿನ ಜಿಲ್ಲಾ ಕಲೆಕ್ಟರ್ ಎಂ. ಎ. ಕೋಶಿಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಇನ್‌ಸ್ಪೆಕ್ಷನ್ ಬಂಗಲೆಯಲ್ಲಿ ಸಮಾವೇಶಗೊಂಡ ಸುನ್ನಿ–ಅಹ್ಮದಿಯಾ, ವಿಭಾಗಗಳ ಹಾಗೂ ರಾಜಕೀಯ ಪಕ್ಷ ಪ್ರತಿನಿಧಿಗಳ ಸಭೆ ಅಭಿಪ್ರಾಯಪಟ್ಟಿತು. ಇಂತಹ ಅನಿಷ್ಟ ಸಂಭವ ಆವರ್ತಿಸದಿರಲಿಕ್ಕೂ ಶಾಂತ ರೀತಿಯ ಪೌರಜೀವಿತದ ಆಶ್ವಾಸನೆಯನ್ನೀಯಲಿಕ್ಕೂ ಆತ್ಮಾರ್ಥವಾಗಿ ಸಹಕರಿಸುವರೆ ಇವರೆಲ್ಲರೂ ಭರವಸೆ ನೀಡಿದರು. ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ್ ಕೆ. ಮ್ಯೊದಿನ್ ಕುಂಞಿ ಹಾಗೂ ಇತರ ಕೆಲವು ಪೋಲೀಸು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

**ಮತ ಸ್ವಾತಂತ್ರ್ಯ ಭಂಗಗೊಳಿಸಲು ಒಪ್ಪಬಾರದು:** ಎಲ್ಲಾ ಮತಸ್ಥರಿಗೂ ತಮ್ಮ ತತ್ವಗಳನ್ನೂ ಆದರ್ಶಗಳನ್ನೂ ಶಾಂತರೀತಿಯಲ್ಲಿ ಪ್ರಚಾರಗೊಳಿಸುವ

ಸಾಂವಿಧಾನಿಕ ಸ್ವಾತಂತ್ರ್ಯ ಹಕ್ಕುಗಳನ್ನು ಸಂರಕ್ಷಿಸುವರೆ ಫಲಪ್ರದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಫೆಬ್ರವರಿ 6ರಂದು ಜರಗಿದ ಕೇರಳ ಅಹ್ಮದಿಯಾ ಕೇಂದ್ರ ಸಮಿತಿ ಸಭೆ ಸರಕಾರದೊಡನೆ ಕೇಳಿಕೊಂಡಿತು. ಸಭೆಯು ಎಸ್. ಅಮೀರಲಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಲ್ಪ ಸಂಖ್ಯಾತರಾದ ಅಹ್ಮದಿ ಮುಸ್ಲಿಮರ ಪ್ರಚಾರ ಸ್ವಾತಂತ್ರ್ಯವನ್ನು ತಡೆಯಲಿಕ್ಕೂ ಮೂಲಭೂತ ಹಕ್ಕುಗಳನ್ನೂ ಪೌರಹಕ್ಕುಗಳನ್ನೂ ಹಾನಿಗೊಳಿಸಲಿಕ್ಕೂ ಬಹು ಸಂಖ್ಯಾತ ಮುಸ್ಲಿಮರ ಸಂಘಟಿತ ಪ್ರಯತ್ನಗಳ ಕುರಿತು ಸಭೆಯು ಖೇದವನ್ನೂ ಪ್ರತಿಭಟನೆಯನ್ನೂ ಸೂಚಿಸಿತು. ಕಣ್ಣನ್ನೂರು ಜಿಲ್ಲೆಯ ಮಟ್ಟನ್ನೂರಿನಲ್ಲಿ ಅಹ್ಮದಿಯಾ ಜಮಾಅತ್ ಸಂಘಟಿಸಿದ ಪೈಗಂಬರ ದಿನಾಚರಣೆಯನ್ನು ತಡೆಯಲಿಕ್ಕೂ ಗಲಬೆಯನ್ನುಂಟುಮಾಡಲಿಕ್ಕೂ ಶ್ರಮಿಸಿದವರ ವಿರುದ್ಧ ನಿಷ್ಪಕ್ಷವಾಗಿ ವರ್ತಿಸಿದ ಪೋಲೀಸರನ್ನು ಸಭೆ ಅಭಿನಂದಿಸಿತು. ಈ ಘಟನೆಗೆ ರಾಜಕೀಯ ಬಣ್ಣವನ್ನು ಹಚ್ಚಲು ಕೆಲವು ರಾಜಕೀಯ ಪಕ್ಷಗಳು ಪ್ರಯತ್ನಿಸುವುದು ದೌರ್ಭಾಗ್ಯಕರವೆಂದು ಸಭೆ ಅಭಿಪ್ರಾಯ ಪಟ್ಟಿತು.

## ಖಾದಿಯಾನಿನಲ್ಲಿ ವಾರ್ಷಿಕ ಸಮ್ಮೇಳನ

88ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಡಿಸೆಂಬರ್ 18, 19, 20ನೇ ದಿನಾಂಕಗಳಲ್ಲಿ ಜರಗಿತು. ಭಾರತದ ಎಲ್ಲೆಡೆಗಳಿಂದ ಮಾತ್ರವಲ್ಲ, ಮೊರಿಷ್ಯಸ್. ಜರ್ಮನಿ, ಡೆನ್ಮಾರ್ಕ್, ಇಂಗ್ಲೆಂಡ್, ಕೆನಡಾ, ಅಮೇರಿಕ ಪಾಕಿಸ್ತಾನ, ಬಂಗ್ಲಾದೇಶ, ಇಸ್ರೇಲ್, ಘಾನ, ಹಾಲೇಂಡ್, ಟ್ರೆನಿಡಾಡ್, ಸ್ವಿಜರ್ಲೆಂಡ್. ಇಂಡೋನೇಶ್ಯಾ, ಸಿಂಗಾಪುರ, ಮಲೆಯೇಶ್ಯಾ. ಜೂರಿಚ್ ಎಂಬೀ ಸ್ಥಳಗಳಿಂದ ನೂರಾರು ಅಹ್ಮದಿ ಸ್ತ್ರೀ ಪುರುಷರು ಸಭೆಯಲ್ಲಿ ಭಾಗವಹಿಸಿದರು.

## ರಬ್‌ವಾದಲ್ಲಿ ವಾರ್ಷಿಕ ಸಮ್ಮೇಳನ

87ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಡಿಸೆಂಬರ್ 26. 27, 28ನೇ ದಿನಾಂಕಗಳಲ್ಲಿ ಪಾಕಿಸ್ತಾನದ ರಬ್‌ವಾದಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು. ಈ ಸಮ್ಮೇಳನದಲ್ಲಿ ಅಮೇರಿಕ, ಏಷ್ಯಾ, ಆಸ್ಟ್ರೇಲಿಯಾ ಮತ್ತು ಯೂರೋಪಿನ ಎಲ್ಲಾ ವರ್ಣ ಮತ್ತು ವರ್ಗದವರು ಸೇರಿ ಸುಮಾರು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಅಹ್ಮದಿಯರು ಭಾಗವಹಿಸಿದರು. ಮೂರು ದಿನಗಳಲ್ಲೂ ಅಹ್ಮದಿಯಾ ಖಲೀಫರು ನೆರೆದ ಅಹ್ಮದಿಯರನ್ನು ಸಂಬೋಧಿಸಿ ಮಾತನಾಡಿದರು. ಪ್ರಥಮ ದಿನದ ಸಭೆಯಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮರು ಭಾಷಣವಿತ್ತರು.

## ನೈಜೀರಿಯಾ ವಾರ್ಷಿಕ ಸಮ್ಮೇಳನ

30ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ನೈಜೀರಿಯಾದ ಲಾಗೋಸ್‌ನಲ್ಲಿ ಡಿಸೆಂಬರ್ 23ರಿಂದ 25ರ ವರೆಗೆ ಜರಗಿತು. ಸುಮಾರು 5 ಸಾವಿರಕ್ಕೆ ಮಿಕ್ಕಿದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

## ಮುಹಮ್ಮದಲಿಗೆ ಖುರ್‌ಆನಿನ ಪಾರಿತೋಷಕ

ಕಳೆದ ಜನವರಿ 31ರಂದು ವಿಶ್ವವಿಖ್ಯಾತ ಬೋಕ್ಸರ್ ಮಿಸ್ಟರ್ ಮುಹಮ್ಮದಲಿ ಮದರಾಸನ್ನು ಸಂದರ್ಶಿಸಿದಾಗ ಅಲ್ಲಿನ ಒಂದು ಮುಸ್ಲಿಂ ಸಂಸ್ಥೆ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಅಹ್ಮದಿಯಾ ಪ್ರತಿನಿಧಿಯಾದ "ಆಜಾದ್ ನೌಜವಾನ್" ಪತ್ರಿಕೆಯ ಸಂಪಾದಕ ಮುಹಮ್ಮದ್ ಕರೀಮುಲ್ಲಾ ನೌಜವಾನ್‌ರವರು ಅವರಿಗೆ ಖುರ್‌ಆನಿನ ಒಂದು ಇಂಗ್ಲಿಷ್ ಪ್ರತಿಯನ್ನು ಕಾಣಿಕೆಯಾಗಿತ್ತರು. ಅದನ್ನು ಅವರು ಗೌರವದಿಂದ ಸ್ವೀಕರಿದರು.

## ಪ್ರೊಫೆಸರ್ ಸಲಾಮರಿಗೆ ಪಾಕಿನ ಗೌರವ

ಡಿಸೆಂಬರ್ 18ರಂದು ಇಸ್ಲಾಮಾಬಾದಿನ ನೇಶನಲ್ ಅಸೆಂಬ್ಲಿ ಕಟ್ಟಡದಲ್ಲಿ ಜರಗಿದ ಒಂದು ವಿಶೇಷ ಸಮಾರಂಭದಲ್ಲಿ ಅಧ್ಯಕ್ಷ ಜನರಲ್ ಜಿಯಾಉಲ್ ಹಕ್ ಡಾಕ್ಟರ್ ಓಫ್ ಸಾಯನ್ಸ್ (Doctor of Science) ಎಂಬ ಬಿರುದನ್ನು ಪ್ರೊಫೆಸರ್ ಅಬ್ದುಸ್ಸಲಾಮರಿಗೆ ಅವರು ಭೌತಶಾಸ್ತ್ರದಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ಲಭಿಸಿದ ನೋಬೆಲ್ ಪ್ರಶಸ್ತಿಯ ಗೌರವಾರ್ಥ ನೀಡಿದರು.

ಅಧ್ಯಕ್ಷ ಜನರಲ್ ಮುಹಮ್ಮದ್ ಜಿಯಾಉಲ್ ಹಕ್ ಅವರು (ಖಾಯಿದೆ ಆಝಂ ಯುನಿವರ್ಸಿಟಿಯ

ಚಾನ್ಸಿಲರ್ ಸಹ ಆಗಿದ್ದಾರೆ.) ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಫೆಡರಲ್ ಸಚಿವರೂ ರಾಜತಂತ್ರಜ್ಞರೂ ವಿಜ್ಞಾನಿಗಳೂ ವಿದ್ವಾಂಸರೂ ಉನ್ನತ ಸರಕಾರಿ ಅಧಿಕಾರಿಗಳೂ ಈ ಸಮಾರಂಭದಲ್ಲಿ ಭಾಗವಹಿಸಿದರು.

ಪದವಿಯನ್ನು ನೀಡುವ ಮೊದಲು ಖಾಯಿದೆ ಆಝಂ ಯುನಿವರ್ಸಿಟಿಯ ವೈಸ್ ಚೌನ್ಸಿಲರ್ ಡಾಕ್ಟರ್ ಅಹ್ಮದ್ ಮೊಹಿಯುದ್ದೀನ್ ಪ್ರೊಫೆಸರ್ ಸಲಾಮರ ಗುಣಗಾನ ಮಾಡಿದರು. ಭೌತಶಾಸ್ತ್ರದಲ್ಲಿ ಪ್ರೊಫೆಸರ್ ಸಲಾಂ ಗಳಿಸಿದ ಸಾಧನೆ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಿಜ್ಞಾನದ ಪ್ರಗತಿಗಾಗಿ ಪ್ರೊಫೆಸರ್ ಸಲಾಂ ತೋರಿಸಿದ ಆಸಕ್ತಿಯ ಕುರಿತು ಡಾಕ್ಟರ್ ಅಹ್ಮದ್ ಮೊಹಿಯುದ್ದೀನ್ ವಿವರಿಸಿದರು. ( ಪಾಕಿಸ್ತಾನ್ ನ್ಯೂಸ್, ಜನವರಿ 15, 1980 )

x x x

ಅಧ್ಯಕ್ಷ ಜನರಲ್ ಮುಹಮ್ಮದ್ ಜಿಯಾಉಲ್ ಹಕ್ "ನಿಶಾನೆ ಇಮ್ತಿಯಾಝ್" ಎಂಬ ಬಿರುದನ್ನು ತನ್ನ ನಿವಾಸದಲ್ಲಿ ಏರ್ಪಡಿಸಲಾದ ಸಮಾರಂಭದಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಅಬ್ದುಸ್ಸಲಾಮರಿಗೆ ನೀಡಿರುವರೆಂದು ಡಿಸೆಂಬರ್ 12ರಂದು ಕ್ಯಾಬಿನೆಟ್ ಡಿವಿಶನಿನಿಂದ ಹೊರಡಿಸಲಾದ ಪ್ರಕಟನೆ ತಿಳಿಸಿದೆ.

"ನಿಶಾನೆ ಇಮ್ತಿಯಾಝ್" ಪಾಕಿಸ್ತಾನದಲ್ಲಿ ವಿಜ್ಞಾನ ಮತ್ತು ಕಲೆ ಎಂಬೀ ರಂಗಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದವರಿಗೆ ನೀಡುವ ಅತ್ಯಂತ ಉಚ್ಚ ಮಟ್ಟದ ಬಿರುದಾಗಿದೆ.

ಪಂಜಾಬಿನ ಜಂಗ್ ಜಿಲ್ಲೆಯಲ್ಲಿರುವ ಪ್ರೊಫೆಸರ್ ಸಲಾಮರ ವಸತಿಯನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಲಿಕ್ಕೆ ತಾನು ಸಚಿವ ಸಂಪುಟದ ಸಮ್ಮತಿಯನ್ನು ಪಡೆಯಲಿಚ್ಛಿಸುತ್ತೇನೆಂದು ತನ್ನ ವಸತಿಯಲ್ಲಿ ಡಿಸೆಂಬರ್ 20 ರಂದು ಪ್ರೊಫೆಸರ್ ಸಲಾಮರ ಗೌರವಾರ್ಥ ಏರ್ಪಡಿಸಲಾದ ಒಂದು ಸತ್ಕಾರಕೂಟದಲ್ಲಿ ಅಧ್ಯಕ್ಷ ಜಿಯಾಉಲ್ ಹಕ್ ಹೇಳಿದರು. ( ಡಾನ್ ಓವರ್ಸೀಸ್, ಕರಾಚಿ, ಡಿಸೆಂಬರ್ 22 ಮತ್ತು 29)

## "ಮಿಸ್ಟರ್ ಆಂಧ್ರ"

ಈ ಮೊದಲು "ಮಿಸ್ಟರ್ ಹೈದರಾಬಾದ್" ಬಿರುದನ್ನು ಗಳಿಸಿದ್ದ ಹೈದರಾಬಾದಿನ ಅಹ್ಮದಿ ಯುವಕ ಮುಹಮ್ಮದ್ ಸಲೀಂ ನವೆಂಬರ್ 19ರಂದು ಜರಗಿದ "ಮಿಸ್ಟರ್ ಆಂಧ್ರ" ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುವರು. ಅವರು ಮುಂದೆ "ಮಿಸ್ಟರ್ ದಕ್ಷಿಣ ಭಾರತ" ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುತ್ತಾರೆ.

---

# ★ ಪ್ರಶ್ನೋತ್ತರ ★

**ಪ್ರಶ್ನೆ:** ಜಮಾಅತೆ ಇಸ್ಲಾಮಿಗಳನ್ನು ಮೌದೂದಿಗಳೆಂದು ಕರೆಯುವುದು ಸರಿಯೇ ?

**ಉತ್ತರ:** ಯಾವುದೇ ಪಂಗಡದವರನ್ನು ದೂಷಿಸುವ ಉದ್ದೇಶವಿಲ್ಲದೆ ಸರ್ವ ಸಾಮಾನ್ಯವಾಗಿ ಅವರನ್ನು ಗುರುತಿಸುವ ಹೆಸರಿನಿಂದ ಕರೆಯುವುದು ತಪ್ಪೆಂದು ಹೇಳಲಾಗುವುದಿಲ್ಲ ಎಂದು ಅಹ್ಮದಿಯರನ್ನು 'ಕಾದಿಯಾನಿಗಳು' ಎಂದು ಕರೆಯುವುದನ್ನು ನ್ಯಾಯೀಕರಿಸುತ್ತಾ ಸನ್ಮಾರ್ಗ ಪತ್ರಿಕೆಯಲ್ಲಿ (19-10-1979) ಬರೆಯಲಾಗಿದೆ. ಈ ಮಾನದಂಡ ಪ್ರಕಾರ ಜಮಾಅತೆ ಇಸ್ಲಾಮಿಗಳನ್ನು 'ಮೌದೂದಿಗಳು' ಎಂದು ಕರೆಯುವುದು ಸಂಪೂರ್ಣ ನ್ಯಾಯವಾಗಿದೆ. ಮಾತ್ರವಲ್ಲ; ಅವರನ್ನು 'ಮೌದೂದಿಗಳು' ಎಂದು ಕರೆಯಲಿಕ್ಕೆ ಬೇರೆ ಕಾರಣವೂ ಇದೆ. 'ಜಮಾಅತೆ ಇಸ್ಲಾಮಿ' ಎಂಬ ಮಾತಿನ ಅರ್ಥ ಇಸ್ಲಾಮಿಕ ಜಮಾಅತ್ ಎಂದಷ್ಟೇ. ಎಂದರೆ, ಅರಬಿ ಭಾಷೆಯಲ್ಲಿ 'ಅಲ್ ಜಮಾಅತುಲ್ ಇಸ್ಲಾಮಿಯ್ಯ' ಎಂದೂ ಪರ್ಷಿಯನ್ ಶೈಲಿಯಲ್ಲಿ 'ಜಮಾಅತೆ ಇಸ್ಲಾಮಿ' ಎಂದೂ ಕನ್ನಡ ಶೈಲಿಯಲ್ಲಿ 'ಇಸ್ಲಾಮಿಕ ಜಮಾಅತ್' ಎಂದೂ ಹೇಳಿದರೆ ಅರ್ಥ ಒಂದೇ ಆಗಿದೆ. ಎಲ್ಲಾ ಮುಸ್ಲಿಂ ಪಕ್ಷಗಳೂ ಹೇಳುವುದೂ ವಿಶ್ವಾಸವಿರಿಸುವುದೂ ತಮ್ಮದು ಇಸ್ಲಾಮಿಕ ಜಮಾಅತ್ ಎಂದಾಗಿದೆ. ಮುಸ್ಲಿಂ ಸಮುದಾಯದ ಯಾವುದಾದರೊಂದು ಪಕ್ಷ ಅಥವಾ ಸಂಘಟನೆ ತಮ್ಮದು ಅನಿಸ್ಲಾಮಿಕ ಜಮಾಅತೆಂದು ಒಪ್ಪಲಾರದು. ಹಾಗಿರು

(26ನೇ ಪುಟ ನೋಡಿರಿ)

# ಸಂಪಾದಕರಿಗೆ ಪತ್ರ

ಮಾನ್ಯರೇ,

ತಮ್ಮ ಜುಲೈ-ಸಪ್ಟೆಂಬರ್ ತಿಂಗಳ ಪತ್ರಿಕೆ ಓದಲು ತುಂಬಾ ರುಚಿಕರವಾಗಿತ್ತು. "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು" ಎಂಬ ನೈತಿಕ ಮೌಲ್ಯಗಳು ನಮ್ಮ ನಿತ್ಯಜೀವನಕ್ಕೆ ಸೊಗಸಾದ ದಾರಿ ತೋರಿಸಿಕೊಟ್ಟಿದೆ. ಹಾಗೂ ಇನ್ನಿತರ ಲೇಖನಗಳು ತುಂಬಾ ಮೆಚ್ಚಿಕೆಯಾಯಿತು. ಹೀಗೆ ತಮ್ಮ "ಯುಗರಶ್ಮಿ" ಚಿರಕಾಲ ಉಳಿಯಲೆಂದು ನನ್ನ ಅಭಿಲಾಷೆ.

ಇಂಡಿ. ಆರ್. ಎಸ್. ಸಿಂದಗಿ

X X X

ಮಾನ್ಯರೆ,

ರುಚಿಕರವಾದ ಲೇಖನಗಳಿಗಾಗಿ ನಾನು ಯಾವಾಗಲೂ ಯುಗರಶ್ಮಿಯನ್ನು ಪಡೆಯಲು ಕಾತರನಾಗಿರುತ್ತೇನೆ. ಪವಿತ್ರ ಇಸ್ಲಾಮಿನ ಹೆಸರಿನಲ್ಲಿ ಕೆಲವು ಸ್ವಾರ್ಥಿಗಳು ಅಪಾಯಕರ ಪಾತ್ರವನ್ನು ವಹಿಸಿ ಇಸ್ಲಾಮಿನ ಬಗ್ಗೆ ತಪ್ಪು ಕಲ್ಪನೆಯುಂಟಾಗುವಂತೆ ಮಾಡುವ ಈ ದಿನಗಳಲ್ಲಿ ಯುಗರಶ್ಮಿ ಮಹತ್ವದ ಪಾತ್ರ ವಹಿಸುತ್ತದೆ. ಸ್ವಾರ್ಥಿಗಳ ಕ್ರೂರ ಮನೋಭಾವನೆಗಳಿಂದಾಗಿ ಇಸ್ಲಾಮಿನ ಶಾಂತಮಯ ಅಧ್ಯಾಪನೆಗಳು ಸಾಮಾನ್ಯ ಜನರನ್ನು ತಲುಪದಂತಾಗಿದೆ.

ಈ ಹಾಳು ಅಡೆ ತಡೆಗಳನ್ನು ನೀಗಿಸುವರೆ ಅಲ್ಲಾಹು ಯುಗರಶ್ಮಿಗೆ ಸಾಕಷ್ಟು ಶಕ್ತಿ ಸಾಮರ್ಥ್ಯಗಳನ್ನು ನೀಡಲಿಯೆಂದು ನಾನು ಪ್ರಾರ್ಥಿಸುತ್ತೇನೆ.

ಮಂಲ್ಪೆ. ಅಬ್ದುಲ್ ಗಫೂರ್

X X X

ಸನ್ಮಾನ್ಯ ಯುಗರಶ್ಮಿಯ ಸಂಪಾದಕರಿಗೆ ಅಸ್ಸಲಾಮು ಅಲೈಕುಂ.

ತಾ. 23-11-79ರ 'ಸನ್ಮಾರ್ಗ'ದಲ್ಲಿ ಮಿರ್ಜಾರ ಮುಸ್ಲಿಂ ದ್ವೇಷ ಓದಿದೆ. ನನ್ನ ಪ್ರತಿಕ್ರಿಯೆ ಇಂತಿದೆ :

ಮಿರ್ಜಾರಷ್ಟು ಬುದ್ಧಿವಂತರಲ್ಲದ, ನಿಜವಾದ ಭಕ್ತಿ ವಿಶ್ವಾಸಗಳಿಲ್ಲದ ಕಪಟ ವಿಶ್ವಾಸಿ ನಾಯಕರಾಗಿದ್ದಾರೆ ಮೌಲಾನ ಮೌದೂದಿ. ಪೈಗಂಬರರ ಸ್ಥಾನದ ಬಗ್ಗೆ ಮಿರ್ಜಾರಿಗಿದ್ದಷ್ಟು ಗೌರವ ಮೌದೂದಿಗಿರಲಿಲ್ಲವೆಂಬುದು ಸರ್ವವಿದಿತ. ಪೈಗಂಬರರನ್ನು ಗೌರವಿಸುವುದನ್ನು ಈ ಮೌದೂದಿಗಳು ಇಷ್ಟಪಡುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಮೌದೂದಿಗಳು 'ಸನ್ಮಾರ್ಗ'ದ ಮೂಲಕ ದುರ್ಮಾರ್ಗ ಪ್ರಚಾರ ಮಾಡುತ್ತಿದ್ದಾರೆ.

ಮಿರ್ಜಾ ಜೀವಂತ ಕಾಲದಲ್ಲಿ ಇಸ್ಲಾಮೀ ಐಕ್ಯತೆಗಾಗಿ, ಜಾತೀಯ ಸೌಹಾರ್ದತೆಗಾಗಿಯೇ ಕೆಲಸ ಮಾಡಿದ್ದರು. ಮೌದೂದಿ ಕೋಮು ಗಲಭೆಯ ವಿಷಬೀಜ ಬಿತ್ತಿದರು. ಐಕ್ಯತೆಯನ್ನು ಒಡೆದರು. ಗೊಂದಲ ಸೃಷ್ಟಿಸಿದರು. ಸಾಲದ್ದಕ್ಕೆ, ಹಿಂದೂ-ಮುಸ್ಲಿಂ ದ್ವೇಷ ಮಾತ್ರ ಅಲ್ಲದೆ, ಮುಸ್ಲಿಂ-ಮುಸ್ಲಿಂ ವರ್ಗ ಸೃಷ್ಟಿಸಿ, ಇಸ್ಲಾಮನ್ನು ನಾಶಪಡಿಸಲು ಹೊರಟಿದ್ದಾರೆ. 'ಸನ್ಮಾರ್ಗ' ಇಸ್ಲಾಮನ್ನು ವಿನಾಶಕ್ಕೆ ದೂಡುತ್ತಿದೆ ಎಂಬುದನ್ನು ಜನರು ಗಮನಿಸಬೇಕೆಂದು ಕಳಕಳಿಯ ವಿನಂತಿ.

ಇದೊಂದು ದ್ವೇಷ ಬಿತ್ತುವ ಭೂತ. ಇದನ್ನು ಹೊಡೆದೋಡಿಸದಿದ್ದರೆ ಸೌಹಾರ್ದತೆಗೆ ಕಾರಣವಾದ ನಮ್ಮ ಪರಂಪರೆ ನಾಶವಾದೀತೆಂದು ಎಚ್ಚರಿಕೆ ನೀಡುತ್ತೇನೆ.

ಕಾರಕಳ. —ಅಬೂ ಸಯಿಾಂ

# ಓದಿದ್ದು

## ಪ್ರೊಫೆಸರ್ ಅಬ್ದುಸ್ಸಲಾಮರ ಕುರಿತು

"1979ರ ಭೌತಶಾಸ್ತ್ರದ ನೋಬೆಲ್ ಪ್ರಶಸ್ತಿ ಪ್ರೊಫೆಸರ್ ಅಬ್ದುಸ್ಸಲಾಮರಿಗೆ ಇನ್ನಿಬ್ಬರು ವಿಜ್ಞಾನಿಗಳೊಂದಿಗೆ ಲಭಿಸಿದ್ದು ನಮ್ಮ ರಾಷ್ಟ್ರಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಅವರು ಈ ಪ್ರಶಸ್ತಿ ಗಳಿಸಿದ ಪ್ರಥಮ ಪಾಕಿಸ್ತಾನಿ ಮಾತ್ರವಲ್ಲ; ಪ್ರಥಮ ಮುಸ್ಲಿಂ ಸಹ ಆಗಿದ್ದಾರೆ. ವಿಕಾಸಶೀಲ ರಾಷ್ಟ್ರಗಳಲ್ಲಿ ಕಳೆದ 50 ವರ್ಷಗಳಿಂದ ಯಾರೂ ಇಂತಹ ಪ್ರಶಸ್ತಿ ಪಡೆಯಲಿಲ್ಲ.

ಈ ಸಂದರ್ಭದ ನೆನಪಿಗೋಸ್ಕರ ಹಾಗೂ ಈ ಮಣ್ಣಿನ ಮಗನ ಗೌರವಾರ್ಥ ಒಂದು ಸ್ಮಾರಕ ಅಂಚೆ ಚೀಟನ್ನು ಹೊರಡಿಸಬೇಕೆಂದು ನಾನು ಪಾಕಿಸ್ತಾನದ ಅಂಚೆ ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ."

ಕರಾಚಿ —ಜಿ. ಹೈದರ್

[ನವೆಂಬರ್ 3, 1979ರ ಡಾನ್ ಓವರ್ಸೀಸ್ ನಲ್ಲಿ ಪ್ರಕಟವಾದ ಸಂಪಾದಕರಿಗೆ ಪತ್ರ]

X X X

"ಭೌತ ವಿಜ್ಞಾನದಂತಹ ಭೌತಿಕಶಾಸ್ತ್ರದಲ್ಲಿ ಇಷ್ಟೊಂದು ಗರಿಷ್ಠ ಮಟ್ಟದ ಸಾಧನೆಗೈದ ವ್ಯಕ್ತಿ ದೇವರು-ಧರ್ಮಗಳಲ್ಲಿ ಆಸಕ್ತಿ ಕಳೆದುಕೊಂಡವನೇ ಆಗಿರಬೇಕೆಂದು ಅನೇಕರು ತರ್ಕಿಸುವುದು ಸಾಮಾನ್ಯ. ಆದರೆ ತಮಗೆ ನೋಬೆಲ್ ಬಹುಮಾನ ಬಂದ ವಾರ್ತೆ ಕಿವಿಗೆ ಬಿದ್ದೊಡನೆಯೇ ಅಬ್ದುಸ್ ಸಲಾಮ್ ಲಂಡನಿನಲ್ಲಿ ಸಮಾಪದ ಮಸೀದಿಗೆ ಧಾವಿಸಿ ಪ್ರಾರ್ಥನೆ ಸಲ್ಲಿಸಿ ಬಂದರು. ಅವರ ಗೌರವಾರ್ಥ ಪಾಕಿಸ್ತಾನದಲ್ಲಿ ಅಂಚೆ ಚೀಟಿಯನ್ನು ತೆಗೆಯಬೇಕೆಂಬ ಸೂಚನೆ ಬಂದಾಗಿನ ಅವರ ಪ್ರತಿಕ್ರಿಯೆಯನ್ನು ನೋಡಬಹುದು: *"ಇದು ಪಾಕಿಸ್ತಾನದ ಜನತೆಗೂ ಸರಕಾರಕ್ಕೂ ಸಂಬಂಧಪಟ್ಟ ವಿಷಯ. ಆದರೆ ಅಂಥ ಅಂಚೆ ಚೀಟಿಯಲ್ಲಿ ನನ್ನ ಚಿತ್ರವನ್ನು ಮುದ್ರಿಸುವ ಬದಲು ಕುರಾನಿನಲ್ಲಿ ಈ ವಿಶ್ವದ ಉಗಮಕ್ಕೆ ಸಂಬಂಧಿಸಿದಂತೆ ಬರುವ ನುಡಿಗಳಲ್ಲೊಂದನ್ನು ಆಯ್ದು ಹಾಕಬೇಕೆಂದು ನನಗನಿಸುತ್ತದೆ." [ಕಸ್ತೂರಿ ಜನವರಿ 1980]

*ಡಾನ್ ಓವರ್ಸೀಸ್, ನವೆಂಬರ್ 17, 1979ರ ಸಂಚಿಕೆಯಲ್ಲಿ ಲಂಡನಿನಲ್ಲಿರುವ ಈ ಪತ್ರಿಕೆಯ ವಿಶೇಷ ವರದಿಗಾರ ಯಹ್ಯಾ ಎಂ. ಸೈದ್ ಬರೆದ ಪತ್ರದಲ್ಲೂ ಈ ವಾಕ್ಯವನ್ನು ಉದ್ಧರಿಸಲಾಗಿದೆ.

++++++++++++

(24ನೇ ಪುಟದಿಂದ)

ವಾಗ ಎಲ್ಲಾ ಮುಸ್ಲಿಂ ಪಕ್ಷಗಳೂ ಅರ್ಥದಲ್ಲಿ 'ಜಮಾಅತೆ ಇಸ್ಲಾಮಿ'ಯೇ ಆಗಿವೆ. ಆದ್ದರಿಂದ ಎಲ್ಲಾ ಮುಸ್ಲಿಂ ಪಕ್ಷಗಳಿಗೂ ಈ ಹೆಸರಿನ ಹಕ್ಕಿದೆ. ಆದರೆ ಮೌದೂದಿಗಳು ಅದನ್ನು ತಮ್ಮ ಹಕ್ಕಾಗಿ ಇಟ್ಟುಕೊಂಡಿದ್ದಾರೆ. ತಮ್ಮದು ಮಾತ್ರ ಇಸ್ಲಾಮಿಕ ಜಮಾಅತೆಂದೂ ಬಾಕಿಯೆಲ್ಲಾ ಅನಿಸ್ಲಾಮಿಕ ಜಮಾಅತುಗಳೆಂದೂ ಅವರ ನಾಟ್ಯವಾಗಿದೆ. ಅದನ್ನು ಸಮ್ಮತಿಸಲು ತೀರಾ ನಿರ್ವಾಹವಿಲ್ಲ. ಆದ್ದರಿಂದ ಅವರನ್ನು 'ಮೌದೂದಿಗಳು' ಎಂದೇ ಕರೆಯಬೇಕಾಗಿದೆ. ಇನ್ನು 'ಜಮಾಅತೆ ಇಸ್ಲಾಮಿ' ಎಂದು ಕರೆಯುವುದಾದರೂ ಅದರೊಂದಿಗೆ 'ಮೌದೂದಿ' ಎಂಬ ವಿಶೇಷಣವನ್ನೂ ಸೇರಿಸಬೇಕಾಗಿದೆ. ಹಾಗಿದ್ದರೆ ಮಾತ್ರ ಇತರ ಸಂಘಟನೆಗಳಿಂದ ಅದನ್ನು ಬೇರ್ಪಡಿಸಿ ತಿಳಿಯಲು ಸಾಧ್ಯವಾಗುವುದು. ಈ ವಿಶೇಷಣ ಅವರಿಗೆ ಭೂಷಣವೂ ಆಗಿದೆ. ಏಕೆಂದರೆ ಇದು ಆ ಸಂಘಟನೆಯ ಸ್ಥಾಪಕರ ಹೆಸರಿನ ಒಂದು ಭಾಗವೂ ಆಗಿದೆ. ಹಾಗೆ 'ಜಮಾಅತೆ ಇಸ್ಲಾಮಿ ಮೌದೂದಿ' ಎಂದು ಹೇಳಬೇಕಾಗಿದೆ. ಸಂಕ್ಷಿಪ್ತವಾಗಿ 'ಮೌದೂದಿಗಳು' ಎಂದು ಸಹ ಹೇಳಬಹುದು.

—೦—೦—

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## (7)

ಗ್ರಂಥಕರ್ತ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

### ಆಧ್ಯಾತ್ಮಿಕ ಸ್ಥಿತಿ

ಇನ್ನು ಮೂರನೆಯ ಸಂಸ್ಕಾರ ಘಟ್ಟವಾದ ಆಧ್ಯಾತ್ಮಿಕ ಸ್ಥಿತಿಯ ಕುರಿತು ಚಿಂತಿಸೋಣ. ಪವಿತ್ರ ಖುರ್ಆನಿನ ಅಧ್ಯಾಪನ ಪ್ರಕಾರ ಆಧ್ಯಾತ್ಮಿಕ ಸ್ಥಿತಿಯ ಉದ್ಭವಸ್ಥಾನ 'ನಫ್ಸ ಮುತ್ಮಇನ್ನ' ಅಥವಾ 'ಶಾಂತಿಯನ್ನು ಗಳಿಸಿದ ಆತ್ಮ' ಎಂದು ಮೊದಲು ಪ್ರಸ್ತಾವಿಸಲಾಗಿದೆಯಷ್ಟೇ. ಈ ಘಟ್ಟದ ಸಂಸ್ಕಾರ ವಿಧಾನವು ಸದ್ಗುಣ ಸಂಪನ್ನನಾದ ಮನುಷ್ಯನನ್ನು ಆಧ್ಯಾತ್ಮಿಕ ಗುಣ ಸಂಪನ್ನನಾಗಿ ಮಾಡುವುದಾಗಿದೆ. ಎಂದರೆ, ಮನುಷ್ಯನನ್ನು ನೈತಿಕ ಸ್ಥಿತಿಯಿಂದ ಆಧ್ಯಾತ್ಮಿಕ ಸ್ಥಿತಿಯ ಉನ್ನತ ಮಟ್ಟಕ್ಕೆ ಏರಿಸುವುದಾಗಿದೆ. ಪವಿತ್ರ ಖುರ್ಆನ್ ಹೇಳುತ್ತದೆ:

"ಯಾ ಅಯ್ಯತುಹನ್ನಫ್ಸುಲ್ ಮುತ್ಮಇನ್ನತುರ್ ಜಿಈ ಇಲಾ ರಬ್ಬಿಕಿ ರಾದಿಯತ(ನ್)ಮ್ಮರ್‌ದಿಯ್ಯ-ಫದ್‌ಖುಲೀ ಫೀ ಇಬಾದೀ ವದ್‌ಖುಲೀ ಜನ್ನತೀ" (89: 28-31)-ಎಲೈ ಪರಮಾತ್ಮನಿಂದ ಶಾಂತಿಯನ್ನು ಗಳಿಸಿದ ಆತ್ಮವೇ, ನೀನು ಅವನಲ್ಲಿ ಸಂತೃಪ್ತನಾಗಿಯೂ ಅವನು ನಿನ್ನಲ್ಲಿ ಸಂತೃಪ್ತನಾದ ನೆಲೆಯಲ್ಲೂ ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗು; ನನ್ನ ಭಕ್ತದಾಸರ ಜೊತೆಯಲ್ಲಿ ಸೇರಿ ನನ್ನ ಸ್ವರ್ಗದಲ್ಲಿ ಪ್ರವೇಶಿಸು.

ಆಧ್ಯಾತ್ಮಿಕ ಸ್ಥಿತಿಯ ಕುರಿತು ಪ್ರತಿಪಾದಿಸುವರೆ ಪ್ರಸ್ತುತ ಖುರ್ಆನ್‌ವಾಕ್ಯವನ್ನು ಸವಿಸ್ತಾರವಾಗಿ ವ್ಯಾಖ್ಯಾನಿಸುವುದು ಅಗತ್ಯ. ಐಹಿಕ ಜೀವಿತದಲ್ಲಿ ಮನುಷ್ಯನಿಗೆ ಪ್ರಾಪ್ತವಾಗುವ ಅತ್ಯುತ್ಕೃಷ್ಟವಾದ ಆಧ್ಯಾತ್ಮಿಕ ಸ್ಥಿತಿ, ತನ್ನ ಸಕಲ ನೆಮ್ಮದಿ, ಸಂತೋಷ, ಸಂತೃಪ್ತಿಗಳನ್ನು ದೇವನಲ್ಲಿ ಮಾತ್ರ ಕಾಣುವುದು ಹಾಗೂ ಅವನಿಂದ ಶಾಂತಿಯನ್ನು ಪಡೆಯುವುದಾಗಿದೆ. ಈ ಸ್ಥಿತಿಯನ್ನೇ ಬೇರೆ ಮಾತಿನಲ್ಲಿ ಸ್ವರ್ಗೀಯ ಜೀವಿತವೆಂದು ಹೇಳಲಾಗುತ್ತದೆ. ಈ ಘಟ್ಟದಲ್ಲಿ ಮನುಷ್ಯನು ತನ್ನ ಪೂರ್ಣವಾದ ಸತ್ಯನಿಷ್ಠೆ, ನಿಷ್ಕಳಂಕತೆ, ಪ್ರಾಮಾಣಿಕತೆಗಳ ಪ್ರತಿಫಲವಾಗಿ ಐಹಿಕ ಜೀವಿತದಲ್ಲೇ ಸ್ವರ್ಗಸುಖದ ಅನುಭವವನ್ನು ಪಡೆಯುತ್ತಾನೆ. ಇತರರು ಪರಲೋಕದಲ್ಲಿ ಒಂದು ಸ್ವರ್ಗವನ್ನು ಪ್ರತೀಕ್ಷಿಸುತ್ತಿರುವಾಗ ಈತನು ಇಹದಲ್ಲೇ ಸ್ವರ್ಗದಲ್ಲಿ ಪ್ರವೇಶಿಸಿರುತ್ತಾನೆ. ಈ ಸ್ಥಿತಿಯನ್ನು ಪಡೆಯುವವನು ಪ್ರಾರ್ಥನಾದಿ ಉಪಾಸನಾ ಕರ್ಮಗಳನ್ನು ಹೊರೆಯೆಂದು ಗಣಿಸದೆ, ಅವೆಲ್ಲಾ ವಾಸ್ತವದಲ್ಲಿ ತನ್ನ ಅಧ್ಯಾತ್ಮಪೋಷಣೆಗೂ ಉತ್ಕರ್ಷಕ್ಕೂ ಪರ್ಯಾಪ್ತವೆಂದೂ ತನ್ನ ಆಧ್ಯಾತ್ಮಿಕ ಜೀವಿತಕ್ಕೆ ಮೂಲ ಕಾರಣವಾಗಿರುವ ಆಹಾರವೆಂದೂ ಆ ಕರ್ಮಗಳ ಪ್ರತಿಫಲ ಮುಂದೆ ಪಾರತ್ರಿಕ ಜೀವಿತದಲ್ಲಿ ಮಾತ್ರವೇ ಲಭಿಸಲಿಕ್ಕಿರುವುದಲ್ಲವೆಂದೂ ತಿಳಿದುಕೊಳ್ಳುತ್ತಾನೆ. ಎರಡನೆಯ ಸಂಸ್ಕಾರ ಘಟ್ಟದಲ್ಲಿ, ಮನುಷ್ಯನನ್ನು ಅವನ ಅಶುದ್ಧ ಜೀವಿತದ ಕುರಿತು ದೂಷಿಸುತ್ತಿದ್ದರೂ ಅವನಲ್ಲಿ ಸದ್ವಿಚಾರಗಳನ್ನು ಮಾತ್ರ ಉಂಟುಮಾಡಲಿಕ್ಕಾಗಲಿ ಕೆಟ್ಟ ವಿಚಾರಗಳನ್ನು ದಮನಿಸಲಿಕ್ಕಾಗಲಿ ಸದ್ವರ್ತನೆ ಮತ್ತು ಸದ್ಗುಣದಲ್ಲಿ ಸ್ಥಿರಚಿತ್ತನನ್ನಾಗಿ ಮಾಡಲಿಕ್ಕಾಗಲಿ ಸಂಪೂರ್ಣ ಶಕ್ತವಲ್ಲದ 'ನಫ್ಸ ಲವ್ವಾಮಃ' ಅಥವಾ 'ಸ್ವಯಂ ದೂಷಿಸುವ ಆತ್ಮ' ಮೇಲೆ ಹೇಳಿದ ಶಾಂತಿ ಪಡೆದ ಆತ್ಮಸ್ಥಿತಿಯೆಡೆಗಿರುವ ಪ್ರಯಾಣ ಘಟ್ಟದಲ್ಲಿ ಪಾವನವಾದೊಂದು

ಮಾರ್ಪಾಟನ್ನು ಹೊಂದುತ್ತದೆ. ಈ ಹಂತವನ್ನು ಅವನು ತಲಪಿದಾಗ ಪೂರ್ಣ ಸಫಲತೆಯನ್ನು ಪಡೆಯುತ್ತಾನೆ; ಅವನ ಭೋಗೇಚ್ಛೆಗಳೆಲ್ಲಾ ಶಿಥಿಲಗೊಳ್ಳಲು ತೊಡಗುತ್ತವೆ; ಆತ್ಮದಲ್ಲಿ ಒಂದು ಹೊಸ ಚೈತನ್ಯ ಮೂಡಿಬರುತ್ತದೆ. ಆಗ ಅವನು ತನ್ನ ಮೊದಲಿನ ದುರ್ಬಲತೆ ಮತ್ತು ಚಪಲತೆಗಳ ಕುರಿತು ಲಜ್ಜಿತನಾಗಿ ಪಶ್ಚಾತ್ತಾಪ ಪಡುತ್ತಾನೆ. ಈ ಸಂದರ್ಭದಲ್ಲಿ ಮನುಷ್ಯನ ಸ್ವಭಾವದಲ್ಲಿ ದೊಡ್ಡದಾದ ಮಾರ್ಪಾಟು ಉಂಟಾಗುತ್ತದೆ; ಅವನ ಪೂರ್ವನಡತೆಗಳಲ್ಲಿ ಮಹತ್ತಾದ ಬದಲಾವಣೆ ಕಂಡುಬರುತ್ತದೆ. ಮಾತ್ರವಲ್ಲ, ಅವನು ತನ್ನ ಮುಂಚಿನ ಜೀವಿತ ರೀತಿಗಳಿಂದ ಬೇರ್ಪಟ್ಟು ದೂರವಾಗುತ್ತಾನೆ. ಅಶುದ್ಧತೆಗಳಿಂದ ಶುಚೀಕರಿಸಲ್ಪಟ್ಟು ಅವನು ಶುದ್ಧನಾಗುತ್ತಾನೆ. ಅವನ ಹೃದಯದಲ್ಲಿ ದೇವನು ತನ್ನ ಕರಗಳಿಂದ ಸದ್ಧರ್ಮ ಪ್ರೇಮವನ್ನು ಬಿತ್ತುತ್ತಾನೆ; ಅವನ ಹೃದಯದಿಂದ ಮಾಲಿನ್ಯವನ್ನು ಸಂಪೂರ್ಣ ಕಿತ್ತೆಸೆಯುತ್ತಾನೆ. ಅವನ ಹೃದಯಕ್ಷೇತ್ರದಲ್ಲಿ ಸತ್ಯತೆಯ ಸೈನ್ಯಗಳು ತಂಗುತ್ತವೆ; ಅಂತ:ಶಕ್ತಿಗಳೆಂಬ ದುರ್ಗಗಳನ್ನೆಲ್ಲಾ ಸತ್ಯಧರ್ಮ ಅಧೀನಗೊಳಿಸುತ್ತದೆ. ಹಾಗೆ ಸತ್ಯ ಗೆದ್ದು ಅಸತ್ಯ ಆಯುಧವನ್ನಿಟ್ಟು ಶರಣಾಗುತ್ತದೆ. ಈ ಸೌಭಾಗ್ಯಕ್ಕೆ ಪಾತ್ರನಾಗುವ ಮನುಷ್ಯನಿಗೆ ದೇವನ ಪವಿತ್ರ ಹಸ್ತದ ನೆರವಿರುತ್ತದೆ. ಅವನು ದೈವರಕ್ಷೆಯ ನೆರಳಿನಲ್ಲಿ ನಡೆಯುತ್ತಾನೆ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ಉಲಾಇಕ ಕತಬ ಫೀ ಕುಲೂಬಿಹಿಮುಲ್ ಈಮಾನ ವ ಅಯ್ಯದಹುಂ ಬಿರೂಹಿ(ನ್)ಮ್ಮಿನ್‌ಹು" (58:23)—ದೇವನು ತನ್ನ ಕೈಯಿಂದ ಭಕ್ತರ ಹೃದಯಗಳಲ್ಲಿ ಸತ್ಯವಿಶ್ವಾಸವನ್ನು ಕೆತ್ತಿದ್ದಾನೆ; ಮತ್ತು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ.

"ಹಬ್ಬಬ ಇಲೈಕುಮುಲ್ ಈಮಾನ ವ ಜಯ್ಯನಹೂ ಫೀ ಕುಲೂಬಿಕುಂ ವ ಕರ್‍ರಹ ಇಲೈಕುಮುಲ್ ಕುಫ್ರ ವಲ್‌ಫುಸೂಕ ವಲ್ ಇಸ್ಯಾನ ಉಲಾಇಕ ಹುಮು ರ್‍ರಾಶಿದೂನ ಫಲ್‌ಲ(ನ್)ಮ್ಮಿನಲ್ಲಾಹಿ ವ ನಿಅ್‌ಮತ(ನ್)ವಲ್ಲಾಹು ಅಲಿಮುನ್ ಹಕೀಂ" (49:8, 9)—"ಭಕ್ತರೇ, ದೇವನು ಸತ್ಯವಿಶ್ವಾಸವನ್ನು ನಿಮಗೆ ಪ್ರಿಯವನ್ನಾಗಿ ಮಾಡಿ; ಅದರ ಸೌಂದರ್ಯವನ್ನೂ ಉತ್ಕೃಷ್ಟತೆಯನ್ನೂ ನಿಮ್ಮ ಹೃದಯಗಳಲ್ಲಿ ಒತ್ತಿ, ಅವಿಶ್ವಾಸ, ಅಧರ್ಮ ಮತ್ತು ಪಾಪದ ಕುರಿತು ನಿಮ್ಮಲ್ಲಿ ವಿರಕ್ತಿಯನ್ನುಂಟುಮಾಡಿ, ದುರ್ಮಾರ್ಗಗಳೆಲ್ಲಾ ನಿಷಿದ್ಧವೆಂದು ನಿಮಗೆ ತಿಳಿಯುವಂತೆ ಮಾಡಿರುವನು. ಈ ಪ್ರಕಾರದಲ್ಲಿ ದೈವ ಸಹಾಯ ಪಡೆದವರು ಸನ್ಮಾರ್ಗವನ್ನು ಅನುಗಮಿಸುವವರಾಗಿದ್ದಾರೆ. ಇವೆಲ್ಲಾ ದೇವನ ಅನುಗ್ರಹದಿಂದಲೂ ಕರುಣೆಯಿಂದಲೂ ಆಗಿದೆ; ದೇವನು ಅತ್ಯಧಿಕ ತಿಳಿದವನೂ ಅಗಾಧ ಜ್ಞಾನಿಯೂ ಆಗಿದ್ದಾನೆ.

"ಜಾಅಲ್ ಹಕ್ಕು ವ ಜಹಕಲ್ ಬಾತಿಲು-ಇನ್ನಲ್ ಬಾತಿಲ ಕಾನ ಜಹೂಕಾ" (17:82)—ಸತ್ಯ ಪ್ರತ್ಯಕ್ಷವಾಯಿತು; ಅಸತ್ಯ ಅಂತರ್ಧಾನವಾಯಿತು; ಖಂಡಿತವಾಗಿಯೂ ಸತ್ಯವನ್ನು ಎದುರಿಸಲು ಅಸತ್ಯಕ್ಕೆ ಸಾಧ್ಯವಿಲ್ಲ.

ಸಂಕ್ಷಿಪ್ತವಾಗಿ, ಮೂರನೆಯ ಸಂಸ್ಕಾರ ಘಟ್ಟದಲ್ಲಿ ಮನುಷ್ಯನಿಗೆ ಲಭ್ಯವಾಗುವ ಆಧ್ಯಾತ್ಮ ಸ್ಥಿತಿಯನ್ನು ಮೇಲಿನ ವಾಕ್ಯಗಳು ಸೂಚಿಸುತ್ತವೆ. ಈ ಸ್ಥಿತಿಯನ್ನು ಪಡೆಯದವನಿಗೆ ಪರಮಾರ್ಥದರ್ಶನ ಅನುಭವವಾಗುವುದಿಲ್ಲ. 'ದೇವನು ತನ್ನ ಕೈಯಿಂದ ಭಕ್ತರ ಹೃದಯಗಳಲ್ಲಿ ಸತ್ಯ ವಿಶ್ವಾಸವನ್ನು ಕೆತ್ತಿದ್ದಾನೆ; ಮತ್ತು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ' ಎಂದು ಖುರ್‌ಆನಿನಲ್ಲಿ ಹೇಳಿದುದರ ಕುರಿತು ಚಿಂತಿಸೋಣ. ಈ ವಾಕ್ಯಗಳು ಸೂಚಿಸುವುದೇನೆಂದರೆ, ದೈವಿಕ ಸಹಾಯದ ವಿನಾ: ಮನುಷ್ಯನಿಗೆ ಯಥಾರ್ಥ ಪರಿಶುದ್ಧತೆ ಮತ್ತು ಸದ್ಗುಣ ಪ್ರಾಪ್ತವಾಗಲಾರದೆಂದಾಗಿದೆ. ದ್ವಿತೀಯ ಸಂಸ್ಕಾರ ಘಟ್ಟವಾದ 'ನಫ್ಸ್ ಲವ್ವಾಮಃ' ಅಥವಾ 'ಸ್ವಯಂ ದೂಷಿಸುವ ಆತ್ಮ' ಎಂಬ ಸ್ಥಿತಿಯಲ್ಲಿ ಮನುಷ್ಯನು ಪದೇ ಪದೇ ಪಶ್ಚಾತ್ತಾಪ ಪಡುತ್ತಲೂ ಪದೇ ಪದೇ ಎಡವಿ ಬೀಳುತ್ತಲೂ ಇರುತ್ತಾನೆ. ಕೆಲವು ಬಾರಿ ಅವನು ತನ್ನ ಸೋಲುವಿಕೆಯ ಕಾರಣವಾಗಿ ತನ್ನ ಸ್ವಭಾವ ಸಂಸ್ಕರಣದ ಸಂಬಂಧಿಸಿ ನಿರಾಶನಾಗಿ ತನ್ನ ಆತ್ಮದ ರೋಗಕ್ಕೆ ಔಷಧವಿಲ್ಲವೆಂದು ಭಾವಿಸುತ್ತಾನೆ. ಈ ಸ್ಥಿತಿ ಒಂದು ಪರಿಮಿತಿಯ ಕಾಲದ ವರೆಗೆ ಅವನಲ್ಲಿಗುತ್ತದೆ. ಕೊನೆಗೆ ದೈವ ಸಹಾಯದ ಕಾಲ ಒದಗಿ ಬಂದು ರಾತ್ರಿಯಲ್ಲೋ ಹಗಲಿನಲ್ಲೋ ಅವನಲ್ಲಿ ಒಂದು ತೇಜಸ್ಸು ಪ್ರತ್ಯಕ್ಷಗೊಳ್ಳುತ್ತದೆ. ದೈವಿಕ ಪ್ರಭಾವದಿಂದ ಕೂಡಿದ ಈ ತೇಜಸ್ಸಿನ ಆವಿರ್ಭಾವದ ಮೂಲಕ ಅವನ ಅಂತರಂಗದಲ್ಲಿ ಒಂದು ಅದ್ಭುತ ಪರಿವರ್ತನೆ ಉಂಟಾಗಿ, ತನ್ನನ್ನು ಒಂದು ಅದೃಶ್ಯ ಕೈ ಮುಂದಕ್ಕೆ ನಡೆಸಿ ಕೊಂಡು ಹೋಗುವಂತೆ ಅನುಭವ

ವಾಗುತ್ತದೆ; ಒಂದು ಅದ್ಭುತ ಲೋಕ ಹೊಸದಾಗಿ ಅವನ ಅಂತರ್ದೃಷ್ಟಿಗೆ ಗೋಚರಿಸುತ್ತದೆ. ಆ ಸಂದರ್ಭದಲ್ಲಿ ಅವನಿಗೆ ದೇವರ ಇರುವಿಕೆಯ ಕುರಿತು ದೃಢಜ್ಞಾನ ಸಿದ್ಧಿಸುತ್ತದೆ; ಒಂದು ನವ್ಯ ಪ್ರಕಾಶದಿಂದ ಅವನ ನೇತ್ರಗಳು ಹೊಳೆಯುತ್ತವೆ; ಅವನಿಗೆ ಅನೇಕ ಹೊಸ ಅನುಭವಗಳು ಉಂಟಾಗುತ್ತವೆ.

ಆದರೆ ಈ ಮಾರ್ಗವನ್ನು ಪಡೆಯುವುದೂ ಈ ದಿವ್ಯ ತೇಜಸ್ಸನ್ನು ಗಳಿಸುವುದೂ ಹೇಗೆ? ಕಾರ್ಯಕಾರಣ ಬಂಧದಿಂದ ಕೂಡಿದ ಈ ಲೋಕದಲ್ಲಿ ನಾವು ಕಾಣುವ ಎಲ್ಲಾ ಕಾರ್ಯಕ್ಕೂ ಒಂದೊಂದು ಕಾರಣ ಮತ್ತು ಎಲ್ಲಾ ಕ್ರಿಯೆಗೂ ಒಂದೊಂದು ಪ್ರೇರಕವೂ ಇದೆ. ಹಾಗೆಯೇ ಯಾವುದೇ ಜ್ಞಾನದ ಸಂಪಾದನೆಗೂ ಒಂದು ನಿರ್ದಿಷ್ಟ ಮಾರ್ಗವಿದೆ. ಕಾರ್ಯಸಿದ್ಧಿಯೆಡೆಗೆ ಕೊಂಡೊಯ್ಯುವ ಆ ಮಾರ್ಗವನ್ನು ಅದಕ್ಕೆ ಸಂಬಂಧಿಸಿದ ಸರಿಯಾದ ಮಾರ್ಗವೆಂದು ಹೇಳಬಹುದು. ದೇವರು ನಿಸರ್ಗದಲ್ಲಿ ನಿಶ್ಚಯಿಸಿಟ್ಟಿರುವ ನಿಯಮವನ್ನು ಅನುಸರಿಸದೆ ಯಾವ ಕಾರ್ಯವೂ ಸಾಧ್ಯವಲ್ಲ. ಪ್ರತಿಯೊಂದು ಕಾರ್ಯಕ್ಕೂ ಅದರದೇ ಆದ ನಿರ್ದಿಷ್ಟ ಮಾರ್ಗವಿದೆಯೆಂದೂ ಕಾರ್ಯಲಬ್ಧಿ ಆ ಮಾರ್ಗಾವಲಂಬನವನ್ನು ಆಶ್ರಯಿಸಿಕೊಂಡಿದೆಯೆಂದೂ ನಿಸರ್ಗ ನಿಯಮ ತಿಳಿಸಿಕೊಡುತ್ತದೆ. ಉದಾಹರಣೆಗಾಗಿ. ನಾವು ಒಂದು ಕತ್ತಲೆಯ ಕೋಣೆಯಲ್ಲಿದ್ದುಕೊಂಡು ನಮಗೆ ಸೂರ್ಯಪ್ರಕಾಶ ಬೇಕೆನಿಸಿದರೆ ಸೂರ್ಯನಿಗಭಿಮುಖವಾದ ಕಿಟಿಕಿಯನ್ನು ತೆರೆದಿರಿಸುವುದು ನಾವು ಕೈಗೊಳ್ಳಬೇಕಾದ ಸರಿಯಾದ ಮಾರ್ಗವಾಗಿದೆ. ಹಾಗೆ ಮಾಡಿದರೆ ತಕ್ಷಣ ಬೆಳಕು ಒಳಗೆ ಪ್ರವೇಶಿಸಿ ಸ್ಥಳವೆಲ್ಲಾ ಪ್ರಕಾಶಮಾನವಾಗುವುದು. ಇದೇ ಪ್ರಕಾರ, ದೇವನಿಂದ ಯಥಾರ್ಥ ಅನುಗ್ರಹ ಮತ್ತು ಪಾರಿತೋಷಕ ಪ್ರಾಪ್ತವಾಗಬೇಕಾದರೆ ಒಂದು ವಿಶಿಷ್ಟ ಕವಾಟವೂ ಆಧ್ಯಾತ್ಮ ಸಿದ್ಧಿಗೆ ವಿಶಿಷ್ಟವಾದೊಂದು ಮಾರ್ಗವೂ ಇರಬೇಕಾಗಿದೆ. ಒಟ್ಟಾರೆ, ಐಹಿಕ ಜೀವಿತದಲ್ಲಿ ನಮ್ಮ ಹಲವಿಧ ಕಾರ್ಯಸಿದ್ಧಿಗಾಗಿ ಅವುಗಳ ಸರಿಯಾದ ದಾರಿಗಳನ್ನು ಕಂಡು ಹಿಡಿದು ಪರಿಶ್ರಮಿಸುವ ರೀತಿಯಲ್ಲೇ ಆತ್ಮಾನುಭೂತಿಗಳ ಸರಿಯಾದ ದಾರಿಯನ್ನು ಹುಡುಕಿ ತಿಳಿಯುವುದು ಸಹ ನಮ್ಮ ಕರ್ತವ್ಯವಾಗಿದೆ. ದೇವನನ್ನು ಗಳಿಸುವ ಪಾವನವಾದ ಸರಿಯಾದ ಮಾರ್ಗ ಅಪೂರ್ಣ ಬುದ್ಧಿಶಕ್ತಿಯಿಂದ ಕಂಡುಹಿಡಿಯಲು ಸಾಧ್ಯವೇ? ದೇವನ ಬಲಯುತ ಕೈಯಿಂದ ಹೊರತು ತೆರೆಯಲಸಾಧ್ಯವಾದ ಆ ಬಾಗಿಲುಗಳು ಮನುಷ್ಯಕೃತ ತರ್ಕಶಾಸ್ತ್ರ, ತತ್ವಶಾಸ್ತ್ರ ಮೂಲಕ ತೆರೆಯಲು ಸಾಧ್ಯವೆ? ಇಲ್ಲ, ಖಂಡಿತವಾಗಿಯೂ ಇಲ್ಲ. ನಿತ್ಯಜೀವಿಯೂ ಸರ್ವಸಂರಕ್ಷನೂ ಆದ ದೇವನನ್ನು ಮನುಷ್ಯನ ಸೂತ್ರಗಳಿಂದಲೂ ಕೌಶಲಗಳಿಂದಲೂ ಪಡೆಯಲು ಸಾಧ್ಯವಿಲ್ಲ. ನಮ್ಮ ಸರ್ವಶಕ್ತಿಗಳನ್ನೂ ಜೀವಿತವನ್ನೂ ಮೊದಲಿಗೆ ದೇವನಿಗೆ ಅರ್ಪಿಸಿಕೊಂಡು ದೈವಪ್ರಾಪ್ತಿಗಾಗಿ ಸರ್ವಾತ್ಮನಾ ಪ್ರಾರ್ಥಿಸುತ್ತಿರುವುದೇ ಅದಕ್ಕಿರುವ ಸರಿಯಾದ ಮಾರ್ಗವಾಗಿದೆ. ಹೀಗೆ ದೇವನನ್ನು ದೇವನ ಮೂಲಕವೇ, ಎಂದರೆ ದೇವನ ಸಹಾಯದಿಂದಲೇ ಪಡೆಯಬೇಕಾಗಿದೆ.

ಈ ವಿಚಾರದಲ್ಲಿ ಸಮುಚಿತವಾದ ಮಾತುಗಳಿಂದ ಕೂಡಿದ, ಮನುಷ್ಯ ಸ್ವಭಾವಕ್ಕೆ ಅನುಯೋಜ್ಯವಾದ. ಆತ್ಮದ ಸ್ವಾಭಾವಿಕ ಸಂವೇಗಗಳನ್ನು ಸರಿಯಾಗಿ ಚಿತ್ರೀಕರಿಸುವ ಒಂದು ಪ್ರಾರ್ಥನೆಯನ್ನು ಪವಿತ್ರ ಖುರ್‌ಆನ್ ಅದರ ಪ್ರಥಮಾಧ್ಯಾಯದಲ್ಲಿ ಕಲಿಸಿಕೊಟ್ಟಿದೆ. ಅದು ಹೀಗಿದೆ :

"ಬಿಸ್ಮಿಲ್ಲಾ ಹಿರ್ರಹ್ಮಾನಿರ್ರಹೀಂ"-ಕೃಪಾನಿಧಿಯೂ ದಯಾಲುವೂ ಆದ ಅಲ್ಲಾಹುವಿನ ನಾಮದೊಂದಿಗೆ.

"ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್"- ಪಾವನವಾದ ಸರ್ವಸ್ತೋತ್ರಗಳು ಸರ್ವಲೋಕಗಳನ್ನು ಸೃಷ್ಟಿಸಿ ರಕ್ಷಿಸಿ ಪರಿಪಾಲಿಸುವ ಅಲ್ಲಾಹನಿಗೆ.

"ಅರ್ರಹ್ಮಾನಿರ್ರಹೀಂ"– ನಮ್ಮ ಕರ್ಮ ಮತ್ತು ಪರಿಶ್ರಮದ ಮುಂಚಿತವಾಗಿಯೇ ನಮಗೆ ಬೇಕಾದ ಸರ್ವ ಅನುಗ್ರಹ ವಸ್ತುಗಳನ್ನು ಸಿದ್ಧಪಡಿಸಿರುವ ಕೃಪಾನಿಧಿ ಹಾಗೂ ಕರ್ಮಗಳಿಗೆ ದಯಾಪೂರ್ವಕ ಪ್ರತಿಫಲಗಳನ್ನು ನೀಡುವ ಕರುಣಾವಂತನಾದ ದೇವ.

"ಮಾಲಿಕಿ ಯೌಮಿದ್ದೀನ್"– ಪ್ರತಿಫಲ ನೀಡಲ್ಪಡುವ ದಿನದ ನ್ಯಾಯಾಧಿಪತ್ಯವನ್ನು ಇನ್ನಾರಿಗೂ ಒಪ್ಪಿಸದೆ ಸ್ವಯಂ ಪರ್ಯಾಪ್ತನಾಗಿರುವ ಸರ್ವಾಧಿಪತಿ.

"ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್" ಈ ಸ್ತುತಿಗಳಿಗೆಲ್ಲಾ ಪಾತ್ರನಾಗಿರುವ ನಾಥ, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ; ನಿನ್ನೊಡನೆ ಮಾತ್ರ ಎಲ್ಲಾ ಕಾರ್ಯದಲ್ಲೂ ಸಹಾಯವನ್ನು ಯಾಚಿಸುತ್ತೇವೆ. (ಇಲ್ಲಿ 'ನಾವು' ಎಂಬ ಬಹುವಚನವನ್ನು ಪ್ರಯೋಗಿಸಿದ್ದು, ದೈವಾರಾಧನೆಯಲ್ಲಿ ನಮ್ಮ ಸಕಲ ಚಿಚ್ಛಕ್ತಿಗಳು ತಲ್ಲೀನ

ವಾಗಿವೆಯೆಂದೂ ಅವೆಲ್ಲಾ ದೈವೇಚ್ಛೆಗೆ ವಿಧೇಯ ಆಗಿವೆ ಎಂದೂ ಸೂಚಿಸಲಿಕ್ಕಾಗಿದೆ. ಏಕೆಂದರೆ ಮನುಷ್ಯನನ್ನು ಅವನ ಅಂತರಿಂದ್ರಿಯ ಶಕ್ತಿಗಳೊಂದಿಗೆ ಒಬ್ಬ ವ್ಯಕ್ತಿಯೆಂದಲ್ಲ ಒಂದು ಶಕ್ತಿ ಸಮೂಹವೆಂದು ಪರಿಗಣಿಸಲಾಗುತ್ತದೆ. ಹಾಗೆ ಆ ಶಕ್ತಿಗಳೆಲ್ಲಾ ದೇವನ ಅನುಸರಣೆ ಮತ್ತು ವಿಧೇಯತೆಯಲ್ಲಿ ತಲ್ಲೀನವಾಗಿರುವ ಒಂದು ಸ್ಥಿತಿಗೆ 'ಇಸ್ಲಾಂ' ಎಂದು ಹೇಳಲಾಗುತ್ತದೆ).

"ಇಹ್‌ದಿನ ಸ್ಸಿರಾತಲ್ ಮುಸ್ತಕೀಮ–ಸಿರಾತಲ್ಲದೀನ ಅನ್‌ಅಮ್ತ ಅಲೈಹಿಂ"-ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು; ಅದರಲ್ಲೇ ಸುಸ್ಥಿರಮಾಡಿ ನಿನ್ನ ಪಾರಿತೋಷಕಗಳಿಗೂ ಅನುಗ್ರಹಗಳಿಗೂ ಕೃಪಾಕಟಾಕ್ಷಗಳಿಗೂ ಪಾತ್ರರಾದವರ ದಾರಿಯಲ್ಲಿ ಸಾಗಿಸು.

"ಗ್ಯೆರಿಲ್ ಮಗ್‌ಲೂಬಿ ಅಲೈಹಿಂ ವಲಲ್ಲಾಲ್ಲೀನ್"– ನಿನ್ನ ಕ್ರೋಧಕ್ಕೆ ಗುರಿಯಾದವರ ಮತ್ತು ಮಾರ್ಗಭ್ರಷ್ಟರಾಗಿ ನಿನ್ನ ಸನ್ನಿಧಿಯನ್ನು ತಲುಪದವರ ದಾರಿಯಿಂದ ನಮ್ಮನ್ನು ರಕ್ಷಿಸು. "ಆಮೀನ್"– ಓ ದೇವನೇ, ಹಾಗೆಯೇ ಮಾಡು.

ಮೇಲಿನ ವಾಕ್ಯಗಳಿಂದ ತಿಳಿದು ಬರುವುದೇನೆಂದರೆ, ಜೀವಿತ ಸರ್ವಸ್ವವನ್ನು ದೈವಮಾರ್ಗದಲ್ಲಿ ಅರ್ಪಿಸಿ ಅವನಿಗೆ ಪೂರ್ಣವಾಗಿ ವಿಧೇಯವಾಗಿದ್ದುಕೊಂಡು ಅವನ ಇಷ್ಟಾನುಸರಣೆಯಲ್ಲಿ ಲೀನವಾಗಿರುವುದರ ಜೊತೆಗೆ ಆತ್ಮಾನುಭೂತಿ, ದೈವಸಾಮೀಪ್ಯ, ದೇವನಲ್ಲಿ ಐಕ್ಯ, ಭಾಷಣಾಮೃತ ಇವು ಲಭಿಸಲಿಕ್ಕಾಗಿ ತೀವ್ರವಾಗಿ ಪ್ರಾರ್ಥಿಸುತ್ತಲಿರುವವರ ಮೇಲೆ ದೇವರ ಪಾರಿತೋಷಕಗಳು ಅಥವಾ ಅನುಗ್ರಹಗಳು ಸುರಿಯುತ್ತವೆ. ಅವರು ತಮ್ಮ ಸರ್ವ ಶಕ್ತಿಗಳನ್ನು ದೇವೋಪಾಸನೆಯಲ್ಲಿ ವಿನಿಯೋಗಿಸಿ ಎಲ್ಲಾ ಪಾಪಗಳಿಂದ ಸ್ವಯಂ ಅಗಲಿಕೊಂಡು ದೈವ ಸನ್ನಿಧಿಯಲ್ಲಿ ಸಾಷ್ಟಾಂಗಪತಿತರಾಗಿರುತ್ತಾರೆ; ಸಕಲ ದೋಷಗಳನ್ನು ವರ್ಜಿಸಿ ದೇವಕ್ರೋಧದ ದಾರಿಗಳಿಂದೆಲ್ಲಾ ದೂರಸರಿದಿರುತ್ತಾರೆ. ಹೀಗೆ ಅವರು ಸ್ಥಿರತೆ, ನಿಷ್ಕಳಂಕ ಭಕ್ತಿಹಾಗೂ ಆತ್ಮಾರ್ಥತೆಯಿಂದೊಡಗೂಡಿ ದೇವರನ್ನು ಹುಡುಕುವುದರಿಂದ ಅವರ ಪ್ರಯತ್ನ ಸಫಲವಾಗಿ ಅವರು ಅವನನ್ನು ಪಡೆದು ಅವನ ಪಾವನವಾದ ಜ್ಞಾನಪಾತ್ರೆಯಿಂದ ಪಾನಮಾಡಿ ತೃಪ್ತಿಹೊಂದುತ್ತಾರೆ. ದೈವಮಾರ್ಗದಲ್ಲಿ ಸುಸ್ಥಿರವಾಗಿ ವರ್ತಿಸುವುದರ ಕುರಿತು ಈ ವಾಕ್ಯದಲ್ಲಿ ಸೂಚಿಸಲ್ಪಟ್ಟಿದುದರಿಂದ ತಿಳಿದು ಬರುವುದೇನೆಂದರೆ, ಆತ್ಮಾನುಭೂತಿಯೆಡೆಗೆ ಕೊಂಡೊಯ್ಯಲು ಪರ್ಯಾಪ್ತವಾದ ಯಥಾರ್ಥ ದೈವಾನುಗ್ರಹವು ಸತ್ಯಮಾರ್ಗದಲ್ಲಿ ಪರಿಪೂರ್ಣ ಸ್ಥಿರತೆಯಲ್ಲಿರುವುದರ ಹೊರತು ಲಭ್ಯವಾಗದೆಂದಾಗಿದೆ. ಇಲ್ಲಿ ಪರಿಪೂರ್ಣ ಸ್ಥಿರತೆಯೆಂದು ಹೇಳಿದುದರ ತಾತ್ಪರ್ಯ, ಯಾವುದೇ ಕಠಿಣ ಪರೀಕ್ಷೆಗೂ ವಿಚಲಿತಗೊಳಿಸಲಿಕ್ಕಾಗಲಿ ಹಾನಿಗೊಳಿಸಲಿಕ್ಕಾಗಲಿ ಅಸಾಧ್ಯವಾದ ನಿಷ್ಕಳಂಕವೂ ನಿಷ್ಕಪಟವೂ ಆದ ಭಕ್ತಿಯಾಗಿದೆ. ಎಂದರೆ, ಖಡ್ಗಕ್ಕೆ ಭೇದಿಸಲಿಕ್ಕಾಗದ, ಅಗ್ನಿಗೆ ದಹಿಸಲಿಕ್ಕಾಗದ, ಕಷ್ಟಾನುಭವಗಳಿಂದ ಹಾನಿಗೊಳಿಸಲಿಕ್ಕಾಗದ, ಬಂಧುಗಳ ಮರಣ ಕಾರಣಗಳಿಂದ ಬೇರ್ಪಡಿಸಲಿಕ್ಕಾಗದ, ಪ್ರಿಯಜನರ ವಿರಹ ದು:ಖದಿಂದ ಭಂಗಗೊಳಿಸಲಿಕ್ಕಾಗದ, ಮಾನನಷ್ಟಭಯದಿಂದ ಚಂಚಲಗೊಳಿಸಲಿಕ್ಕಾಗದ, ಕಠಿಣ ದಂಡನೆಯಿಂದೊಡಗೂಡಿದ ಮರಣ ಶಿಕ್ಷೆಯಿಂದ ಶಿಥಿಲೀಕರಿಸಲು ಸಾಧ್ಯವಿಲ್ಲದ ಒಂದು ಸುದೃಢ ಬಂಧವೆಂದು ಅದರ ವ್ಯಾಖ್ಯೆ ಹೇಳಬಹುದು. ಒಟ್ಟಿನಲ್ಲಿ. ದೈವೋಪಲಬ್ಧಿಯ ಈ ಕವಾಟ ಬಹಳ ಇಕ್ಕಟ್ಟಾಗಿದ್ದು ವೈಷಮ್ಯದಿಂದ ಕೂಡಿದೆ. ಹಾ, ಭಕ್ತಿಮಾರ್ಗ ಎಷ್ಟು ದುರ್ಗಮ!

ಈ ದುರ್ಘಟಾವಸ್ಥೆಯ ಸಂಬಂಧಿಸಿ ಪವಿತ್ರ ಖುರ್‌ಆನ್ ಈ ಕೆಳಗಿನ ವಾಕ್ಯದಲ್ಲಿ ಸೂಚನೆಯಿತ್ತಿದೆ:

"ಕುಲ್ ಇನ್ ಕಾನ ಆಬಾಉಕುಂ ವ ಅಬ್ನಾಉಕುಂ ವ ಇಖ್‌ವಾನುಕುಂ ವ ಅಜ್‌ವಾಜುಕುಂ ವ ಅಶೀರತುಕುಂ ವ ಅಮ್ವಾಲುನಿಕ್ತರಫ್‌ತುಮೂಹಾ ವ ತಿಜಾರತುನ್ ತಖ್‌ಶೌನ ಕಸಾದಹಾ ವ ಮಸಾಕಿನು ತರ್‌ಲಾನಹಾ ಅಹಬ್ಬ ಇಲೈಕುಂ ಮ್ಮಿನಲ್ಲಾಹಿ ವ ರಸೂಲಿಹೀ ವ ಜಿಹಾದಿನ್ ಫೀ ಸಬೀಲಿಹೀ ಫತರಬ್ಬಸೂ ಹತ್ತಾ ಯಅ್‌ತಿಯಲ್ಲಾಹು ಬಿ ಅಮ್ರಿರಿಹೀ–ವಲ್ಲಾಹು ಲಾ ಯಹ್‌ದಿಲ್ ಕೌಮಲ್ ಫಾಸಿಕೀನ್" (9:24)— ಅವರೊಡನೆ ಹೇಳು: ನಿಮ್ಮ ಪಿತರೂ ನಿಮ್ಮ ಪುತ್ರರೂ ನಿಮ್ಮ ಸಹೋದರರೂ ನಿಮ್ಮ ಪತ್ನಿಯಂದಿರೂ ನಿಮ್ಮ ಬಂಧುಗಳೂ ನೀವು ಕಷ್ಟಪಟ್ಟು ಸಂಪಾದಿಸಿದ ಸಂಪತ್ತೂ ನಿಂತುಹೋಗುವುದೆಂದು ನೀವು ಶಂಕಿಸುವ ವ್ಯಾಪಾರವೂ ನಿಮಗೆ ಮನೋಹರವಾಗಿ ಕಾಣುವ ವಸತಿಗಳೂ, ದೇವನಿಗಿಂತ ಅವನ ಪ್ರವಾದಿಗಿಂತ ದೈವಮಾರ್ಗದಲ್ಲಿ ಪ್ರಯತ್ನಿಸುವುದಕ್ಕಿಂತ ನಿಮಗೆ ಪ್ರಿಯವೆಂದಾದರೆ, ದೇವನು ತನ್ನ ಶಾಸನವನ್ನು ಬಹಿರಂಗಗೊಳಿಸುವ ವರೆಗೆ ಪ್ರತೀಕ್ಷಿಸಿರಿ: ದೇವನು ಅಧರ್ಮಿಗಳಿಗೆ ಮಾರ್ಗದರ್ಶನ ನೀಡುವುದಿಲ್ಲ.

ದೈವಾಭೀಷ್ಟವನ್ನು ತ್ಯಜಿಸಿ ಬಂಧುಗಳನ್ನೂ ಸಂಪತ್ತನ್ನೂ ಅಧಿಕ ಪ್ರೀತಿಸುವವರು ದೇವದೃಷ್ಟಿಯಲ್ಲಿ ಅಧರ್ಮಿಗಳೆಂದು ಈ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಅವರು ದೇವನಿಗಿಂತ ಇತರ ವಸ್ತುಗಳಿಗೆ ಪ್ರಾಶಸ್ತ್ಯ ಕೊಡುವ ಕಾರಣ ಖಂಡಿತವಾಗಿಯೂ ನಾಶಹೊಂದುತ್ತಾರೆ.

ಇದೇ ಮೂರನೆಯ ಘಟ್ಟವಾಗಿದೆ. ಈ ಸ್ಥಿತಿಯಲ್ಲಿ ದೇವನ ಸಂತುಷ್ಟಿಗಾಗಿ ಸಕಲವಿಧ ಕಷ್ಟಾರಿಷ್ಟತೆಗಳನ್ನು ಸಹಿಸಲಿಕ್ಕೆ ಸನ್ನದ್ಧನಾಗಿ, ದೇವನ ಹೊರತು ಏನೂ ತನಗಿಲ್ಲವೆಂದೂ ಅವನನ್ನು ಹೊರತು ಪಡಿಸಿದ ಸರ್ವವೂ ಮೃತಪ್ರಾಯವೆಂದೂ ತಿಳಿದುಕೊಂಡು ನಿಷ್ಕಳಂಕ ಭಕ್ತಿಯಿಂದಲೂ ಆತ್ಮಾರ್ಥತೆಯಿಂದಲೂ ಆ ಸರ್ವಾಧಿನಾಥನೆಡೆಗೆ ಬಾಗುವ ವ್ಯಕ್ತಿ ಆತ್ಮೋನ್ನತಿ ಸಿದ್ಧಿಸಿದ ದೈವಭಕ್ತನಾಗುತ್ತಾನೆ. ನಿಜ ಹೇಳುವುದಾದರೆ, ನಾವು ನಮ್ಮಲ್ಲಿ ಒಂದು ಮರಣವನ್ನು ಪಡೆಯದಿದ್ದರೆ, ಎಂದರೆ ನಮ್ಮ ವಿಷಯಾಸಕ್ತಿಗಳನ್ನು ನಾಶಗೊಳಿಸದಿದ್ದರೆ ಅಮರ್ತ್ಯನೂ ನಿತ್ಯ ಜೀವಿಯೂ ಆದ ದೇವನನ್ನು ಕಾಣಲು ನಮಗೆ ಸಾಧ್ಯವಿಲ್ಲ. ನಮ್ಮ ಭೌತಿಕ ಜೀವಿತಕ್ಕೆ ಮರಣ ಉಂಟಾಗುವ ದಿನವೇ ದೈವಪ್ರಕಟನೆಯ ಸುದಿನ. ಅನ್ಯ ವಸ್ತುಗಳ ದರ್ಶನದ ಸಂಬಂಧಿಸಿ ಅಂಧರಾಗದಿರುವ ತನಕ ನಾವು ಕುರುಡರಾಗಿದ್ದೇವೆ. ದೇವನ ದಿವ್ಯಹಸ್ತದಲ್ಲಿ ಮೃತಪ್ರಾಯರಂತೆ ಆಗದಿರುವ ತನಕ ನಾವು ಕೇವಲ ನಿರ್ಜೀವರಾಗಿದ್ದೇವೆ. ನಮ್ಮ ಮುಖ ದೇವನಿಗಭಿಮುಖವಾಗುವಾಗ ಮಾತ್ರವೇ ಸಕಲ ದೈಹಿಕೇಚ್ಛೆಗಳನ್ನು ದಮನಿಸುವ ಸ್ಥಿರನಿಷ್ಠೆ ನಮಗೆ ಲಭಿಸುತ್ತದೆ. ಈ ಸ್ಥಿರನಿಷ್ಠೆಯಿಂದ ವಿಷಯಲಂಪಟತ್ವಕ್ಕೆ ನಾಶ ಬರುತ್ತದೆ. ನಮ್ಮಲ್ಲುಂಟಾಗಬೇಕಾದ ಈ ಸ್ಥಿರಚಿತ್ತತೆ "ಬಲಾ ಮನ್ ಅಸ್ಲಮ ವಜ್ಹಹೂ ಲಿಲ್ಲಾಹಿ ವಹುವ ಮುಹ್‌ಸಿನುನ್" (2:113) ಎಂಬ ವಾಕ್ಯದಿಂದ ಪವಿತ್ರ ಖುರ್‌ಆನ್ ಸೂಚಿಸಿದಂತೆ, ದೇವನ ಸನ್ನಿಧಿಯಲ್ಲಿ ನಮ್ಮ ಕಂಠನಾಳವನ್ನು ಬಲಿಯರ್ಪಿಸಲು ನಮ್ಮನ್ನು ಸನ್ನದ್ಧರನ್ನಾಗಿಸುವ ಸ್ಥಿತಿಯಾಗಿದೆ. ಅದರ ಪ್ರಕಾರ ನಮ್ಮ ಸಕಲ ಬಾಹ್ಯಾಂಗಗಳನ್ನೂ ಅಂತಃಶಕ್ತಿಗಳನ್ನೂ ದೈವಹಿತಾನುವರ್ತನೆಯಲ್ಲಿ ಮಗ್ನಗೊಳಿಸಿ ನಮ್ಮ ಮರಣ ಮತ್ತು ಜೀವಿತವನ್ನು ದೇವರಿಗಾಗಿ ಅರ್ಪಿಸುವಾಗ ಮಾತ್ರವೇ ಈ ಉತ್ಕೃಷ್ಟವಾದ ಸ್ಥಿರನಿಷ್ಠೆ ನಮಗೆ ಸಿದ್ಧಿಸುತ್ತದೆ. ಈ ವಿಷಯದಲ್ಲಿ ಖುರ್‌ಆನ್ ಹೀಗೆ ಹೇಳುತ್ತದೆ:

"ಕುಲ್ ಇನ್ನ ಸಲಾತೀ ವ ನುಸುಕೀ ವ ಮಹ್‌ಯಾಯ ವ ಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್" (6:163)—ಹೇಳು: ನನ್ನ ಪ್ರಾರ್ಥನೆ, ನನ್ನ ತ್ಯಾಗ, ನನ್ನ ಜೀವಿತ, ನನ್ನ ಮರಣ ಎಲ್ಲಾ ಸರ್ವಲೋಕನಾಥನಾದ ದೇವನಿಗಾಗಿದೆ.

ತನ್ನ ಜೀವಿತವೂ ಮರಣವೂ ತನಗಾಗಿರದೆ ದೇವನಿಗಾಗಿರುವಂತೆ ಒಬ್ಬನ ದೈವಪ್ರೇಮ ತೀವ್ರತರದ್ದಾಗಿರುವಾಗ, ಸ್ನೇಹಿಸುವವರನ್ನು ಸ್ನೇಹಿಸುವ ಸರ್ವೇಶ್ವರನು ತನ್ನ ಪ್ರೀತಿಯನ್ನು ಅವನಲ್ಲಿ ಪ್ರಕಟಿಸುತ್ತಾನೆ. ಈ ಪ್ರೇಮದ್ವಯದ ಸಂಯೋಗದಿಂದ ಲೌಕಿಕ ವಿವೇಕಕ್ಕೆ ಕಾಣಲಿಕ್ಕಾಗಲಿ ಗುರುತಿಸಲಿಕ್ಕಾಗಲಿ ಅಸಾಧ್ಯವಾದ ಒಂದು ತೇಜಸ್ಸು ಅವನಲ್ಲಿ ಉದ್ಭವಿಸುತ್ತದೆ. ಅನೇಕ ಸಹಸ್ರ ಸತ್ಯಭಕ್ತರೂ ಸತ್ಪುರುಷರೂ ನಿರ್ದಯ ವಧಿಸಲ್ಪಟ್ಟದ್ದು ಅವರನ್ನು ಲೋಕ ಗುರುತಿಸದೆ ಇದ್ದುದರಿಂದಾಗಿದೆ. ಅವರ ಕಾಂತಿಮಯ ಮುಖಾರವಿಂದಗಳನ್ನು ಅಂಧವಾದ ಲೋಕಕ್ಕೆ ಕಾಣಲು ಸಾಧ್ಯವಾಗದಿದ್ದುದರಿಂದಲೇ ಅವರನ್ನು ವಂಚಕರೆಂದೂ ಸ್ವಾರ್ಥಿಗಳೆಂದೂ ಕರೆಯಲಾಯಿತು. ಈ ಆಧ್ಯಾತ್ಮಿಕ ಅಂಧತೆಯ ಕುರಿತು ಖುರ್‌ಆನ್ ಒಂದೆಡೆ ಹೀಗೆ ಹೇಳುತ್ತದೆ:

"ಯನ್‌ಲುರೂನ ಇಲೈಕ ವ ಹುಂ ಲಾ ಯುಬ್ಸಿರೂನ್" (7:199) — ಅವಿಶ್ವಾಸಿಗಳು ನಿನ್ನ ಕಡೆಗೆ ನೋಡುತ್ತಾರೆ; ಆದರೆ ಅವರು ನಿನ್ನನ್ನು ಕಾಣುವುದಿಲ್ಲ.

ಸಂಕ್ಷಿಪ್ತವಾಗಿ, ಸ್ವರ್ಗೀಯ ತೇಜಸ್ಸು ಸಂಜಾತವಾದ ಆ ಸುದಿನದಿಂದ ಪಾರ್ಥಿವ ಮನುಷ್ಯನು ಆಧ್ಯಾತ್ಮಿಕ ಮನುಷ್ಯನಾಗುತ್ತಾನೆ. ಸರ್ವವಲ್ಲಭನಾದ ದೇವನು ಅವನೊಡನೆ ಮಾತನಾಡುತ್ತಾನೆ; ತನ್ನ ದಿವ್ಯತ್ವದ ಪ್ರಭೆಯನ್ನು ಅವನಿಗೆ ತೋರಿಸುತ್ತಾನೆ. ಪಾವನವಾದ ದೈವಾನುರಾಗದಿಂದ ತುಂಬಿದ ಅವನ ಹೃದಯವನ್ನು ಪರಮಾತ್ಮನು ತನ್ನ ನಿವಾಸಸ್ಥಾನವಾಗಿಯೂ ತನ್ನ ಮಹತ್ವದ ಪೀಠವನ್ನಾಗಿಯೂ ಮಾಡುತ್ತಾನೆ. ಪಾವನವಾದ ಆತ್ಮ ಪರಿವರ್ತನೆಯಿಂದ ಈ ವ್ಯಕ್ತಿ ಒಬ್ಬ ಹೊಸ ಮನುಷ್ಯನಾಗಿ ಮಾರ್ಪಡುವ ಮೊದಲ್ಗೊಂಡು ಅವನಿಗೆ ಪರಮಾತ್ಮನು ಹೊಸ ಒಬ್ಬನಾಗಿ ತೋರುತ್ತಾನೆ. ಅವನಿಗೆ ಸಂಬಂಧಿಸಿದ ಮಟ್ಟಿಗೆ ದೇವನು ತನ್ನ ವರ್ತನೆಗಳಲ್ಲೂ ನಿಯಮ ಸಂಪ್ರದಾಯಗಳಲ್ಲೂ ಹೊಸತನವನ್ನು ಪ್ರಕಟಿಸಲು ತೊಡಗುತ್ತಾನೆ. ನಿಜವಾಗಿ ದೇವನು ಹೊಸಬನೋ, ಅವನ ಸಂಪ್ರದಾಯಗಳು ಹೊಸತೋ ಅಲ್ಲ. ಆದರೆ ಅವನ ಈ ವರ್ತನೆ ವಾಡಿಕೆಯಿಂದ ಭಿನ್ನವೂ ಭೌತಿಕ ತತ್ವಜ್ಞರಿಗೆ ಅಪರಿಚಿತವೂ ಆದ ರೀತಿಯದಾಗಿದೆ.

ಈ ಉತ್ಕೃಷ್ಟವಾದ ಪರಿವರ್ತನೆಯನ್ನು ಪಡೆದ ವ್ಯಕ್ತಿಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವ ಮಿನನ್ನಾಸಿ ಮ(ನ್)ಯ್ಯಶ್ರೀ ನಫ್‌ಸಹುಬ್ತಿ ಗಾಅ ಮರ್‌ಲಾತಿಲ್ಲಾಹಿ ವಲ್ಲಾಹು ರಊಫು(ನ್)ಬಿಲ್ ಇಬಾದ್" (2:208)- ಮನುಷ್ಯರಲ್ಲಿ ದೈವಾಭೀಷ್ಟಕ್ಕಾಗಿ ಜೀವಿತಾರ್ಪಣ ಮಾಡಿರುವ ಉತ್ಕೃಷ್ಟರು ದೇವನ ಸಂತುಷ್ಟಿಗಾಗಿ ತಮ್ಮ ಜೀವವನ್ನು ವಿಕ್ರಯಿಸುತ್ತಾರೆ; ದೇವನ ಕಾರುಣ್ಯ ಪ್ರಕಟನೆಗೆ ಪಾತ್ರರಾಗಿರುವವರು ಇವರೇ ಆಗಿದ್ದಾರೆ.

ಆಧ್ಯಾತ್ಮಿಕ ಉನ್ನತ ಮಟ್ಟಕ್ಕೆ ತಲಪಿದ ಮನುಷ್ಯನು ದೈವಮಾರ್ಗದಲ್ಲಿ ಆತ್ಮಾರ್ಪಣೆ ಮಾಡುವುದು ಈ ರೀತಿಯಲ್ಲಾಗಿದೆ. ಪವಿತ್ರಖುರ್‌ಆನ್‌ಪ್ರಸ್ತುತ ವಾಕ್ಯದಿಂದ ನಮಗೆ ಬೋಧಿಸುವುದೇನೆಂದರೆ, ದೈವಮಾರ್ಗದಲ್ಲಿ ಮತ್ತು ದೈವೇಚ್ಛೆಗಾಗಿ ಜೀವವನ್ನು ಬಲಿಯರ್ಪಿಸಿ, ತ್ಯಾಗ ಮೂಲಕ ದೈವಭಕ್ತಿಯನ್ನು ಪ್ರಕಟಿಸಿ, ತನ್ನ ಜೀವಿತ ಸರ್ವಸ್ವವೂ ಸೃಷ್ಟಿಕರ್ತನಿಗೆ ವಿಧೇಯನಾಗಿರಲಿಕ್ಕೂ ಸಹ-ಸೃಷ್ಟಿಗಳ ಸೇವೆ ಮಾಡಲಿಕ್ಕೂ ಇರುವುದೆಂದು ತಿಳಿದುಕೊಂಡಿರುವವನು ಸಕಲ ದುಃಖಗಳಿಂದ ಮುಕ್ತನಾಗುತ್ತಾನೆ. ಹೀಗೆ ತನ್ನ ಸರ್ವ ಇಚ್ಛೆಗಳನ್ನು ದೈವಾಭೀಷ್ಟಕ್ಕೆ ಅಧೀನವನ್ನಾಗಿ ಮಾಡುವವನು ಆತ್ಮಾನುಸರಣವೆಂಬ ದರ್ಪಣದಲ್ಲಿ ತನ್ನ ಅನುರಾಗ ಪಾತ್ರನಾದ ಕರ್ತನನ್ನು ದರ್ಶಿಸುತ್ತಿದ್ದಾನೋ ಎಂಬಂತೆ, ಹೃದಯ ಶುದ್ಧಿಯಿಂದಲೂ ಉತ್ಸುಕತೆಯಿಂದಲೂ ಸಕಲ ಅಂತಃಶಕ್ತಿಗಳನ್ನು ಸದ್ಧರ್ಮಗಳಲ್ಲಿ ತೊಡಗಿಸುತ್ತಾನೆ. ಆಗ ಅವನ ಇಚ್ಛೆ ದೇವನ ಇಚ್ಛೆಗನುಗುಣವಾಗಿ, ಅವನ ಸರ್ವಾನಂದ ದೇವನ ಇಷ್ಟವನ್ನು ನಿರ್ವಹಿಸುವುದರಲ್ಲಿ ಮಾತ್ರವಾಗಿರುತ್ತದೆ. ಅವನು ಸತ್ಕರ್ಮಗಳನ್ನು ಭಾರವೆಂದು ಬಗೆಯದೆ ಅತೀವ ಉತ್ಸಾಹದಿಂದಲೂ ಸಂತುಷ್ಟಿಯಿಂದಲೂ ಅನುಷ್ಠಿಸುತ್ತಾನೆ. ಎಂದರೆ, ಅವನು ಸದ್ಧರ್ಮಅನುಷ್ಠಾನಕ್ಕೆ ಸರ್ವಾತ್ಮನಾ ಪ್ರಚೋದಿತನಾಗಿರುತ್ತಾನೆ. ಈ ಸ್ಥಿತಿಯು ಆಧ್ಯಾತ್ಮಿಕ ಪಥದಲ್ಲಿ ಸಂಚರಿಸುವ ಮನುಷ್ಯನಿಗೆ ಐಹಿಕ ಜೀವಿತದಲ್ಲಿ ಪ್ರಾಪ್ತವಾಗುವ ಸ್ವರ್ಗವಾಗಿದೆ. ಅವನಿಗೆ ಭಾವೀ ಜೀವಿತದಲ್ಲಿ ಲಭಿಸಲಿಕ್ಕಿರುವ ಸ್ವರ್ಗ ಈ ಸ್ವರ್ಗದ ಪ್ರತಿಬಿಂಬವಾಗಿದೆ. ಇಹದಲ್ಲಿ ಅನುಭವಕ್ಕೆ ಬರುವ ಈ ಆತ್ಮಾನುಭೂತಿಗಳು ದೇವನ ಅಪಾರ ಶಕ್ತಿವೈಭವದಿಂದ ಪಾರತ್ರಿಕ ಜೀವಿತದಲ್ಲಿ ಪ್ರತ್ಯಕ್ಷರೂಪವನ್ನು ಪಡೆಯುತ್ತವೆ. ಇದನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ವ ಲಿಮನ್ ಖಾಫ ಮಕಾಮ ರಬ್ಬಿಹೀ ಜನ್ನತಾನ್" (55:47)- ತನ್ನ ರಕ್ಷಕನಾದ ದೇವನಿಗೆ ಭಯಪಟ್ಟು ಅವನ ಮಹತ್ವವನ್ನೂ ಪ್ರಭಾವವನ್ನೂ ಭಕ್ತಿಯಿಂದ ವೀಕ್ಷಿಸುವವನಿಗೆ ಇಹದಲ್ಲೂ ಪರದಲ್ಲೂ ಎರಡು ಸ್ವರ್ಗಗಳಿವೆ.

"ವ ಸಕಾಹುಂ ರಬ್ಬುಹುಂ ಶರಾಬನ್ ತಹೂರಾ" (76:22)- ದೈವಭಕ್ತಿಯಲ್ಲೂ ಧ್ಯಾನದಲ್ಲೂ ಮಗ್ನರಾಗಿರುವವರಿಗೆ ಅವರ ರಕ್ಷಕನಾದ ದೇವನು ಹೃದಯಗಳನ್ನೂ ವಿಚಾರಗಳನ್ನೂ ಉದ್ದೇಶಗಳನ್ನೂ ಪವಿತ್ರಗೊಳಿಸುವ ಒಂದು ಪಾನೀಯವನ್ನು ಕುಡಿಸುವನು.

"ಇನ್ನಲ್ ಅಬ್ರಾರ ಯಶ್ರಬೂನ ಮಿನ್ ಕಅ್ಸಿನ್ ಕಾನ ಮಿಜಾಜುಹಾ ಕಾಫೂರಾ–ಅಯ್ನ(ನ್)ಯ್ಯಶ್ರಬುಬಿಹಾ ಇಬಾದುಲ್ಲಾಹಿ ಯುಫಜ್ಜಿರೂನಹಾ ತಫ್‌ಜೀರಾ" (76:6,7)– ಸದ್ಧರ್ಮಿಗಳು 'ಕಾಫೂರ್' (ಕರ್ಪೂರ) ಮಿಶ್ರಿತ ಒಂದು ಬಗೆಯ ಪಾನೀಯವನ್ನು ಕುಡಿಯುತ್ತಾರೆ; ತಮ್ಮ ಕೈಗಳಿಂದಲೇ ನಿರ್ಮಿಸಿದ ಬುಗ್ಗೆಯಿಂದ ಅವರು ಪಾನಮಾಡುತ್ತಾರೆ.

ಮೊದಲು ಒಂದೆಡೆ ಪ್ರಸ್ತಾವಿಸಿದಂತೆ, 'ನಿಗ್ರಹಿಸು' ಮತ್ತು 'ಮುಚ್ಚಿಡು' ಎಂದು ಅರ್ಥಕೊಡುವ 'ಕಫರ್' ಎಂಬ ಧಾತುವಿನಿಂದ ಉತ್ಪನ್ನವಾದ 'ಕಾಫೂರ್' ಎಂಬ ಪದ ಈ ವಾಕ್ಯದಲ್ಲಿ ಪ್ರಯೋಗಿಸಲ್ಪಟ್ಟದ್ದು, ಸದ್ಧರ್ಮಿಗಳ ದೈವಾನುರಾಗದ ಮತ್ತು ಆತ್ಮಪರಿತ್ಯಾಗದ ಒಂದು ಪಾನೀಯವನ್ನು ಕುಡಿದುದರಿಂದ ಅವರ ಪ್ರಪಂಚಾನುರಾಗ ಶೀತಲೀಕೃತವಾಗಿ ಅವರ ವಿಷಯಾಸಕ್ತಿಗಳು ನಿಗ್ರಹಿಸಲ್ಪಟ್ಟಿರುತ್ತವೆಯೆಂದು ಸೂಚಿಸಲಿಕ್ಕಾಗಿದೆ; ಉದ್ವೇಗಗಳೆಲ್ಲಾ ಮನಸ್ಸಿನಲ್ಲಿ ಹುಟ್ಟುತ್ತವಷ್ಟೆ. ಒಟ್ಟಿನಲ್ಲಿ, ಹೃದಯವು ಅನುಚಿತ ವಿಚಾರಗಳಿಂದ ದೂರವಿದ್ದುಕೊಂಡಾಗ ವಿಷಯಾಸಕ್ತಿಗಳು ಕ್ರಮೇಣ ಕಮ್ಮಿಯಾಗಿ ಕೊನೆಗೊಳ್ಳುತ್ತವೆ. ಪೂರ್ಣರೀತಿಯಲ್ಲಿ ದೇವನಿಗಾಗಿ ಆತ್ಮಾರ್ಪಣೆ ಮಾಡುವವರು ವಿಷಯಾಸಕ್ತಿಗಳಿಂದ ದೂರವಾಗುತ್ತಾರೆಂದು ಈ ಖುರ್‌ಆನ್ ವಾಕ್ಯದಿಂದ ತಿಳಿದುಬರುತ್ತದೆ. ಒಟ್ಟಾರೆ, ದೇವನೆಡೆಗೆ ಪೂರ್ಣವಾಗಿ ಬಾಗಿ ಅವನ ಆಶ್ರಯವನ್ನು ಮಾತ್ರ ಕೋರುವ ಸದ್ಧರ್ಮಿಗಳ ವಿಕಾರಾಗ್ನಿ ತಣ್ಣಗಾಗಿ, ಕರ್ಪೂರದಿಂದ ವಿಷಾಣುಗಳು ದಮನಿಸಲ್ಪಡುವಂತೆ ಅವರ ವಿಷಯಾಸಕ್ತಿಗಳು ನಿಗ್ರಹಿಸಲ್ಪಡುತ್ತವೆ.

ಮೇಲಿನ ವಾಕ್ಯಗಳ ಅನುಬಂಧವಾಗಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

“ವ ಯುಸ್‌ಕೌನ ಫೀಹಾ ಕಅ್‌ಸನ್ ಕಾನ ಮಿಜಾಜುಹಾ ಜನ್‌ಜಬೀಲಾ” (76:18) – (ಕರ್ಪೂರ ಪಾನೀಯದನಂತರ) ‘ಜನ್‌ಜಬೀಲ್’ ಅಥವಾ ಶುಂಠಿ ಮಿಶ್ರಿತ ಪಾನೀಯವನ್ನು ಅವರಿಗೆ ಕುಡಿಸಲಾಗುವುದು.

ಈ ವಾಕ್ಯದ ‘ಜನ್‌ಜಬೀಲ್’ ಎಂಬ ಪದ ‘ಜನಅ’ ಮತ್ತು ‘ಜಬಲ್’ ಎಂಬ ಪದಗಳುಳ್ಳ ಸಂಯುಕ್ತ ಶಬ್ದವೆಂಬುದು ಗಮನೀಯವಾಗಿದೆ. ಅರಬಿ ಭಾಷೆಯಲ್ಲಿ ‘ಜನಅ’ ಎಂಬ ಪದಕ್ಕೆ ‘ಮೇಲೇರು’ ಎಂದೂ ‘ಜಬಲ್’ ಎಂಬ ಪದಕ್ಕೆ ‘ಪರ್ವತ’ ಎಂದೂ ಅರ್ಥ. ಆಗ ‘ಜನ್‌ಜಬೀಲ್’ ಎಂಬ ಸಂಯುಕ್ತ ಪದಕ್ಕೆ ‘ಪರ್ವತವನ್ನೇರು’ ಎಂದು ಅರ್ಥವಾಯಿತು. ವಿಷರೋಗ ಬಾಧಿಸಿದ ಓರ್ವನಿಗೆ ಪೂರ್ಣಾರೋಗ್ಯ ಪ್ರಾಪ್ತವಾಗುವುದರೆಡೆಯಲ್ಲಿ ಎರಡು ಅವಸ್ಥೆಗಳನ್ನು ದಾಟಿಬರಬೇಕಾಗಿದೆ. ಒಂದನೆಯ ಘಟ್ಟದಲ್ಲಿ ವಿಷಾಣುಗಳ ಹರಡುವಿಕೆ ತಡೆಯಲ್ಪಟ್ಟು ರೋಗದ ತೀವ್ರತೆ ಕಮ್ಮಿಯಾಗಿ ಅಪಾಯಸ್ಥಿತಿ ದೂರವಾಗುವುದು. ಹೀಗೆ ಆರೋಗ್ಯವನ್ನು ಅಪಾಯಕ್ಕೀಡುಮಾಡುವ ರೀತಿಯಲ್ಲಿ ಶಕ್ತಿಯುತವಾಗಿ ಮೇಲೇರಿದ ವಿಷವ್ಯಾಧಿಯಾದ ಆ ಬಿರುಗಾಳಿ ಶಮನಗೊಳ್ಳುವುದಾದರೂ, ತತ್ಫಲವಾಗಿ ಉಂಟಾದ ಬಲಹೀನತೆ ಅವನಲ್ಲಿ ಬಾಕಿಯಾಗುತ್ತದೆ. ಶಕ್ತಿ ಪ್ರಯೋಗಿಸುವ ಯಾವುದೇ ಕೆಲಸ ಅವನಿಂದ ಮಾಡಲಸಾಧ್ಯವಾಗುತ್ತದೆ. ಬಲಹೀನತೆಯ ಕಾರಣದಿಂದ ಅವನು ಜೀವಚ್ಛವದಂತೆ ಏಳುತ್ತಾ ಬೀಳುತ್ತಾ, ನಡೆಯುತ್ತಾನೆ. ಆದರೆ ಎರಡನೆಯ ಘಟ್ಟದಲ್ಲಿ ಅವನಿಗೆ ಪೂರ್ವ ಆರೋಗ್ಯ ಪ್ರಾಪ್ತಿಯಾಗಿ ದೇಹ ಬಲಯುತವಾಗುತ್ತದೆ. ಹೀಗೆ ಶಕ್ತಿ ಪೂರ್ವಸ್ಥಿತಿಯನ್ನು ಪಡೆಯುವುದರೊಂದಿಗೆ ಅವನಿಗೆ ನಿರಾತಂಕವಾಗಿ ಪರ್ವತಗಳನ್ನೇರಲಿಕ್ಕೂ ಉತ್ಸಾಹಭರಿತನಾಗಿ ಅತ್ತಿಂದಿತ್ತ ಓಡಾಡಲಿಕ್ಕೂ ಧೈರ್ಯ ಬರುತ್ತದೆ. ಹೀಗಿರುವ ಒಂದು ಪರಿಸ್ಥಿತಿ ಮೂರನೆಯ ಸಂಸ್ಕರಣ ಘಟ್ಟವಾದ ಆಧ್ಯಾತ್ಮಿಕ ಸ್ಥಿತಿಯಲ್ಲಿ ಅನುಭವಾಗುತ್ತದೆ. ಈ ಸ್ಥಿತಿಯನ್ನು ಉದ್ದೇಶಿಸಿ ಮೇಲೆ ಉದ್ಧರಿಸಲಾದ ವಾಕ್ಯದಲ್ಲಿ. ಉತ್ಕೃಷ್ಟ ಸ್ಥಾನ ಗಳಿಸಿದ ದೈವಭಕ್ತರಿಗೆ ‘ಜನ್‌ಜಬೀಲ್’(ಶುಂಠಿ) ಮಿಶ್ರಿತವಾದ ಒಂದು ಪಾನೀಯ ನೀಡಲಾಗುವುದೆಂದು ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದೆ. ಎಂದರೆ. ಸಂಪೂರ್ಣ ಆತ್ಮಶಕ್ತಿಗಳಿಸಿ ಅವರು ಉನ್ನತ ಪರ್ವತ ಪ್ರದೇಶಗಳನ್ನೇರುತ್ತಾರೆ; ಕ್ಲಿಷ್ಟ ಕಾರ್ಯಗಳನ್ನು ಅವರು ಸಾಧಿಸುತ್ತಾರೆ; ಮತ್ತು ದೈವಥದಲ್ಲಿ ವಿಸ್ಮಯಕರವಾದ ತ್ಯಾಗಕರ್ಮಗಳನ್ನು ನಿರ್ವಹಿಸುತ್ತಾರೆ.

ವೈದ್ಯಶಾಸ್ತ್ರದ ಪ್ರಕಾರ ‘ಜನ್‌ಜಬೀಲ್’ (ಶುಂಠಿ) ಜಠರಾಗ್ನಿಯನ್ನು ಉತ್ತೇಜನಗೊಳಿಸಲಿಕ್ಕೂ ಅತಿಸಾರವನ್ನು ತಡೆಯಲಿಕ್ಕೂ ಉಪಯುಕ್ತವಾದ ಔಷಧಿಯಾಗಿದೆ. ‘ಜನ್‌ಜಬೀಲ್’ ಎಂಬ ಹೆಸರೇ ಅವರ ವಿಶಿಷ್ಟ ಗುಣವನ್ನು ಸೂಚಿಸುತ್ತದೆ. ಹೇಗೆಂದರೆ. ಅದು ಬಲಹೀನನಾದವನ ದೇಹಕ್ಕೆ ಶಕ್ತಿಯನ್ನೂ ಶಾಖವನ್ನೂ ನೀಡಿ ಅವನನ್ನು ಪರ್ವತವನ್ನೇರಲಿಕ್ಕೆ ಸಹ ಶಕ್ತನನ್ನಾಗಿ ಮಾಡುತ್ತದೆ. ‘ಕಾಫೂರ್’ ಮತ್ತು ‘ಜನ್‌ಜಬೀಲ್’ ಇವೆರಡರ ಕುರಿತು ಪ್ರಸ್ತಾವಿಸುವ ಮೇಲೆ ಉದ್ಧರಿಸಲಾದ ಎರಡು ಖುರ್‌ಆನ್ ವಾಕ್ಯಗಳು, ಮನುಷ್ಯನು ಭೋಗಜೀವಿತದಿಂದ ಸದ್ಧರ್ಮದೆಡೆಗೆ ಸಾಗಿಬರಲು ದಾಟಬೇಕಾದ ಎರಡು ಅವಸ್ಥೆಗಳನ್ನು ಸೂಚಿಸುತ್ತವೆ. ಪ್ರಗತಿಯೆಡೆಗೆ ಸಾಗಲು ಅವನು ಪ್ರಥಮವಾಗಿ ಮಾಡುವ ಚಟುವಟಿಕೆಯ ನಂತರ ಉಂಟಾಗುವ ಒಂದನೆಯ ಘಟ್ಟದಲ್ಲಿ ವಿಷಬೀಜಗಳು ನಾಶವಾಗಿ ವಿಷಯೋದ್ವೇಗಗಳು ತಣ್ಣಗಾಗುತ್ತವೆ. ಇದು ‘ಕಾಫೂರ್’ ಪಾನೀಯದ ಘಟ್ಟವಾಗಿದೆ. ಕರ್ಪೂರ ವಿಷಹರ ಔಷಧವಾದುದರಿಂದ ಅದು ಕೊಲೆರಾ, ವಿಷಮ ಜ್ವರ ಮೊದಲಾದ ವ್ಯಾಧಿಗಳಿಗೆ ಬಹಳ ಉಪಯುಕ್ತವಾಗಿದೆ. ಒಟ್ಟಾರೆ, ಈ ಘಟ್ಟದಲ್ಲಿ ವಿಷಸಂಕ್ರಮ ತಡೆಯಲ್ಪಟ್ಟು ರೋಗ ಉಪಶಮನಗೊಳ್ಳುವುದಾದರೂ ರೋಗಿಯ ಬಲಹೀನತೆ ಮತ್ತು ಆಯಾಸ ಇಲ್ಲದಾಗುವುದಿಲ್ಲ. ಆದರೆ ಎರಡನೆಯ ಘಟ್ಟದಲ್ಲಿ ಅವನು ‘ಜನ್‌ಜಬೀಲ್’ ಪಾನೀಯದಿಂದ ಶಕ್ತಿ ಹೊಂದುತ್ತಾನೆ. ‘ಜನ್‌ಜಬೀಲ್’ ಪಾನೀಯ ಸರ್ವಶಕ್ತನಾದ ದೇವನ ಸೌಂದರ್ಯ ಮಹಿಮಾತಿಶಯಗಳ ಪ್ರಕಟನೆಯಾಗಿದೆ. ಆತ್ಮದ ಆಹಾರವಾದ ಈ ಪ್ರಕಟನೆಯಿಂದ ಶಕ್ತಿಶಾಲಿಯಾಗುವ ವ್ಯಕ್ತಿ ಆತ್ಮೋನ್ನತಿಗಳಿಗೇರಲಿಕ್ಕೂ ದೈವಮಾರ್ಗದಲ್ಲಿ ಮಹತ್ತರವಾದ ತ್ಯಾಗಗಳನ್ನು ಮಾಡಲಿಕ್ಕೂ ಪ್ರಾಪ್ತನಾಗುತ್ತಾನೆ. ದೈವಾನುರಾಗವೆಂಬ ಅಗ್ನಿ ಹೃದಯಾಂತರಾಳದಲ್ಲಿ ಹುದುಗಿರುವ ವಿನಾಃ ಒಬ್ಬನಿಗೆ ಆ ರೀತಿಯ ತ್ಯಾಗಗಳನ್ನು ಮಾಡುವರೆ ಅಸಾಧ್ಯ. ಈ ಎರಡು ವಿಧ ಅಧ್ಯಾತ್ಮ ಸ್ಥಿತಿಗಳನ್ನು ತಿಳಿಸಿಕೊಡುವುದಕ್ಕಾಗಿ “ನಿಗ್ರಹಿಸುವ” ಮತ್ತು “ಮೇಲೇರಲಿಕ್ಕೆ ಶಕ್ತಿ ನೀಡುವ” ಎಂದು ಅನುಕ್ರಮವಾಗಿ ಅರ್ಥಕೊಡುವ “ಕಾಫೂರ್” ಮತ್ತು “ಜನ್‌ಜಬೀಲ್” ಎಂಬ ಎರಡು ಪದಗಳು ಖುರ್‌ಆನಿನಲ್ಲಿ ಪ್ರಯೋಗಿಸಲ್ಪಟ್ಟಿವೆ.

ಖುರ್‌ಆನಿನಲ್ಲಿ ಇನ್ನೂ ಹೀಗೆ ಹೇಳಲಾಗಿದೆ: "ಇನ್ನಾ ಅಅ್‌ತದ್ನಾ ಲಿಲ್‌ಕಾಫಿರೀನ ಸಲಾಸಿಲ ವ ಅಗ್‌ಲಾಲನ್‌ವ್ವಸಈರಾ" (76:5) – ಸತ್ಯವನ್ನು ಸ್ವೀಕರಿಸದವರಿಗೆ ಶೃಂಖಲೆಗಳನ್ನೂ ಕಂಠಪಾಶಗಳನ್ನೂ ಜ್ವಲಿಸುವ ಅಗ್ನಿಯನ್ನೂ ನಾವು ಸಿದ್ಧಪಡಿಸಿದ್ದೇವೆ.

ಈ ವಾಕ್ಯ ಸೂಚಿಸುವುದೇನೆಂದರೆ, ನಿಷ್ಕಳಂಕ ಮನಸ್ಸಿನಿಂದ ದೇವನನ್ನು ಹುಡುಕದವರು, ದೈವಿಕ ನಿಯಮಾನುಸಾರ ತಕ್ಕ ಪ್ರತಿಕ್ರಿಯೆಗೆ ಗುರಿಯಾಗುತ್ತಾರೆ, ಅವರು ಶೃಂಖಲೆಗಳಿಂದ ಬಂಧಿಸಲ್ಪಟ್ಟವರಂತೆ ಲೌಕಿಕ ವಿಚಾರಗಳಲ್ಲೇ ಮಗ್ನರಾಗಿಯೂ ಕಂಠಪಾಶದಿಂದ ಬಿಗಿಯಲ್ಪಟ್ಟವರಂತೆ ಶಿರಸ್ಸುಗಳು ಮೇಲಕ್ಕೆತ್ತಲು ಅಸಾಧ್ಯವಾದ ರೀತಿಯಲ್ಲಿ ಭೌತಿಕ ವಿಚಾರಗಳಲ್ಲೇ ನಿರತರಾಗಿಯೂ ಧನ ಸಂಪಾದನೆ, ಸ್ವತ್ತುಗಳನ್ನು ಸ್ವಾಧೀನಪಡಿಸುವುದು, ವಿರೋಧಿಗಳನ್ನು ಜಯಿಸುವುದು ಮುಂತಾದ ವಿಷಯಾಸಕ್ತಿಗಳಿಂದ ತಪ್ತರಾಗಿರುತ್ತಾರೆ. ಹೀಗೆ ಅವರು ಕೆಟ್ಟ ವಿಚಾರಗಳಲ್ಲಿ ಮಗ್ನರಾಗಿಯೂ ಉತ್ಕೃಷ್ಟ ಕರ್ಮಗಳಿಗೆ ಅನರ್ಹರಾಗಿಯೂ ಕಾಣಲ್ಪಡುವ ಕಾರಣ ಅವರಿಗೆ ದೇವನು ಈ ಮೇಲೆ ಹೇಳಿದ ಮೂರು ವಿಧ ವ್ಯಥೆಗಳನ್ನು ವಿಧಿಸಿದ್ದಾನೆ. ಮನುಷ್ಯನು ಗೈಯ್ಯುವ ಪ್ರತಿಯೊಂದು ಕ್ರಿಯೆಗೆ ಪ್ರತಿಯಾಗಿ ದೇವನು ಸಹ ಒಂದು ಕ್ರಿಯೆ ಪ್ರಕಟಿಸುತ್ತಾನೆ ಎಂಬುದರ ಒಂದು ಸೂಚನೆ ಸಹ ಇಲ್ಲಿ ಅಂತರ್ಗತವಾಗಿದೆ. ಉದಾಹರಣೆಗಾಗಿ, ಒಬ್ಬನು ತನ್ನ ಕೋಣೆಯ ಬಾಗಿಲುಗಳನ್ನೆಲ್ಲಾ ಮುಚ್ಚುವ ಪಕ್ಷದಲ್ಲಿ ಆ ಕೋಣೆಯಲ್ಲಿ ಕತ್ತಲೆ ವ್ಯಾಪಿಸುವಂತೆ ಮಾಡುವುದು ದೇವನ ಕ್ರಿಯೆಯಾಗಿದೆ. ನಮ್ಮ ಪ್ರತಿಯೊಂದು ಕ್ರಿಯೆಗೂ ಅನಿವಾರ್ಯಫಲವೆಂಬಂತೆ ದೇವನು ನಿಸರ್ಗ ನಿಯಮದಲ್ಲಿ ನಿಶ್ಚಯಿಸಿದ ಕಾರ್ಯವೆಲ್ಲಾ ಯಥಾರ್ಥದಲ್ಲಿ ಕಾರ್ಯಕಾರಣಕರ್ತನಾದ ದೇವನ ಪ್ರಕ್ರಿಯೆಯಾಗಿದೆ. ಒಬ್ಬನು ವಿಷ ಸೇವಿಸಿದರೆ, ಅದರ ಅನಿವಾರ್ಯ ಫಲವೆಂಬಂತೆ ದೇವನು ಮರಣ ಸಂಭವಿಸುವಂತೆ ಮಾಡುತ್ತಾನೆ. ಇದೇ ಪ್ರಕಾರ, ಸಾಂಕ್ರಮಿಕ ರೋಗ ಬಾಧಿಸಲು ಹೇತುವಾಗುವ ಒಂದು ದೋಷವನ್ನು ಒಬ್ಬನು ಮಾಡುವನಾದರೆ, ಅವನ ಆ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಅವನಿಗೆ ಆ ರೋಗ ಬಾಧಿಸುವಂತೆ ಮಾಡುವುದು ನಿಯತಿ ಕ್ರಿಯೆಯಾಗಿದೆ. ಹೀಗೆ ನಮ್ಮ ಐಹಿಕ ಜೀವಿತದಲ್ಲಿ ನಮ್ಮ ಪ್ರತಿಯೊಂದು ಕ್ರಿಯೆಗೂ ಅನಿವಾರ್ಯವಾದ ಪ್ರತಿಯೊಂದು ಫಲವನ್ನು ನಾವು ಕಾಣುತ್ತಿದ್ದೇವಷ್ಟೇ. ಆ ಫಲವೇ ದೈವಕ್ರಿಯೆ. ಅಧ್ಯಾತ್ಮಿಕ ವಿಷಯದಲ್ಲೂ ಇದೇ ನಿಯಮವಾಗಿದೆ. ಈ ವಿಚಾರವನ್ನು ಪವಿತ್ರ ಖುರ್ ಆನ್ ಎರಡು ಉದಾಹರಣೆಗಳಿಂದ ವಿಶದೀಕರಿಸುತ್ತದೆ. ಅದು ಹೀಗೆ ಹೇಳುತ್ತದೆ:

"ವಲ್ಲದೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ" (29:70) – ಯಾರು ನಮ್ಮನ್ನು ಪಡೆಯಲು ಪೂರ್ಣವಾಗಿ ಯತ್ನಿಸುತ್ತಾರೋ, ಅವರ ಆ ಪ್ರಯತ್ನದ ಅನಿವಾರ್ಯ ಫಲವಾಗಿ ಅವರನ್ನು ನಾವು ನಮ್ಮ ದಾರಿಗಳಲ್ಲಿ ನಡೆಸುವೆವು.

"ಫಲಮ್ಮಾ ಜಾಗೂ ಅಜಾಗಲ್ಲಾಹು ಕುಲೂಬಹುಂ" (61:6) – ಯಾರು ವಕ್ರತೆಯನ್ನು ಕೈಗೊಂಡು ನೇರ ಮಾರ್ಗದಲ್ಲಿ ನಡೆಯದಿರುತ್ತಾರೋ, ಅವರ ಹೃದಯಗಳನ್ನು ನಾವು ವಕ್ರತೆಯುಳ್ಳದ್ದಾಗಿ ಮಾಡುವೆವು.

ಈ ವಿಷಯವನ್ನು ಹೆಚ್ಚು ಸ್ಪಷ್ಟಪಡಿಸಲಿಕ್ಕೋಸ್ಕರ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಮನ್ ಕಾನ್ ಫೀ ಹಾದಿಹೀ ಅಅ್‌ಮಾ ಫಹುವ ಫಿಲ್ ಆಖಿರತಿ ಅಅ್‌ಮಾ ವ ಅಲಲ್ಲು ಸಬೀಲಾ" (17:73)—ಯಾವನು ಇಹದಲ್ಲಿ ಅಂಧನಾಗಿರುವನೋ ಅವನು ಪರದಲ್ಲೂ ಅಂಧನಾಗುವನು. ಅಷ್ಟೇ ಅಲ್ಲ, ಅವನು ಅಂಧನಿಗಿಂತ ಅಧಿಕ ಅಂಧನಾಗುವನು.

ಯಥಾರ್ಥ ಭಕ್ತರು ಐಹಿಕ ಜೀವಿತದಲ್ಲೇ ದೇವನ ದರ್ಶನವನ್ನು ಪಡೆಯುತ್ತಾರೆಂದೂ ಅವರು ಸರ್ವಸ್ವವನ್ನು ತ್ಯಜಿಸಿ ಹೃದಯಪೂರ್ವಕ ಇಚ್ಛಿಸಿದ ಅವರ ಅನುರಾಗ ಪಾತ್ರನಾದ ದೇವನು ತನ್ನ ಮಹತ್ತಾದ ಪ್ರಭಾವದಿಂದ ಇಹದಲ್ಲೇ ಅವರಿಗೆ ಪ್ರತ್ಯಕ್ಷನಾಗುವನೆಂದೂ ಈ ಮೇಲಿನ ಖುರ್‌ಆನ್ ವಾಕ್ಯ ಸ್ಪಷ್ಟವಾಗಿ ಸೂಚಿಸುತ್ತದೆ. ಸಂಕ್ಷಿಪ್ತವಾಗಿ, ಸ್ವರ್ಗೀಯ ಜೀವಿತಕ್ಕೆ ಇಹದಲ್ಲೇ ತಳಪಾಯ ಹಾಕಲಾಗುವುದೆಂದೂ ನಾರಕ ಅಂಧಜೀವಿತ ಐಹಿಕ ಅಶುದ್ಧಿ ಮತ್ತು ಆಧ್ಯಾತ್ಮಿಕಾಂಧತೆಯಿಂದ ಕೂಡಿದ ಜೀವಿತದಿಂದ ರೂಪುಗೊಳ್ಳುವುದೆಂದೂ ಪ್ರಸ್ತುತ ದೈವವಾಕ್ಯ ಸೂಚಿಸುತ್ತದೆ.

(ಮುಂದುವರಿಯುವುದು)

**Statement about the ownership and other particulars about newspaper**
**YUGARASHMI**
**FORM IV (See Rule 8)**

| | | |
|---|---|---|
| 1 | Place of Publication | Mangalore |
| 2 | Periodicity of its Publication | Quarterly |
| 3 | Printers' Name | U. Ramesh Anchan |
| | Whether Citizen of India? | Yes |
| | Address | Karavali Printers Azizuddin Road, Mangalore-575001 |
| 4 | Publisher's Name | Muhammed Yusuf |
| | Whether Citizen of India? | Yes |
| | Address | 23/1008, Ansari Road, Bunder, M'lore-1. |
| 5 | Editors Name | Muhammed Yusuf |
| | Whether Citizen of India? | Yes |
| | Address | 23/1008, Ansari Road, Bunder, M'lore-1. |
| 6 | Names and address of individuals who own the newspaper and Partners or share holders holding more than one per cent of the total capital | Jamath Ahmadiyya. 23/1008, Ansari Road. Bunder, Mangalore-575 001. |

I, Muhammed Yusuf hereby declare that the particulars given above are true to the best of my knowledge and belief.

Date 31—3 –1980 (Sd.) Muhammad Yusuf

# Ahmadiyya Urdu Literature

1 Ahmadiyyat Ka Paigham
2 Imam Mahdi Ka Zuhoor
3 Sadakat Hazrat Masih Mauwood
4 Silsila Nubuwwat Allah Ka Abdi Ahd Hai
5 Khatamunnabiyyeen
6 Zuroorath-e-Mazhab
7 Al-Hujjathul Baligha
8 Kya Huzrat Masih Nasiree Zinda Hein?
9 Hamari Ta'leem
10 Wafat Hazrat Masih Par Ulamaye Misr Ka Fatawe

**Will be sent free**

Apply with 25 paise stamp for each book to:

**The Editor, Yugarashmi Kannada Quarterly,**
23/1008, Ansari Road.
Bunder. MANGALORE-575 001.


Regd. with the Registrar of Newspapers for India. Regd. No. R. N. 27354/75

**YUGARASHMI Kannada Quarterly, March 1980 / Aman 1359**

# ENGLISH TRANSLATION OF THE HOLY QURAN

## WITH

# ARABIC TEXT & EXTENSIVE INDEX




**Price:**

**Rs. 15-00**

**Postal Charge Extra**

WRITE TO:

**NAZIR DAWAT-O-TABLIGH**

QADIAN (PUNJAB) – 143516

Edited and Published by Muhammad Yusuf on behalf of Jamath Ahmadiyya Mangalore at 23/1008 Ansari Road, Bunder, Mangalore-575001.
Printed at Karavali Printers, Azizuddin Road, Mangalore-575001.